ಆಗ ಎಷ್ಟೊಂದು ಆಟವಾಡಿಸಿಬಿಟ್ಟರು ಎಂಬುದು ನಿಮಗೇ ಗೊತ್ತಿದೆ. ನಾವು ಆ ತರಹ ಹೌಸನ್ನು ಹೋಲ್ಡ್ ಮಾಡುವುದಕ್ಕೆ ಹೋಗದೇ ಹೋದರೂ, ನಮ್ಮ ಬಗ್ಗೆ ಏನು ಅಭಿಪ್ರಾಯ ಬರುತ್ತದೆ ಅಧ್ಯಕ್ಷರೇ. ಆದ್ದರಿಂದ, ನಾವು ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಅಧ್ಯಕ್ಷರಿಗೆ ಅಪೀಲು ಮಾಡುವುದನ್ನು ಬಿಟ್ಟು ನಮಗೆ ಏಕೆ ತಂದು ಚುಚ್ಚಿಸುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮಗೆ ಚುಚ್ಚುವುದೇ ನಮ್ಮ ಕೆಲಸ. ಇಲ್ಲದೇ ಹೋದರೆ ಎಲ್ಲಿ ಆಗುತ್ತದೆ. ಆದ್ದರಿಂದ ಇವತ್ತು ಜಳಕಿ ಫೈರಿಂಗ್ ವಿಚಾರದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ. ಇದರ ಬಗ್ಗೆ ನಾವೇನು ಹೇಳಬೇಕೆಂದಿದ್ದೇವೋ ಅದನ್ನೆಲ್ಲಾ ಹೇಳುತ್ತೇವೆ. ಸರ್ಕಾರ ಉತ್ತರ ಕೊಡುತ್ತದೆ. ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ನಾವು ಹೇಳುವುದರಿಂದ ಸರ್ಕಾರದವರಿಗೇ ಉಪಯೋಗವಾಗುತ್ತದೆ. ಮುಂದೆ ಇದು ರಿಪೀಟ್ ಆಗದ ಹಾಗೆ ನೋಡಿಕೊಳ್ಳಬಹುದು.

ಅಧ್ಯಕ್ಷರು : ಆಯಿತು, ನನಗೆ ಸಮಯ ಕೊಡಿ. ನಾಳೆ ಕೊಡುತ್ತೇನೆ. ಈಗ ಬರದ ಬಗ್ಗೆ ಇವತ್ತು ಮುಕ್ತಾಯ ಮಾಡೋಣ. ನಾಳೆ ಡಿಮ್ಯಾಂಡ್ ಬಗ್ಗೆ ತೆಗೆದುಕೊಳ್ಳೋಣ. ಇಲ್ಲಿ ಬೇರೆ ಸದಸ್ಯರಿಗೆ ಅವಕಾಶವಿಲ್ಲವೆಂದಲ್ಲ. ಬೇಕಾದಷ್ಟು ವಿಷಯಗಳು ಇವೆಯಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಿನ್ನೆಯದಿನ ಮಾನ್ಯಮುಖ್ಯಮಂತ್ರಿಗಳು ಪತ್ರಿಕಾಕರ್ತರ ಜೊತೆಯಲ್ಲಿ ಮಾತನಾಡತಕ್ಕ ಸಮಯದಲ್ಲಿ, ವಿರೋಧಪಕ್ಷದವರು ಸುಸ್ತ್ ಆಗುವವರೆಗೂ ನಾನು ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ ಮತ್ತು ಕೇಳುವುದಕ್ಕೆ ತಯಾರಿದ್ದೇನೆಂದು ಹೇಳಿದ್ದಾರೆ. ಅವರೇ ಆ ರೀತಿ ಹೇಳುವುವಾಗ ನಮ್ಮ ಸಂಸದೀಯ ವ್ಯವಹಾರಗಳ ಮಂತ್ರಿಗಳಗೆ ಏನು ಅಡ್ಡಿ ಎಂಬುದು ನನಗೆ ಅರ್ಥವಾಗುತ್ತಾ ಇಲ್ಲ ಇದರ ಬಗ್ಗೆ ಚರ್ಚೆಯಾಗಿದ್ದರೆ ಏನು ಆಗುತ್ತಿತ್ತು?

ಅಧ್ಯಕ್ಷರು: ಇವತ್ತು ಮುಗಿಸಿ, ನಾಳೆಯಿಂದ ಡಿಮ್ಯಾಂಡ್ ತೆಗೆದುಕೊಳ್ಳೋಣ. ಬೇರೆ ಸದಸ್ಯರೂ ಕೂಡ ಬೇರೆ ಬೇರೆ ಡಿಮ್ಯಾಂಡ್‌ಗಳ ಮೇಲೆ ಮಾತನಾಡಲಿ. ಇವತ್ತು ಎಲ್ಲಾ ತಾಲ್ಲೂಕುಗಳಲ್ಲೂ ಬರ ಇಲ್ಲವಲ್ಲ. ಪ್ರತಿಯೊಬ್ಬರೂ ಬರದ ಮೇಲೆಯೇ ಮಾತನಾಡು -ವುದಕ್ಕಾಗುತ್ತದೆಯೇ? ನಿಮ್ಮ ನಾಯಕರು ಮತ್ತು ಇನ್ನೂ ಕೆಲವರು ಮಾತನಾಡುತ್ತಾರೆ. ನೀವೂ ಕೂಡ ಆ ರೀತಿ ಮಾತನಾಡಿ. ಈ ವಿಷಯವನ್ನು ಇವತ್ತು ಮುಗಿಸಿ ಸರ್ಕಾರದಿಂದಲೂ ಉತ್ತರವನ್ನು ತೆಗೆದುಕೊಂಡು ನಾಳೆಯಿಂದ ಇಲಾಖೆಗಳ ಬಗ್ಗೆ ಚರ್ಚೆಗೆ ಹೋಗೋಣ.

5. ನಿಯಮ 69ರ ಮೇರೆಗೆ ರಾಜ್ಯದಲ್ಲಿ ಮುಂಗಾರು ಮಳೆಯ ಅಭಾವದಿಂದಾಗಿ ಉಂಟಾಗಿರುವ ಬರಗಾಲ ಪರಿಸ್ಥಿತಿಯ ಬಗ್ಗೆ :-

ಶ್ರೀ ಬಿ.ಆರ್.ಯಾವಗಲ್ (ನರಗುಂದ) : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಬಂದಂಥ ಬರದ ಜಳ ಎಲ್ಲರಿಗೂ ಬಡಿಯುತ್ತಾ ಇದೆ. ಮೊದಲನೇ ದಿವಸವೇ ಮಾನ್ಯ ವಿರೋಧಪಕ್ಷದವರು ಈ ಬಗ್ಗೆ ಬಹಳ ಗಂಭೀರವಾಗಿ ಪ್ರಸ್ತಾಪ ಮಾಡಿದ್ದಾರೆ. ದುರ್ದೈವದಿಂದ ಬರದ ಕರಿನೆರಳು ನಮ್ಮಲ್ಲೂ ಚಾಚುತ್ತಾ ಇದೆ, ಎನ್ನುವಂಥ ಭಯ ನಮ್ಮೆಲ್ಲರನ್ನೂ ಕಾಡುತ್ತಾ ಇದೆ. ಅದು ಮಲೆನಾಡು ಇರಬಹುದು, ಉತ್ತರ ಕರ್ನಾಟಕ ಇರಬಹುದು, ದಕ್ಷಿಣ ಕರ್ನಾಟಕ ಇರಬಹುದು, ಬಹುತೇಕ

ನಮ್ಮ ರಾಜ್ಯದಲ್ಲಿರುವಂಥ ಎಲ್ಲಾ ಜಲಾಶಯಗಳಲ್ಲಿಯೂ ಹಾಗೂ ಬಹಳಷ್ಟು ಮಳೆಯಾಗುತ್ತಿದ್ದಂಥ ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿಯೂ ಕೂಡ ಇವೊತ್ತು ಮಳೆ ಇಲ್ಲದೆ ಬಹಳ ಗಂಭೀರವಾದಂಥ ಕಷ್ಟಕರವಾದಂಥ ಪರಿಸ್ಥಿತಿಯನ್ನು ಎದುರಿಸುತ್ತಾ ಇದ್ದೇವೆ, ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಇದು ಏನಾದರೂ ನಿಜವಾದರೆ, ನಾನು ಪ್ರಾರ್ಥನೆ ಮಾಡುತ್ತೇನೆ ಬರದ ಪರಿಸ್ಥಿತಿ ನಮ್ಮಲ್ಲಿ ಆಗಬಾರದು. ನಮ್ಮಲ್ಲಿ ಚೆನ್ನಾಗಿ ಮಳೆಯಾಗಬೇಕು. ಅಲ್ಪಸ್ವಲ್ಪವಾದರೂ ಮಳೆಯಾಗುವ ಲಕ್ಷಣಗಳೂ ಕೂಡ ಅಲ್ಲಲ್ಲಿ ಇದೆ. ಒಂದು ವೇಳೆ ಮಳೆಯಾಗದಿದ್ದರೆ ಹೋದ ವರ್ಷ ಏನಾಗಿತ್ತು ಅದರ ಹಲವಾರು ಪಟ್ಟು, ಗಂಭೀರ ಪರಿಸ್ಥಿತಿಯನ್ನು ರಾಜ್ಯದ ಜನತೆಯು ಹಾಗೂ ಆಡಳಿತ ಯಂತ್ರ ಮತ್ತು ಸರಕಾರಗಳು ಎದುರಿಸ ಬೇಕಾಗುವಲ್ಲಿ ಎರಡು ಮಾತಿಲ್ಲ. ಹೋದ ವರ್ಷದ ಉದಾಹರಣೆಯನ್ನು ತೆಗೆದುಕೊಂಡರೆ ಮಳೆಯು ಜೂನ್‌ನಲ್ಲಿ, ಜುಲೈನಲ್ಲಿ, ಬರಲಿಲ್ಲ. ಅಗಸ್ಟ್ ಕೊನೆಯಲ್ಲಿ ಬಂತು. ನಮ್ಮ ಭಾಗದಲ್ಲಿ ಮಳೆಯು ಆ ರೀತಿಯಲ್ಲಿ ಅಭಾವ ತಂದಿತು. ನಮ್ಮ ಭಾಗದವರಿಗೆ ಈ ಸ್ಥಿತಿಯು ಸ್ವಲ್ಪಮಟ್ಟಿಗೆ ರೂಢಿಯಾಗಿದೆ. ನಮ್ಮ ಭಾಗವು ಬರಗಾಲದ ಪ್ರದೇಶ ಎಂದು ಆಗಾಗ ಕರೆಯುತ್ತಾರೆ. ಹೀಗಾಗಿ ನೀರಾವರಿ ಯೋಜನೆಗಳನ್ನು ತರುವಲ್ಲಿ ಕೂಡ ಕಾರಣವಾಗಿತ್ತು. ಅದಾಗ್ಯೂ ಹಲವಾರು ವರ್ಷಗಳಿಂದ ಈ ನೀರನ್ನು ಉಪಯೋಗಿಸಿ ಸ್ವಲ್ಪಮಟ್ಟಿಗೆ ಆರ್ಥಿಕವಾಗಿ ಚೇತರಿಸಿಕೊಂಡು ಏಕಾಏಕಿಯಾಗಿ ಮಳೆ ಇಲ್ಲದಂಥ ಪರಿಸ್ಥಿತಿಯನ್ನು ಎದುರಿಸಬೇಕಾದಾಗ ರೈತರು ತಮ್ಮ ಜೀವಮಾನದಲ್ಲಿಯೇ ಬಹುತೇಕ ಒಂದು ವಯಸ್ಸಿನ ಜನರು ಕೆಲಸಕ್ಕೆ ಹೋಗದಿದ್ದ ಜನ ಕೆಲಸಕ್ಕೆ ಹೋಗಿದ್ದನ್ನು ನಾನು ನೋಡಿದ್ದೇನೆ. ಬಹುತೇಕ ಮನೆಗಳಲ್ಲಿದ್ದಂಥ ದನಕರುಗಳನ್ನು, ಮನೆಕೆಲಸಗಳನ್ನು ಬಿಟ್ಟು ದನಗಳನ್ನು ಹೊರಗಡೆ ಕಟ್ಟಿ, ಯಾರೋ ಇದ್ದವರಿಗೆ ಅವುಗಳನ್ನು ನೋಡಲು ಹೇಳಿ, ಮನೆಯಲ್ಲಿದ್ದವರು ಎಲ್ಲರೂ ಹೊರಬಂದು ಕಾಳು, ಕೂಲಿ ತೆಗೆದುಕೊಂಡು ಜೀವನ ಮಾಡುವಂಥ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಹೀಗೆ ಪ್ರಾರಂಭವಾಗಿ ಕೊನೆ ಕೊನೆಗೆ ನಮ್ಮ ಪರಿಸ್ಥಿತಿಯು ಕೈಮೀರಿ ಹೋಗುವಂತಾಗಿತ್ತು. ಕಾಯಿದೆ ಸುವ್ಯವಸ್ಥೆ ಕೂಡ ಹದಗೆಡುವ ಪರಿಸ್ಥಿತಿ ಬಂತು ಎನ್ನುವಾಗ ಸುದೈವವಶಾತ್ ಮಳೆ ಬಂತು. ಹಾಗಾಗಿ ಅದು ನಮಗೆ ರೂಢಿಯಾಗಿದೆ. ಸ್ವಲ್ಪಮಟ್ಟಿಗೆ ಬರದ ಅನುಭವಗಳು ನಮಗೆ ಇರುತ್ತಿದ್ದುವು. ಆದರೆ ಯಾವ ಪ್ರದೇಶಗಳಲ್ಲಿ ಅಂದರೆ ಮಲೆನಾಡು ಮುಂತಾಗಿ ಎಲ್ಲಿ ಹೆಚ್ಚು ಮಳೆಯಾಗುತ್ತಿತ್ತು, ಅಲ್ಲಿಯೂ ಕೂಡ ಮಳೆಯು ಆಗದೆ ಬೆಳೆಗಳಿಗೆ ತೊಂದರೆಯಾಗಿ ವಿಶೇಷತಃ ಮೊದಲ ಬಾರಿಗೆ ಕುಡಿಯುವ ನೀರಿಗೂ ತೊಂದರೆಯಾಗಿದ್ದನ್ನು ಅವರು ಕಂಡಿರಲಿಕ್ಕಿಲ್ಲ. ಅಂಥ ಪರಿಸ್ಥಿತಿಯನ್ನು ಎದುರಿಸಿ, ಸರಕಾರವು ಸಾಕಷ್ಟು ಕೆಲಸಕಾರ್ಯಗಳನ್ನು ಮಾಡಿತು. ಜನರಿಗೆ ಕೆಲಸ ಮತ್ತು ಕಾಳುಗಳನ್ನು ಕೊಟ್ಟಿತು, ಜನರಿಗೆ ನೈತಿಕ ಬೆಂಬಲವನ್ನು ಕೊಟ್ಟಿತು. ಪಶುಗಳಿಗೆ ಆಹಾರವನ್ನು ಕೊಟ್ಟಿತು. ಅನೇಕ ವಿಧವಾದ ಸಹಾಯವನ್ನು ಮಾಡಿದ್ದರೂ ಕೂಡ ಸ್ವಾಭಾವಿಕವಾಗಿ ಸೃಷ್ಟಿ ಸಹಕರಿಸಿದರೆ, ಬೆಳೆ ಬೆಳೆದರೆ, ಬೆಳೆ ತನ್ನ ಫಲವನ್ನು ಕೊಟ್ಟರೆ ಯಾವ ರೀತಿ ಆಗುತ್ತದೆ, ಅದಕ್ಕೆ ಪ್ರತಿಕೂಲವಾಗಿ ನಡೆದರೆ ಯಾವ ರೀತಿಯ ಪರಿಸ್ಥಿತಿಯುಂಟಾಗುತ್ತದೆ ಎಂಬುದನ್ನು ಕೂಡ ನಾವು ನೋಡಿದ್ದೇವೆ. ಇವೊತ್ತು ಇನ್ನೂ ಕೂಡ ಕೆಲವುಕಡೆಗಳಲ್ಲಿ ಮಳೆ ಇಲ್ಲ. ಕೆಲವು ಕಡೆಗಳಲ್ಲಿ ಮಳೆಯಾಗಿತ್ತು. ರೋಹಿಣಿ ಮಳೆ ನಮ್ಮಲ್ಲಿ ಅಪರೂಪವಾಗಿ ಬಂದಿತ್ತು. ಅದು ವಿಶೇಷವಾಗಿ ಧಾರವಾಡ, ಗದಗ, ಹಾವೇರಿ ಬೆಳಗಾವಿ ಜಿಲ್ಲೆಗಳಲ್ಲಿ ಅಷ್ಟೋ ಇಷ್ಟೋ ಜೂನ್ ಮೊದಲ ವಾರದಲ್ಲಿ ಮೇ ಕೊನೆಯ ವಾರದಲ್ಲಿ ಮಳೆಯಾಗಿ ರೈತರು ಬಹಳಷ್ಟು ಹರ್ಷತ್ತರಾಗಿದ್ದರು.

ರೋಹಿಣಿ ಮಳೆಯು ಅಪರೂಪಕ್ಕೆ ಆಗಿದೆ. ಹತ್ತಾರು ವರ್ಷಗಳಲ್ಲಿ ಮಳೆ ಆಗಿಲ್ಲ. ಈ ಮಳೆಯಾದರೆ ಜೊತೆಗೆ ಒಂದು ಹೆಚ್ಚು ಬೆಳೆ ಬರುತ್ತದೆ ಅದರಲ್ಲೂ ವಿಶೇಷವಾಗಿ ಅಲ್ಪಕಾಲಾವಧಿ ಬೆಳೆ, ಅದು ಹೆಸರು, ಶೇಂಗಾ, ಮುಂತಾಗಿ ಇರಬಹುದು, ಅದರಲ್ಲಿಯೂ ಹೆಸರು ಒಂದೂವರೆ ತಿಂಗಳಲ್ಲಿ ಬೆಳೆ ಕೊಟ್ಟು ಫಲ ಬಂದ ಮೇಲೆ ಎರಡು ತಿಂಗಳಲ್ಲಿಯೇ ಇನ್ನೊಂದು ಪೀಕನ್ನು ಹಾಕಬಹುದಾದಂಥ ಸನ್ನಿವೇಶ ಉಂಟಾಗುತ್ತದೆ. ಇದು ರೈತರಿಗೆ ಬಹಳ ಅನುಕೂಲವಾದಂಥ ವಿಚಾರವಾಗುತ್ತದೆ. ಇಂಥ ಮಳೆಯಿಂದ ಜನರು ಬಹಳ ಆಶೆ ಪಟ್ಟು ಜನರು ಸುಮಾರು ಒಂದು ಎಕರೆಗೆ 200-300 ರೂಪಾಯಿಗಳಷ್ಟು ಖರ್ಚು ಮಾಡಿ ಬೀಜ ತಂದು ಬಿತ್ತಿದರು. ಆಗ ಒಂದು ರೂಪಾಯಿ ಇದ್ದುದ್ದು ಹತ್ತು ರೂಪಾಯಿಗಳಿಗೆ ಏರುವ ಸನ್ನಿವೇಶ ಕೂಡ ಇತ್ತು. ಅದರೂ ತಮ್ಮಲ್ಲಿದ್ದಂಥ ಸಾಮಾನುಗಳನ್ನು ಒತ್ತೆ ಇಟ್ಟು, ಸಾಲ ಪಡೆದು, ದೊಡ್ಡಬಡ್ಡಿಯ ಸಾಲ ಪಡೆದು, ಗೊಬ್ಬರ, ಕ್ರಿಮಿನಾಶಕಗಳನ್ನು ತಂದರು. ಅಲ್ಪಸ್ವಲ್ಪ ಮಳೆಯಾಗಿ ಆಸೆಯಿಂದ ಭಿತ್ತನೆ ಮಾಡಿದ್ದರು. ಆದರೆ ಇವೊತ್ತು ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ. ಇವೊತ್ತು ಮಳೆ ಬಾರದೆ ಬೆಳೆಗಳು ಒಣಗಿ ಹೋಗುತ್ತಾ ಇವೆ. ಈಗಾಗಲೇ ಮುಕ್ಕಾಲು ಬೆಳೆಯು ನಾಶವಾಗಿದೆ. ಇನ್ನೂ ನಾಲ್ಕಾರು ದಿನಗಳಲ್ಲಿ ಮಳೆಯಾಗದಿದ್ದರೆ ಬೆಳೆಯು ಸಂಪೂರ್ಣವಾಗಿ ನಾಶವಾಗುವ ಸ್ಥಿತಿ ಬರುತ್ತದೆ. ಇವೊತ್ತು ಒಂದು ಕಡೆ ಸ್ವಲ್ಪವಾದರೂ ಮಳೆಯಾಗಿದ್ದರೆ, ಇನ್ನೊಂದು ಕಡೆ ಸ್ವಲ್ಪ ಕೂಡ ಮಳೆಯೂ ಇಲ್ಲದ ಸ್ಥಿತಿ ಇದೆ. ಜಲಾಶಯಗಳು ಬರಿದಾಗಿವೆ. ಹೋದ ವರ್ಷಕ್ಕಿಂತ ಭಿನ್ನವಾದ ಪರಿಸ್ಥಿತಿಯು ಈ ವರ್ಷ ಇಲ್ಲ. ಒಂದು ಕಡೆ ಬೆಳೆಯಿಲ್ಲ ಹೋದ ವರ್ಷ ಮಾತ್ರವಲ್ಲ ಬರುವ ವರ್ಷವೂ ಆಶಾದಾಯಕವಾಗಿಲ್ಲ. ಇವೊತ್ತು ಮಳೆಯಾಗಿ ಸುಮಾರು ಒಂದು ತಿಂಗಳ ವರೆಗೆ ಮಳೆಯ ಲಕ್ಷಣಗಳು ಕೂಡ ಇಲ್ಲದಿರುವುದನ್ನು ನಾವು ನೋಡುತ್ತಾ ಇದ್ದೇವೆ. ಇವೊತ್ತು ಮಿಟಿ ಅರಾಲಜಿಕಲ್ ಡಿಪಾರ್ಟ್‌ಮೆಂಟ್‌ನವರು ಒಂದು ವಾರದಲ್ಲಿ, ಹತ್ತು ದಿನಗಳಲ್ಲಿ ಮತ್ತೆ ಮಳೆ ಬಹಬಹುದು, ಲಕ್ಷಣಗಳು ಹುಟ್ಟಿಕೊಳ್ಳಬಹುದು ಎನ್ನುವಂಥ ಅವರ ಹೇಳಿಕೆಗಳು ನಿಜವಾದುದ್ದಲ್ಲ, ಹಾಗಾಗಿ ನಮಗೆ ಭವಿಷ್ಯವೂ ಆಶಾದಾಯಕವಾಗಿಲ್ಲ. ಆಶಾದಾಯಕವಾದಂಥ ಪರಿಸ್ಥಿತಿ ಕೂಡ ಈಗ ಇಲ್ಲ. ಮುಂದಿನ ಕಲ್ಪನೆಯನ್ನು ನಾವು ನೋಡಿದಾಗ ನಮಗೆ ಹೆದರಿಕೆಯು ಬರುತ್ತಿದೆ. ನಾವೆಲ್ಲಾ ಜನರ ಪ್ರತಿನಿಧಿಗಳಾಗಿ, ಸರಕಾರಗಳಾಗಿ ಜನರುಗಳ ಎದುರುಹೋಗಿ ಅವರನ್ನು ಹೇಗೆ ಎದುರಿಸುವುದು ಎಂಬ ಬಗ್ಗೆ ವಿಚಾರ ಮಾಡಬೇಕಾಗಿದೆ. ಜನರಿಗೆ ಕೆಲಸ ಕೊಡಬೇಕು, ಕುಡಿಯುವ ನೀರು ಕೊಡಬೇಕು, ದನಗಳಿಗೆ ಆಹಾರವನ್ನು ಕೊಡಬೇಕು. ಇಂಥ ಒಂದು ಸನ್ನಿವೇಶವನ್ನು, ಸ್ವಾಭಾವಿಕ ಸನ್ನಿವೇಶವನ್ನು ಎದುರಿಸುವಂಥ ವಿಚಾರದ ಬಗ್ಗೆ ನಾವು ಚಿಂತನೆ ಮಾಡಬೇಕೆಂದು ವಿಜ್ಞಾಪಿಸಿಕೊಳ್ಳ ಬಯಸುತ್ತೇನೆ. ಅದಕ್ಕಾಗಿ ಮಳೆಯ ಕುರಿತಾದ ವರದಿಗಳನ್ನು ನೋಡಿದಾಗ ವರ್ಷ ವರ್ಷವೂ ಮಳೆ ಬೀಳುವುದರಲ್ಲಿ ಕಡಿಮೆಯಾಗಿಲ್ಲ. ಯಾವ ಪ್ರದೇಶದಲ್ಲಿ ಮಳೆಯು ಹೆಚ್ಚು ಬೀಳುತ್ತಾ ಇತ್ತು ಅಲ್ಲಿ ಕೊರತೆಯಾಗಿದೆ. ಯಾವ ಪ್ರದೇಶದಲ್ಲಿ ಮಳೆಯ ಕೊರತೆ ಇತ್ತು ಅಲ್ಲಿ ಸ್ವಲ್ಪ ಸುಧಾರಣೆಯಾಗಿದೆ. ಒಟ್ಟಾರೆ ಮಳೆಯು ಬೀಳುವ ಅಂಕಿಅಂಶಗಳನ್ನು ನೋಡಿದಾಗ ಮಳೆಯು ಕಳೆದ ಹತ್ತಾರು ವರ್ಷಗಳಿಂದ ಒಂದೇ ಪ್ರಮಾಣದಲ್ಲಿ ಬಿದ್ದಿರೆ ಎಂಬ ಅಂಶವನ್ನು ಹೇಳಿರುವುದನ್ನು ನಾವು ಒದಿದ್ದೇವೆ. ಆದರೆ ಇವೊತ್ತು ಮಳೆ ಬೀಳುವುದು, ಒಂದು ರೀತಿಯಲ್ಲಿ ಮಳೆಯಾದರೂ ನಷ್ಟ ಮಾಡುವಂಥ ಪರಿಸ್ಥಿತಿ, ಮಳೆ ಆಗದಿದ್ದರೂ ನಷ್ಟವುಂಟು ಮಾಡುವ ಪರಿಸ್ಥಿತಿ. ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಮಳೆ[illegible]ತಿನಲ್ಲಿ, ಯಾವ

ಕಡೆಗಳಲ್ಲಿ ಅಂದರೆ, ಕಾರವಾರ, ಸಿರ್ಸಿ, ಸಿದ್ಧಾಪುರ, ಆ ಕಡೆಗಳಿಂದ ನಮಗೆ ಏನು ಮಳೆ ಬರಬೇಕು, ಹಾಗೆಯೇ ಹಾನಗಲ್, ಬೆಳಗಾಂ ಖಾನಾಪುರ ಕಡೆಯಿಂದಲೂ ನಮಗೆ ಮಳೆ ಬರುವುದಿದೆ, ಆ ಕಡೆಗಳಲ್ಲಿಯೂ ಕೂಡ ಮಳೆ ಇಲ್ಲ. ಆದರೆ ಬಯಲು ಸೀಮೆ ಪ್ರದೇಶದಲ್ಲಿ ವರ್ಷದ ಮಳೆಯನ್ನು ಅಳತೆ ಮಾಡಿದಾಗ ನಮಗೆ ವರ್ಷವೂ ಎಷ್ಟು ಮಳೆಯ ಪ್ರಮಾಣ ಬರುತ್ತದೆ, ಕಳೆದ ಹತ್ತಾರು ವರ್ಷಗಳಿಂದ ಎಷ್ಟು ಮಳೆ ಬಿದ್ದಿದೆ, ಅಷ್ಟು ಮಳೆ ಬಿದ್ದಿರುವುದನ್ನು ನಾವು ನೋಡಿದ್ದೇವೆ. ಇವೊತ್ತು ಮಳೆ ಬಂದರೂ ನಷ್ಟ, ಬರದಿದ್ದರೂ ನಷ್ಟ. ನಮ್ಮಲ್ಲಿ ಜೂನ್ ಮೊದಲ ವಾರದಲ್ಲಿ ಮಳೆಯಾಗಿದೆ. ಮಳೆಯಾಯಿತೆಂದು ಬಹಳ ಹರ್ಷಪಟ್ಟು ಭಿತ್ತಿದ್ದೇವೆ. ಆದರೆ ನಂತರ ಮಳೆಯಾಗಿಲ್ಲ. ಮೊದಲು ಮಳೆ, ಬೆಳೆಯಾಗಿ, ನಂತರ ಮಳೆಯಿಲ್ಲದೆ ಬೆಳೆ ಸುಟ್ಟು ಹೋಗುವವರೆಗೂ ಮತ್ತೆ ಮಳೆಯಾಗುವುದಿಲ್ಲ. ಆದರೆ ಒಮ್ಮೆ ಮಳೆ ಬಂದರೆ ಬಿಡುವುದೇ ಇಲ್ಲ. ಒಂದು ತರಹ ಇರ್ರ್ಯಾಟಿಕ್ ರೈನ್ ಎಂದು ನಾವು ಹೇಳುತ್ತೇವೆ. ಆ ಒಂದು ಪರಿಸ್ಥಿತಿಯನ್ನು ನಾವು ಇವೊತ್ತು ಎದುರಿಸುತ್ತಿದ್ದೇವೆ. ಸುಮಾರು 650 ರಿಂದ 700 ಮಿಲಿ ಮೀಟರ್ ಮಳೆ ಬೀಳುವಂಥ ನಮ್ಮ ಪ್ರದೇಶದಲ್ಲಿ ಮಳೆ ಹೋಗಿ ಬೆಳೆ ನಾಶವಾಗುತ್ತದೆ ಅಥವಾ ಮಳೆಯಾಗಿ ಬೆಳೆ ನಾಶವಾಗುತ್ತದೆ. ಇದು ನಮ್ಮ ಪರಿಸ್ಥಿತಿಯ ವಿವರ. ಇನ್ನೊಂದು ಕಡೆ ಮಲೆನಾಡು ಪ್ರದೇಶದಲ್ಲಿ ಎಷ್ಟು ಮಳೆಯು ಬೀಳಬೇಕಾಗಿತ್ತು. ನೂರಾರು ಇಂಚುಗಳಷ್ಟು ಮಳೆ ಬೀಳ ಬೇಕಾಗಿತ್ತು ಅಂಥ ಪ್ರದೇಶಗಳಲ್ಲಿಯೂ ಮಳೆ ಇಲ್ಲದೆ, ನಾವು ಏನು ಬೆಳೆಯನ್ನು ಬೆಳೆಯುತ್ತಾ ಇದ್ದೆವು. ಆ ಬೆಳೆಗಳನ್ನು ಅಂದರೆ ಒಣ ಪ್ರದೇಶದ ಬೆಳೆಗಳನ್ನು ಅವರು ಬೆಳೆಯುವಂಥ ಪರಿಸ್ಥಿತಿಯು ಬಂದಿದೆ. ಕಳೆದ ಅನೇಕ ವರ್ಷಗಳಿಂದ ನಾವು ನೋಡುತ್ತಿದ್ದೇವೆ. ಹೋದ ವರ್ಷ ಸ್ವಲ್ಪವಾದರೂ ಮಳೆ ಬಂತು ಇವೊತ್ತು ಕನಿಷ್ಠ ಮಳೆಯೂ ಇಲ್ಲದ ಸನ್ನಿವೇಶ ಬಂತು ಎಂದು ಜನರು ಹೇಳುವುದನ್ನು ನಾವು ನೋಡುತ್ತಾ ಇದ್ದೇವೆ. ಇವತ್ತು ಮಲೆನಾಡು ಗಡಿನಾಡು ಮತ್ತು ಬಯಲುಸೀಮೆ ಬೆಳೆಗಳೆಂದು ನಾವೆಲ್ಲಾ ಹೇಳುತ್ತೇವೆ. ಆ ವ್ಯತ್ಯಾಸವೆಲ್ಲಾ ನಶಿಸಿಹೋಗುವಂತಹ ಪರಿಸ್ಥಿತಿ ಇವತ್ತು ಬಂದಾಗಿದೆ. ಯಾವುದಕ್ಕೆ ಮಲೆನಾಡು ಅನ್ನಬೇಕು, ಯಾವುದಕ್ಕೆ ಮಧ್ಯಮಮಳೆ ಪ್ರದೇಶ ಅನ್ನಬೇಕು ಯಾವುದಕ್ಕೆ ಮಳೆ ಕನಿಷ್ಟವಾಗಿ ಅಲ್ಲಿ ಬರಗಾಲ ಇರುವುದೇ ಎಂಬ ಸನ್ನಿವೇಶ ಹೋಗಿ ಮಲೆನಾಡು ಇವತ್ತು ಬೆಳುವಲಾಗಿದೆ, ಕೆಲವು ಕಾಲದ ಮಳೆ ನೋಡಿದರೆ ಗುಲ್ಬರ್ಗಾ, ಬಿಜಾಪುರ, ಬಾಗಲ್ಕೋಟೆಗಳಲ್ಲಿ ಮಳೆ ಬೀಳುವುದು ನೋಡಿದರೆ ಅದೇ ಮಲೆನಾಡು ಎನಿಸುತ್ತದೆ, ಅವರಿಗೂ ಪ್ರಯೋಜನವಿಲ್ಲ ಇವರಿಗೂ ಪ್ರಯೋಜನವಿಲ್ಲದ ಒಂದು ಇಕೊಲಜಿಕಲ್ ಇಂಬ್ಯಾಲೆನ್ಸ್ ನಾವು ನೋಡುತ್ತಾ ಇದ್ದೇವೆ. ಇದರಿಂದಾಗಿ ಇನ್ನೂ ಭವಿಷ್ಯದಲ್ಲಿ ಬಹಳ ತೊಂದರೆಯನ್ನು ಅನುಭವಿಸುತ್ತೇವೆ, ಇದಕ್ಕೆ ಕಾರಣವನ್ನೂ ಹೇಳುತ್ತೇನೆ ಅದಕ್ಕೆ ಆಧಾರವಿದೆ. ವೈಜ್ಞಾನಿಕವಾಗಿ ಎಂದು ಹೇಳಲಿಕ್ಕೆ ಸಾಧ್ಯವಿಲ್ಲದೇ ಇದ್ದರೂ ಹವಾಮಾನದ ವೈಪರೀತ್ಯಗಳೇನಿವೆ, ಅದು, ಇಲ್ಲಿ ಸಮುದ್ರದಲ್ಲಿರುವ ಪ್ರೆಶರ್‌ಜೋನ್‌ಗಳೇನಿದೆ, ಡೆಸರ್ಟ್‌ನಲ್ಲಿರುವ ಪ್ರೆಶರ್ ಜೋನ್‌ಗಳೇನಿವೆ ಅವು ಕೃತ್ರಿಮವಾದ ನಮ್ಮ ಅನೇಕ ಘಟನೆಗಳಿಂದ, ಅದು ಅಣುಬಾಂಬಿನ ಸಿಡಿತ ಇರಬಹುದು, ಇನ್ನಿತರ ಚಟುವಟಿಕೆಗಳಿಂದಿರಬಹುದು, ಇದರಿಂದಾಗಿ ಸ್ವಾಭಾವಿಕ ಚೈನ್ ಏನಿತ್ತು ಅದು ಮುರಿದುಹೋಗಿ ಇವತ್ತು ನಾವು ಒಂದೋ ಸೈಕ್ಲೋನನ್ನು ಎದುರಿಸಬೇಕು, ಇಲ್ಲದೇ ಇದ್ದರೆ, ಮಂಗಳೂರು, ಉಡುಪಿ, ಕಾರವಾರಗಳಲ್ಲಿ ಮಳೆಯಿಲ್ಲದ ಪರಿಸ್ಥಿತಿ ಅದೂ ಜೂನ್ ಜುಲೈ ತಿಂಗಳಲ್ಲಿ ಮಳೆಯಿಲ್ಲದ ಪರಿಸ್ಥಿತಿ ನಾವು ನೋಡಬೇಕಾಗಿದೆ. ಇದರ ಜೊತೆಗೆ, ನಾವು ಹುಡುಗರಾಗಿದ್ದಾಗ ನಾವು ಶಾಲೆಗೆ

ಹೋಗುವಾಗ ಧಾರವಾಡದಂತಹ ಜಾಗದಲ್ಲಿ ಕನಿಷ್ಠ ಎರಡು ತಿಂಗಳು ಮಳೆಗಾಲದಲ್ಲಿ ನಾವು ಮಳೆ ಎದುರಿಸಲು ಬೇಕಾದಂತಹ ಗೌನು ಕೋಟ್, ರೇನ್‌ಕೋಟು ಮತ್ತೊಂದು ಹಾಕಿಕೊಂಡು ಅಡ್ಡಾಡುವಂತಹ ಪರಿಸ್ಥಿತಿ ಇತ್ತು. ಇವತ್ತು ಆದಿಲ್ಲ. ಬೆಳಗಾಂ ಜಿಲ್ಲೆಯಲ್ಲಿ ತಿಂಗಳಾನುಗಟ್ಟಲೆ ಮಳೆ ಸುರಿಯುವ ಪರಿಸ್ಥಿತಿ ಇತ್ತು. ಅದು ಇವತ್ತಿಲ್ಲ. ಖಾನಾಪುರ ಮತ್ತಿತರ ಕಡೆ ಅಷ್ಟೊಂದು ಮಳೆ ಬೀಳುವುದೆಂಬುದನ್ನು ಆಧರಿಸಿ ಪ್ರೊಜೆಕ್ಟ್ ಮಾಡಿದಂತಹ ಪರಿಸ್ಥಿತಿ ಇತ್ತು. ಆದರೆ ಇವತ್ತ ಆ ಪರಿಸ್ಥಿತಿ ಉಳಿದಿಲ್ಲ. ಹಾಗಾಗಿ ನಾನು ಹೇಳಿದಂತಹ ಕಾರಣದ ಜೊತೆಗೆ ಕಾಡೂ ಸಹ ಅವತ್ತು ಸಾಕಷ್ಟು ಪ್ರಮಾಣದಲ್ಲಿ ಕಾಡು ಬೆಳೆದಿತ್ತು. ಧಾರವಾಡಕ್ಕೆ ಬಹಳ ಸಮೀಪವಿದ್ದೆವು. ಮಳೆ ಅಲ್ಲೇ ಆಗುತ್ತಿತ್ತು ಗಡಿನಾಡಿಗೆ ಆಗುತ್ತಿತ್ತು, ಆದರೆ ಇವತ್ತು ನಾವು ಅಲ್ಲಿಗೆ ಹೋಗಿ ನೋಡಿದರೆ ಕಾಡೇ ಗುರುತು ಇರದಂತಹ ಪರಿಸ್ಥಿತಿ ಇದೆ. ಇವತ್ತು ತಾತ್ಕಾಲಿಕವಾಗಿ ಅನೇಕ ಕ್ರಮಗಳನ್ನು ಸರ್ಕಾರಗಳು ಜರುಗಿಸಿದರೂ ಅವರಿಗೆ ಕೆಲಸ ಕೊಡಬಹುದು, ಹೊಟ್ಟೆಗೇನಾದರೂ ಹಾಕಬಹುದು ಮತ್ತೆ ನೀರನ್ನು ಕೊಡಬಹುದು ಕಾಳನ್ನು ಕೊಡಬಹುದು, ಜಲಾಶಯಗಳನ್ನು ಮಾಡಬಹುದು, ಇದೆಲ್ಲಾ ಮಾಡಿದರೂ ಮಳೇನೇ ಬರದಿದ್ದರೆ ಏನು ಮಾಡಬೇಕು ಅನ್ನುವುದರ ಬಗ್ಗೆ ನಾವಿವತ್ತು ಚಿಂತನೆ ಗಂಭೀರವಾಗಿ ಮಾಡಬೇಕಾಗಿದೆ. ಎಂಬ ಸನ್ನಿವೇಶದಲ್ಲಿ ನಾವು ಬಂದಿದ್ದೇವೆ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಆದಕ್ಕಾಗಿ ಇವತ್ತು ದೂರಗಾಮಿ ದೃಷ್ಟಿಯಿದ್ದಂಥ ಯೋಜನೆಗಳನ್ನು ಮಾಡದೇ ಇದ್ದರೆ ಜನಗಳಲ್ಲಿ ಆ ಒಂದು ಪ್ರಜ್ಞೆ ತರದೇ ಇದ್ದರೆ ಬಿದ್ದಂತಹ ಮಳೆ ನೀರನ್ನು ಸರಿಯಾಗಿ ನಾವು ಹಿಡಿದಿಟ್ಟುಕೊಳ್ಳದಿದ್ದರೆ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ. ನಿನ್ನೆ ಪ್ರಸ್ತಾಪವಾಯಿತು. ಕುಡಿಯುವ ನೀರಿಗಾಗಿ ಚೆನ್ನೈಅಂತಹ ನಗರದಲ್ಲಿ ಮೇಲೆ ಬಿದ್ದಂತಹ ನೀರನ್ನು ಶೇಖರಣೆ ಮಾಡಿಟ್ಟುಕೊಂಡು ಉಪಯೋಗಮಾಡಬೇಕು ಎಂದು ಅದೇ ರೀತಿ ಕೃಷಿಗಾಗಿ ನಾವು ಮಾಡಬೇಕಾದ ಅವಶ್ಯಕತೆ ಇವತ್ತಿದೆ ಅಧ್ಯಕ್ಷರೇ, ನಾನು ಪ್ರಸ್ತಾಪ ಮಾಡಿದ ಹಾಗೆ ಮಳೆ ಈಗಾಗಲೇ ಯೂನಿಫಾರ್ಮಾಗಿ ಸ್ಪ್ರೆಡ್ ಓವರ್ ಆಗುತ್ತಿಲ್ಲ. 700 ಮೀಲಿಮೀಟರ್ ನಮ್ಮ ಕಡೆ ಆಗುತ್ತಿದ್ದ ಮಳೆ ಕನಿಷ್ಠ ಎಲ್ಲಾ ಕಡೆ ಒಂದು ತರಹ ಬಿದ್ದರೆ ಒಂದು ಬೆಳೆಯಾದರೂ ಆಗುತ್ತದೆ ಆದರೆ ಹಾಗಾಗುವುದಿಲ್ಲ. 300-400 ಮಿಲಿಮೀಟರ್ ಒಮ್ಮೆ ಆಗುತ್ತದೆ, ಹೋದರೆ ಹೋಗೆ ಬಿಡುತ್ತದೆ. ಈ ರೀತಿಯಾದ ಮಳೆ ನೀರನ್ನು ನಮ್ಮ ನಮ್ಮ ಮಟ್ಟದಲ್ಲಿ ಹೇಗಾದರೂ ಮಾಡಿ ಶೇಖರಣೆ ಮಾಡುವಂತಹ, ದೊಡ್ಡ ಜಲಾಶಯ ಆಗಲಿ, ಕೆರೆಯಾಗಲಿ, ಆದರ ಜೊತೆ ನಮ್ಮ ಹೊಲಗಳಲ್ಲಿ ಆ ಕೆರೆಗಳನ್ನು ಮಾಡಿ ನೀರನ್ನು ಶೇಖರಣೆ ಮಾಡಿ ಕನಿಷ್ಠ ನಮಗಿರುವಂತಹ ಹಿಡುವಳಿಯಲ್ಲಿ 10-15-20 ಪರ್ಸೆಂಟ್ ಶೇಖರಣೆ ಮಾಡಿ ಇಡುವ ವ್ಯವಸ್ಥೆ ಮಾಡಿದರೆ ನಮ್ಮ ಮಣ್ಣನ್ನೂ ಉಳಿಸಿಕೊಳ್ಳಬಹುದು ಅದರ ಜೊತೆಗೆ ನೀರನ್ನೂ ಸಂಗ್ರಹಿಸಿಕೊಂಡು ಕನಿಷ್ಠ ಒಂದು ಬೆಳೆಯನ್ನಾದರೂ ತೆಗೆಯಬಹುದು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದೊಂದು ಕಲ್ಚರ್, ಆಗಿಬರಬೇಕು. ಫಾರ್ಮಪಾಂಡ್ ಕಲ್ಚರಾಗಿ ಇದನ್ನು ಬೆಳೆಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇಲ್ಲದೇ ಇದ್ದರೆ ಬಹಳ ಗಂಭೀರವಾದ ಪರಿಸ್ಥಿತಿ ನಾವು ಎದುರಿಸಬೇಕಾಗುತ್ತದೆ. ಕುಡಿಯುವ ನೀರಿನದಾಗಿರಬಹುದು ಅಥವಾ ಬೆಳೆ ತೆಗೆಯುವುದಾಗಿರಬಹುದು.

ಹಲವಾರು ವರ್ಷಗಳಿಂದ ಕಾಡನ್ನು ಕಡಿಯುತ್ತಾ ಕಡಿಯುತ್ತಾ ಇರುವುದರಿಂದ ಏನಾಗಿದೆ? ಜೊತೆಗೆ ನಾವಿವತ್ತು ಹೇಳುತ್ತೇವೆ ರಾಷ್ಟ್ರೀಯ ಮಟ್ಟದಲ್ಲಿ 11 ಪರ್ಸೆಂಟ್ ಕಾಡಿದೆ ಎಂದು. ಆದರೆ ಕಾಡನ್ನು ಅದರ ಸುತ್ತಲಿನ ಪರಿಸರವನ್ನು ನೋಡಿದಾಗ 11 ಪರ್ಸೆಂಟ್ ಕಾಡು ನಮ್ಮ ದೇಶದಲ್ಲಿ ಇಲ್ಲ ಅದೇನು ಎರಡು, ಮೂರು ಅಥವಾ ನಾಲ್ಕು ಪರ್ಸೆಂಟಿದೆಯೋ ದೇವರಿಗೇ ಗೊತ್ತು. ಅದೂ ಅಲ್ಲದೆ ಕಾಡಿನೊಳಗಡೆ ರಸ್ತೆಗಳು, ಅನೇಕ ವಿಧವಾದ ಚಟುವಟಿಕೆಗಳು ಜನವಸತಿಗಳು ಆಗಿ ಇವತ್ತು ಕಾಡು ಹೋಗಿ ಗಿಡ ಮಾತ್ರ ಉಳಿದಿವೆ. ಜೀವಜಾತಿಗಳು, ಪಶುಪಕ್ಷಿಗಳು ಉಳಿಯಬೇಕಾದರೆ ಕನಿಷ್ಟ ಇಷ್ಟು ಪ್ರಮಾಣದಲ್ಲಾದರೂ ಕಾಡು ಬೇಕೆಂದು ವೈಜ್ಞಾನಿಕವಾದ ಅಂಶವೇನಿದೆ ಆ ಮಟ್ಟಕ್ಕೆ ಆದರೂ ನಾವು ಕಾಡು ಬೆಳೆಸಲು ಪ್ರಯತ್ನ ಮಾಡಬೇಕು. ವಿದೇಶಗಳಲ್ಲಿ 28, 30 ಪರ್ಸೆಂಟಿದೆ, ಅಮೆರಿಕದಲ್ಲಿ 25 ಪರ್ಸೆಂಟಿದೆ, ಕೆನಡಾದಲ್ಲಿ 48 ಪರ್ಸೆಂಟ್ ಅರಣ್ಯ ಪ್ರದೇಶದಲ್ಲಿ ಇದೆ, ಒಂದು ವೇಳೆ ಆ ಕಾಡನ್ನು ಒಂದು ಕಡೆಯಿಂದ ಕಡಿದುಕೊಂಡು ಬಂದರೆ ಇನ್ನೊಂದು ಕಡೆಯಿಂದ ಕಾಡನ್ನು ಬೆಳೆಸುವಂತಹ ಯೋಜನೆಯನ್ನು ಹಾಕಿಕೊಳ್ಳುತ್ತಾರೆ. ಹಾಗೆ ಮಾಡದೇ ಇದ್ದರೆ ನಮ್ಮ ಯಾವುದೇ ಕೆಲಸಕ್ಕೂ ಚಟುವಟಿಕೆಗೂ ಭವಿಷ್ಯವಿಲ್ಲ ಎಂಬಂತಹ ಪರಿಸ್ಥಿತಿ ಎದುರಿಸುತ್ತಿದ್ದೇನೆ ಇವತ್ತು ಈ ವೈಪರೀತ್ಯಗಳನ್ನು ಕಂಟ್ರೋಲ್ ಮಾಡಬೇಕಾದರೆ ಸ್ವಾಭಾವಿಕವಾಗಿ ಮಳೆ ಬರಬೇಕಾಗುತ್ತದೆ. ಇದು ಅನಾದಿ ಕಾಲದಿಂದ ಗೊತ್ತಿರುವಂತಹ ವಿಷಯ ಅಧ್ಯಕರೇ. ಕಾಡಿಗೆ ಅರಣ್ಯ ಒಂದು ತರಹದ ಜಲಾಶಯಗಳು ಎಂದು ಹೇಳುತ್ತೇವೆ ಅದಕ್ಕೆ ರೇನ್‌ಫಾರೆಸ್ಟ್ ಎಂದು ಹೇಳುತ್ತೇವೆ - ಅಂತಹ ಕಾಡುಗಳನ್ನು ನಾವು ಬೆಳೆಸದೇ ಇದ್ದರೆ ನಮ್ಮ ಭವಿಷ್ಯತ್ತು ಬಹಳ ತೊಂದರೆಯಾಗುತ್ತದೆ ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ ಅದಕ್ಕಾಗಿ ನಮ್ಮ ಎಲ್ಲಾ ಯೋಜನೆ ಕಾರ್ಯಕ್ರಮಗಳನ್ನು ಆ ಕಡೆ ನಾವು ಒಗ್ಗೂಡಿಸಬೇಕು. ಕಾಡನ್ನು, ಗಿಡಗಳನ್ನು ಬೆಳೆಸಲು ಎಲ್ಲಾ ಕ್ರಮಗಳನ್ನೂ ನಾವೂ ಕೈಗೊಳ್ಳಬೇಕು ಎಂದು ಒಂದು ಸಲಹೆಯನ್ನು ಹೇಳುತ್ತೇನೆ. ಇದರಿಂದ ಹತ್ತಾರು ವರ್ಷಗಳಲ್ಲಿ ಪರಿಸ್ಥಿತಿ ಸುಧಾರಣೆಯಾದೀತು ಎಂಬ ಅಂಶವನ್ನು ತಮ್ಮ ಗಮನಕ್ಕೆ ನಾನು ತರಬಯಸುತ್ತೇನೆ. ಆ ರೀತಿಯ ಅನೇಕ ವಿಧವಾದ ಯೋಜನೆಗಳನ್ನು ನಾವು ಮಾಡಿದ್ದೇವೆ. ನೀರಿನ ಬಳಕೆಯನ್ನು ನಾವು ನೋಡಿದ್ದೇವೆ. ಅದನ್ನೆಷ್ಟು ಪೋಲು ಮಾಡುತ್ತೇವೆ ಎಂದು ನೋಡಿದ್ದೇವೆ ನೀರಾವರಿ ಯೋಜನೆಗಳೆಂದರೆ ಕೆರೆ ಇರಬಹುದು ಜಲಾಶಯ ಇರಬಹುದು, ಮೊದಲಿಗೆ ಜಲಾಶಯಗಳು ತುಂಬುವುದೇ ಕಷ್ಟ. ನಮ್ಮ ಮಲಪ್ರಭಾ ಜಲಾಶಯನನ್ನ ಅನುಭವದ 25 ವರ್ಷಗಳಲ್ಲಿ ಸುಮಾರು ಮೂರ್ನಾಲ್ಕು ಭಾರಿ ಮಾತ್ರ ಅದು ತುಂಬಿರಬಹುದು. ಇನ್ನುಳಿದಾಗಲೆಲ್ಲಾ ಅರ್ಧಕ್ಕಿಂತ ಕಡಿಮೆ ಇರುತ್ತದೆ. ಹೋದ ವರ್ಷ 20 ಪರ್ಸೆಂಟ್ ತುಂಬಿ ಬರೀ 34 ದಿವಸ ಮಾತ್ರ ನೀರು ಕೊಡಲು ಸಾಧ್ಯವಾಯಿತು. ಒಂದೇ ಬೆಳೆ ಬೆಳೆಯಲೂ ಸಾಧ್ಯವಾಗಿಲಿಲ್ಲ. ಆದರೆ ಅದನ್ನು ಬಳಕೆ ಯಾವ ರೀತಿ ಮಾಡುತ್ತಿದ್ದೇವೆ ಅಧ್ಯಕ್ಷರೇ? ಅದು ನಾಲೆ ಇರಬಹುದು ಯಾವುದೇ ಇರಬಹುದು, ಒಂದು ವಿಶಿಷ್ಟವಾದ ಪದ್ಧತಿ ನಡೆದುಕೊಂಡು ಬರುತ್ತಿದೆ. ನಾಲಿಯಲ್ಲಿ ನೀರು ಸಿಕ್ಕಿಬಿಟ್ಟರೆ ಸಾಕು, ಬೇರೆಯವರಿಗೆ ಕೆಳಗಿನವರಿಗೆ ನೀರು ಸಿಗುತ್ತದೋ ಬಿಡುತ್ತದೋ ಅವರು ಹೇಗೆ ಮಾಡುತ್ತಾರೋ ಅದನ್ನು ನಾನು ನೋಡಲಿಕ್ಕೇ ತಯಾರಿಲ್ಲ. ಮುಂದಿರುವ ಹೊಲಗಳಿಗೆ ಅದು ಹೋಗಲಿ ಬಿಡಲಿ, ನಾನು ತೆಗೆದುಕೊಂಡ ನಂತರ ಅದನ್ನು ಮುಚ್ಚಲಿಕ್ಕೂ ನಾನು ತಯಾರಿಲ್ಲ. ಅಂತಹ ನೀರು ಬಳಕೆಯ ಒಂದು ಕೆಟ್ಟ ಪದ್ಧತಿ ಇವತ್ತು

ಜಾರಿಯಲ್ಲಿದೆ. ಜಲಾಶಯಗಳಲ್ಲಿನ ನೀರಿನ ಪೈಕಿ ಸುಮಾರು 50 ರಷ್ಟು ನೀರು, ನಮ್ಮ ಮಲಪ್ರಭಾ ಬಲದಂಡೆ ಕಾಲುವೆ ಎಂದು ಇದೆ, ಆ ಕಾಲುವೆಯಲ್ಲಿ 2000 ಕ್ಯುಸೆಕ್ಸ್ ನೀರು ಹರಿದುಬರುತ್ತದೆ. ಮಲಪ್ರಭಾವ ಮೂಲನದಿಯ ಕೆಳಗಡೆ ವೇಸ್ಟಾಗಿ ಹೋಗುವಂತಹ ನೀರು ನೋಡಿದರೆ,

3.40 ಪಿ.ಎಂ.

ಅದರಲ್ಲೇನು ಎರಡು ಸಾವಿರ ಕ್ಯೂಸೆಕ್ಸ್ ಹರಿದು ಹೋಗುತ್ತದೆ, ಅದರಲ್ಲಿ ಗರಿಷ್ಟ ಒಂದು ಸಾವಿರ ಕ್ಯೂಸೆಕ್ಸ್ ಅದರೂ ಹರಿದು ಹೋಗುವುದನ್ನು ನಾವು ನೋಡುತ್ತೇವೆ. ಹೀಗಾಗಿ ನಾವು ಯಾವುದನ್ನು ಒಂದು ಅತ್ಯಂತ ಮುಖ್ಯವಾದುದು, ಬಹಳ ಬೆಲೆಯುಳ್ಳದ್ದು ಎಂದು ತಿಳಿದುಕೊಳ್ಳುತ್ತೇವೋ ನೀರನ್ನು, ಮಣ್ಣನ್ನು, ಇವತ್ತು ಅವುಗಳನ್ನು ನಾವು ಪ್ರಿಸರ್ವ್ ಮಾಡಿಕೊಳ್ಳದಿದ್ದರೆ ಅದರ ಬಗ್ಗೆ ಪದ್ಧತಿಯನ್ನು ತರದಿದ್ದರೆ, ಅದರ ಬಗ್ಗೆ ಜನರಲ್ಲಿ ಬಳಕೆ ಬಗ್ಗೆ ವಿಧಾನಗಳನ್ನು ಪ್ರಚುರಪಡಿಸದಿದ್ದರೆ ಕಲಿಸದಿದ್ದರೆ ಆ ಕಲ್ಚರನ್ನು ತರದಿದ್ದರೆ, ಅದರಿಂದ ಬಹಳಷ್ಟು ತೊಂದರೆಯಾಗುತ್ತದೆ. ಅಷ್ಟೇ ಅಲ್ಲ, ಅಷ್ಟೇ ನೀರಿನಿಂದ ಒಂದು ಎರಡು, ಮೂರು ಪಟ್ಟು ಜಮೀನುಗಳಿಗೆ ನೀರು ಕೊಡತಕ್ಕಂಥ ಪರಿಸ್ಥಿತಿ ಬರುತ್ತದೆ. ಇವತ್ತು ಎಲ್ಲವೂ ಅದನ್ನು ನಾವು ಸ್ವಾಭಿವಿಕವಾಗಿ ಮಾಡುತ್ತಿದ್ದೇವೆ. ಯಾವುದನ್ನು ಮಳೆ ನೀರಿನಿಂದ ಮಾಡಿ ಬೆಳೆಯುತ್ತಿದ್ದೆವೋ ಅದು ಇವತ್ತು ಎಲ್ಲವೂ ಹೋಗಿ ನೀರನ್ನು ಹಾಯಿಸಬೇಕು, ಎಣ್ಣೆಯನ್ನು ಹೊಡೆಯಬೇಕು, ಮತ್ತೊಂದು ಹೈಬ್ರಿಡ್‌ನ್ನು ಹಾಕಬೇಕು, ಹೆಚ್ಚು ಕೆಲಸ ಮಾಡಬೇಕು. ಸ್ವಾಭಿವಿಕವಾಗಿ ಯಾವುದೂ ಆಗುವುದಿಲ್ಲ. ಇಂಥ ವಿಶಿಷ್ಟವಾದ ಪರಿಸ್ಥಿತಿಯನ್ನು ಎದುರಿಸಬೇಕಾದರ ಹೊಸ ಹೊಸ ವಿಧಾನಗಳನ್ನು ಜಾರಿಗೆ ತರುವ ಪ್ರಯತ್ನವಾಗಬೇಕು. ಅದಕ್ಕೆ ಮಾದರಿಯಾಗಿ ಅನೇಕ ರಾಷ್ಟ್ರಗಳಲ್ಲಿ ಮಾಡಿದ್ದಾರೆ. ಅದು ಇಸ್ರೇಲ್ ಇರಬಹುದು, ಜಪಾನ್‌ನಂಥ ಮುಂದುವರಿದ ರಾಷ್ಟ್ರಗಳು ಇರಬಹುದು. ಅನೇಕ ಮುಂದುವರಿದ ರಾಷ್ಟ್ರಗಳಲ್ಲಿ ನೀರು ಪೋಲಾಗದ ರೀತಿ ಯಾವ ರೀತಿ ಬಳಕೆ ಮಾಡುತ್ತಾರೋ ಅಂಥ ವಿಧಾನಗಳನ್ನು ಇಂಥ ಪ್ರದೇಶಗಳಲ್ಲಿ ಎಲ್ಲೆಲ್ಲಿ ನೀರು ಇದೆಯೋ ಅದನ್ನು ಜಾರಿಗೆ ತರುವ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆಯನ್ನು ಮಾಡುತ್ತೇನೆ. ಇವತ್ತು ಕುಡಿಯುವ ನೀರಿನ ಬಗ್ಗೆಯೂ ಕೂಡ ಸಾಕಷ್ಟು ತೊಂದರೆಯಾಗಬಹುದು. ಬಹಳಷ್ಟು ಪ್ರದೇಶಗಳಲ್ಲಿ ಇಲ್ಲಿಯವರೆಗೂ ನೀರು ಸಾಕಾಗಬಹುದು ಎನ್ನುವ ಲೆಕ್ಕಾಚಾರದ ಮೇಲೆ ಅದು ಕೆರೆ ಇರಬಹುದು ಅಥವಾ ಬೇರೆ ಮೂಲಗಳು ಇರಬಹುದು. ನಿಮಗೆ ಆಶ್ಚರ್ಯವಾಗಬಹುದು. ಈಗ ಮಳೆಗಾಲ ಯಾವ ಹೊಳೆಯಲ್ಲಾಗಲಿ, ಹಳ್ಳದಲ್ಲಾಗಲೀ ಇವತ್ತು ನೀರು ಹರಿಯುತ್ತಾ ಇಲ್ಲ. ಅಷ್ಟೋ ಇಷ್ಟೋ ನೀರು ಬಂದರೆ ಅದನ್ನೆಲ್ಲಾ ಪಂಪ್‌ಸೆಟ್‌ಗಳ ಮೂಲಕ ತೆಗೆದುಕೊಂಡು ಹೋಗಳಿಗೆ ಹಾಯಿಸುತ್ತಾರೆ. ಅದು ನಮ್ಮದೇ ಇರಬಹುದು, ಬೇರೆಯದೇ ಇರಬಹುದು.

ಅಧ್ಯಕ್ಷರು : ಮಾನ್ಯ ಕರಿಯಣ್ಣನವರೇ ನಮ್ಮ ರೆವಿನ್ಯೂ ಮಂತ್ರಿಗಳನ್ನು ಮತ್ತು ಕೃಷಿ ಮಂತ್ರಿಗಳನ್ನು ಕರೆಸಿ. ಇವತ್ತು ಬರದ ಬಗ್ಗೆ ಚರ್ಚೆಯನ್ನು ಪೂರ್ಣ ಮಾಡಬೇಕೆಂದಿದ್ದೇವೆ. ಅವರು ಉತ್ತರ ಹೇಳಬೇಕಲ್ಲಾ. ಮಾನ್ಯ ಸದಸ್ಯರು ಹೇಳುವುದನ್ನು ಅವರು ಕೇಳದಿದ್ದರೆ ಇನ್ನೇನು ಉತ್ತರವನ್ನು ಕೊಡುತ್ತಾರೆ. ದಯವಿಟ್ಟು ಅವರನ್ನು ಸದನಕ್ಕೆ ಬರಲು ತಿಳಿಸಿ.

ಶ್ರೀ ಕರಿಯಣ್ಣ : ಆಯಿತು, ಅಧ್ಯಕ್ಷರೇ,

ಅಧ್ಯಕ್ಷರು : ಆಯಿತು ಎನ್ನುವುದಲ್ಲ. ಅವರನ್ನು ಕರೆಸಿ, ಅಥವಾ ಮೇಲ್ಮನೆಯಲ್ಲಿ ಬಿಜಿಯಾಗಿದ್ದಾರೆಂದಾದರೂ ಹೇಳಿ. ಅವರು ಉತ್ತರ ಕೊಡಬೇಕಾಗಿದ್ದರೆ ಸದಸ್ಯರುಗಳು ಹೇಳುವುದನ್ನು ಅವರು ಕೇಳಬೇಕಲ್ಲಾ.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಸಕ್ಕರೆ ಸಚಿವರು) : ಮೇಲ್ಮನೆಯಲ್ಲಿ ಇದ್ದಾರೆ.

ಅಧ್ಯಕ್ಷರು : ಇಬ್ಬರೂ ಎಂಗೇಜ್ ಆಗಿದ್ದಾರಾ? ಅವರ ವಿಷಯದ ಬಗ್ಗೆಯೇ ಇಲ್ಲಿ ಚರ್ಚೆಯಾಗುತ್ತಿದೆ. ದಯವಿಟ್ಟು ಕರೆಸಿ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಅಲ್ಲಿಯೂ ಸಹ ಇದೇ ವಿಷಯ ನಡೆಯುತ್ತಿರುವುದರಿಂದ ಅವರುಗಳು ಅಲ್ಲಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಕೃಷಿ ಸಚಿವರೂ ಇಲ್ಲ. ಕಂದಾಯ ಸಚಿವರೂ ಇಲ್ಲ. ಯಾರಾದರೂ ಒಬ್ಬರಾದರೂ ಕುಳಿತುಕೊಳ್ಳಬೇಕಲ್ಲಾ ಸಾರ್.

ಅಧ್ಯಕ್ಷರು : ಒಬ್ಬರನ್ನಾದರೂ ಕರೆಸಿ. ಒಬ್ಬರು ಅಲ್ಲಿರಲಿ. ಇನ್ನೊಬ್ಬರು ಇಲ್ಲಿರಲಿ.

ಶ್ರೀ ಅರಗ ಜ್ಞಾನೇಂದ್ರ : ಮಳೆಗೆ ಮಾತ್ರ ಬರವಲ್ಲ. ಮಂತ್ರಿಗಳಿಗೂ ಬರವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಇಲ್ಲಿ ರೆವಿನ್ಯೂ ಇಲಾಖೆಯ ಸ್ಟೇಟ್ ಮಿನಿಸ್ಟರ್ ಇದ್ದಾರೆ. ಅದು ಅವರಿಗೆ ಸಂಬಂಧಪಟ್ಟ ವಿಷಯ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ : ಸಮಸ್ಯೆ ಇರುವುದು ಅವರನ್ನೇ ಪರಿಚಯ ಮಾಡಿಲ್ಲ. ಅವರನ್ನು ನಮಗೆ ಇಂಟ್ರಡ್ಯೂಸ್ ಮಾಡಿಲ್ಲ. ಅವರು ಯಾವ ಮಿನಿಸ್ಟರ್ ಎಂಬುದು ನಮಗೆ ಗೊತ್ತಿಲ್ಲ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ಹಾಗಾಗಿ ಯಾವುದೇ ಪೆರಿನಿಯಲ್ ರಿವರ್ ಆಗಲಿ, ಹಳ್ಳಗಳಾಗಲಿ, ನಿರಂತರವಾಗಿ 12 ತಿಂಗಳವರೆಗೂ ನೀರು ಹರಿಯುವಂಥ ಪರಿಸ್ಥಿತಿ ಇವತ್ತು ಇಲ್ಲ. ಇವತ್ತು ಬರುವ ದಿನಮಾನಗಳಲ್ಲಿ ಈ ಮೂಲಗಳನ್ನು ಕನಿಷ್ಟ ಈಗ ಪ್ರಾರಂಭವಾಗಿ ಮಳೆ ಇನ್ನೊಂದು ವಾರ, ಹದಿನೈದು ದಿವಸದಲ್ಲಿ ಬರದಿದ್ದರೆ ಅಥವಾ ಮುಂದೂ ಬರದಿದ್ದರೆ ಯಾವ ರೀತಿ ಮಾಡಬೇಕು. ಅದು ಮಲೆನಾಡು ಇರಬಹುದು, ಬಯಲುಸೀಮೆ ಇರಬಹುದು, ಅಷ್ಟೋ ಇಷ್ಟೋ ನೀರು ರಿಸರ್‌ವಾಯರ್‌ಗಳಲ್ಲಿ ಇರಬಹುದು, ಇವುಗಳನ್ನು ಯಾವ ರೀತಿಯಾಗಿ ಕುಡಿಯುವುದಕ್ಕಾಗಿ ಬಳಕೆಗಾಗಿ ಉಪಯೋಗ ಮಾಡುವುದಕ್ಕೆ ಸಾಧ್ಯ ಇದೆ ಅದು ಬಂಡುಗಳನ್ನು ನಿರ್ಮಾಣ ಮಾಡಿ ಇರಬಹುದು ಈ ಬಗ್ಗೆ ಕ್ರಮಕೈಗೊಳ್ಳಬೇಕು. ಸುಮಾರು ವರ್ಷಗಳ ಹಿಂದೆ ಗುಜರಾತ್‌ನಲ್ಲಿ ಇಂಥದೇ ಬರಗಾಲ ಬಂದಿತ್ತು. ಬಹುತೇಕ ಅವರು ಕೊಳಾಯಿಗಳ ಮೂಲಕ ನರ್ಮದಾ ವ್ಯಾಲಿಯಿಂದ ನೀರನ್ನು ಒಯ್ದು ಎಲ್ಲಾ ಕಡೆಗೂ ಕೊಟ್ಟಂಥ ಸ್ಥಿತಿಯನ್ನು ನಾವು ನೋಡಿದ್ದೇವೆ. ಅದೇ ರೀತಿ ಪರಿಸ್ಥಿತಿಯು ಬಂದರೂ ಏನೂ ಆಶ್ಚರ್ಯವಿಲ್ಲ. ಆ ರೀತಿಯಾಗಿ ನೀರನ್ನು ಶೇಖರಣೆ ಮಾಡತಕ್ಕಂಥ ತಡೆಹಿಡಿಯತಕ್ಕ ಪರಿಸ್ಥಿತಿಯನ್ನು ಆ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಮ್ಮೂಲಕ ಹೇಳಬಯಸುತ್ತೇನೆ.

ಅದಲ್ಲದೇ ಇವತ್ತು ಬಿತ್ತನೆ ಬೀಜ ಇಲ್ಲ. ಬಹುತೇಕ ಮಳೆ ಅಷ್ಟೋ ಇಷ್ಟೋ ಆಯಿತು. ಬಿತ್ತಿದರು. ಅಷ್ಟೋ ಇಷ್ಟೋ 50 ಪರ್‌ಸೆಂಟ್ ಸಬ್ಸಿಡಿ ಮೇಲೆ ಬೀಜ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿತು. ಅವರು ಅದನ್ನು ಪಡೆದುಕೊಂಡು ಭತ್ತ ಹಾಕಿದರು, ಹೆಸರು ಹಾಕಿದರು. ಅದೆಲ್ಲಾ ನಾಶವಾಗಿ ಹೋಯಿತು. ರೈತರಿಗೆ ಬೀಜದ ವ್ಯವಸ್ಥೆಯಾಗಬೇಕು, ಗೊಬ್ಬರದ ವ್ಯವಸ್ಥೆ ಆಗಬೇಕು. ಇವುಗಳನ್ನು ಮಳೆ ಬಂದಾಗ ಅಲ್ಪಸ್ವಲ್ಪ ಮಳೆ ಬಂದರೆ ಯಾವ ರೀತಿಯ ಬೆಳೆಗಳನ್ನು ಬೆಳೆಯಬಹುದು ಎನ್ನುವ ತಿಳುವಳಿಕೆಯನ್ನು ಮೂಡಿಸಬೇಕು. ಜನಗಳಿಗೆ ಅದರ ಬಗ್ಗೆ ಮಾರ್ಗದರ್ಶನವನ್ನು ಕೊಡಬೇಕು. ಒಂದು ರೀತಿಯಾಗಿ ಅವರಿಗೆ ಎಲ್ಲಾ ವಿಧವಾದ ಸಾಲಗಳನ್ನು ಬೇರೆ ಬೇರೆ ರೀತಿಯಲ್ಲಿ ಕೊಡುವ ವ್ಯವಸ್ಥೆಯಾಗಬೇಕು. ಯಾರು ಕೃಷಿ ಕಾರ್ಮಿಕರು ಇದ್ದಾರೆ, ಅವರಿಗೆ ಕೆಲಸಗಳನ್ನು ಕೊಡುವ ವ್ಯವಸ್ಥೆಯಾಗಬೇಕು. ಅದರೂ ಕೂಡ ಸಾಲದ ಬಗ್ಗೆ ವಿಶೇಷವಾಗಿ ಧಾರವಾಡ ಜಿಲ್ಲೆಯಲ್ಲಿ ರೈತರಿಗಾಗಿ ಒಂದು ಸಾಲದ ವ್ಯವಸ್ಥೆಯಾಗಬೇಕು. ಅದು ಕುಸಿದು ಬಿದ್ದಿರುವುದು ತಮ್ಮ ಗಮನಕ್ಕೂ ಬಂದಿರುವುದಕ್ಕೂ ಸಾಕು ಎಂದು ಹೇಳಿ ನಾನು ಭಾವಿಸುತ್ತೇನೆ. ಜಿಲ್ಲಾ ಬ್ಯಾಂಕು ಇವತ್ತು ಬಹಳ ಕಷ್ಟದಲ್ಲಿದೆ. ಅದು ಅನೇಕ ಕಾರಣಗಳಿಂದ ಇರಬಹುದು. ಆದರೆ ಅದರ ಕಷ್ಟಕ್ಕಿಂತ ಹೆಚ್ಚಾಗಿ ಅದು ಇರದೇ ಇದ್ದಿದ್ದರಿಂದ ಅದು ನಿಂತು ಹೋದುದ್ದರಿಂದ ಅದು ಇವತ್ತು ಯಾವುದೇ ವಿಧವಾದ ಕೆಲಸಕಾರ್ಯಗಳನ್ನು ಮಾಡದೇ ಇದ್ದುದರಿಂದ ಒಂದು ಕಡೆ ಮಾಡಿದಂಥ ಡಿಪಾಸಿಟ್ಸ್‌ಗೆ ತೊಂದರೆಯಾಗಿದೆ. ಅವರಿಗಿಂತ ಹೆಚ್ಚಾಗಿ ಕನಿಷ್ಟ ಮಟ್ಟಕ್ಕೆ ಸಾಲದ ಸೌಲಭ್ಯಅಗತ್ಯಕ್ಕ ಪರಿಸ್ಥಿತಿ ಏನು ಇತ್ತು, ಅದು ಇವತ್ತು ರೈತರಿಗಾಗಲೀ ಜನಗಳಿಗಾಗಲೀ ಸಿಗದೇ ಬಹಳಷ್ಟು ತೊಂದರೆಯಾಗಿದೆ. ಖಾಸಗಿ ಲೇವಾದೇವಿಗಾರರ ಹತ್ತಿರ ಹೋಗಿ ಅವರು ಕೇಳಿದಷ್ಟು ಬಡ್ಡಿಯನ್ನು ಕೊಟ್ಟು ತರತಕ್ಕಂತಹ ಪರಿಸ್ಥಿತಿ ಇದೆ. ಹಾಗಾಗಿ ಇವತ್ತು ಬ್ಯಾಂಕುಗಳನ್ನು ಪುನಶ್ಚೇತನ ಮಾಡತಕ್ಕ ದೊಡ್ಡ ಜವಾಬ್ದಾರಿ ಅಪೆಕ್ಸ್ ಬ್ಯಾಂಕ್ ಮೇಲೆ, ಸರ್ಕಾರದ ಮೇಲೆ, ನಬಾರ್ಡ್ ಮೇಲೆ ರಿಸರ್ವ್ ಬ್ಯಾಂಕ್ ಮೇಲೆ ಇದೆ ಎಂದು ಹೇಳಿ ನಾನು ಭಾವಿಸುತ್ತೇನೆ. ಡಿಪಾಸಿಟರ್ಸ್‌ಗಳ ಹಿತದೃಷ್ಟಿಯಿಂದ, ಗ್ರಾಹಕರ ಹಿತದೃಷ್ಟಿಯಿಂದ ಒಟ್ಟಾರೆ ಆ ಜಿಲ್ಲೆಯ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ಅದನ್ನು ಮಾಡಬೇಕಾದ ಅವಶ್ಯಕತೆ ಇದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಹೇಳಿದರು. 9 ಪರ್‌ಸೆಂಟ್ ಬಡ್ಡಿಯಿಂದ ನಾವು ಸಾಲವನ್ನು ಒದಗಿಸುತ್ತೇವೆಂದು ಹೇಳಿದರು. ಏಕೆ ಆ ಕಾರ್ಯಕ್ರಮ ಈ ಬ್ಯಾಂಕುಗಳಿಂದ ಶುರುವಾಗಬಾರದು? ಏಕೆ ನೇರವಾಗಿ ಅಪೆಕ್ಸ್ ಬ್ಯಾಂಕ್‌ನವರು ಅದನ್ನು ಕೈಗೆತ್ತಿಕೊಂಡು ಅದನ್ನು ಸರಿದೂಗಿಸಿ, ಸರಿಮಾಡಿ ಅದಕ್ಕೆ ಎಲ್ಲಾ ವಿಧವಾಗಿ ಆರ್ಥಿಕ ಪುನಶ್ಚೇತನವನ್ನು ಕೊಟ್ಟು ಈ ಕಾರ್ಯಕ್ರಮಗಳನ್ನು ಜಾರಿಗೊಳಿಸಬಾರದು ಎಂದು ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ತಮ್ಮಗಳ ಗಮನಕ್ಕೆ ತರಬಯಸುತ್ತೇನೆ. ಇನ್ನೊಂದು ಬೆಳೆ ವಿಮೆ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಇವತ್ತು ಬೆಳೆ ವಿಮೆ ಬಗ್ಗೆ ಸಾಕಷ್ಟು ಜಿಜ್ಞಾಸೆಗಳು ಇದೆ. ಇದು ಒಂದು ರೀತಿಯಿಂದ ರೈತರಿಗೆ ಬಹಳ ಅನುಕೂಲಕರ ಮಾಡತಕ್ಕ ಒಂದು ಕಾರ್ಯಕ್ರಮ ಬಹಳ ಅಗತ್ಯವಾದ ಒಂದು ಸಹಾಯವೆಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಯಾವ ಒಂದು ವಿಧವಾದ ನಿಶ್ಚಿತವಾದ ಪರಿಸ್ಥಿತಿ ರೈತರ ಪಾಲಿಗೆ ಇವತ್ತು ಇಲ್ಲ. ಬೆಳೆಗೂ ಇಲ್ಲ. ಬಹುತೇಕ ನಾವು ಮಾಡುತ್ತೇವೆ, ಹಾಕುತ್ತೇವೆ, ಬೆಳೆಯುತ್ತೇವೆ, ಕೊನೆಗೆ ಬಂದು ಕೊನೆಯ ಹಂತದವರೆಗೂ ನಮ್ಮ ಕೈಗೆಟ್ಟುಕದಂಥ ಅನೇಕ ಆತಂಕಗಳನ್ನು ನಾವು ಎದುರಿಸುತ್ತೇವೆ. ನಮ್ಮ ಕಡೆ ಒಂದು ಗಾದೆ ಇದೆ. ಹತ್ತಿಗೆ ಹತ್ತು ಕುತ್ತು ಎಂದು ಅದು ಹಳೆದ ಗಾದೆ ಆದರೆ ಇವತ್ತು ಹತ್ತಿ

ಬೆಳೆಯುವವರಿಗೆ, ಬೇರೆ ಪದಾರ್ಥ ಬೆಳೆಯುವವರಿಗೆ ನೂರೋ, ಸಾವಿರ ಕುತ್ತುಗಳು ಬರುತ್ತದೆ. ಎಲ್ಲಾ ಆದರೂ ಕೊನೆಗೆ ಬೆಲೆ ಬರದಿದ್ದರೆ ಅವರು ಸರ್ವನಾಶವಾಗಿ ಹೋಗುತ್ತಾರೆ. ಎಲ್ಲವನ್ನೂ ಬಹಳ ವ್ಯಾಪಾರಿ ದೃಷ್ಟಿಯಿಂದ ಕಮರ್ಷಿಯಲ್ ವಯಬಿಲಿಟಿ ದೃಷ್ಟಿಯಿಂದ, ವೈಜ್ಞಾನಿಕ ದೃಷ್ಟಿಯಿಂದ ನೋಡುವಾಗ ಅದನ್ನು ಈ ಅಂಶವನ್ನು ಈ ಒಂದು ವ್ಯವಸ್ಥೆಯನ್ನು ಮಾಡುವುದರಲ್ಲಿ ಏನೂ ತಪ್ಪಿಲ್ಲ. ಆದರೆ ಅದು ವ್ಯವಸ್ಥಿತವಾಗಿ ನಡೆಯಬೇಕು. ವಿಮಾ ಕೊಡುವ, ಬೆಳೆಗೆ ವಿಮಾ ಸಿಗುವ, ಪರಿಹಾರ ಸಿಗುವ ವ್ಯವಸ್ಥೆ ಬಹಳ ವ್ಯವಸ್ಥಿತವಾಗಿ ಆಗಬೇಕು. ಆದರೆ ಇವತ್ತು ಏನಾಗಿದೆ ಯಾರೋ ಹೇಳಿದರು, ಅದು ಬಹಳ ದೊಡ್ಡ ಮೋಸ ಎಂದು. ಅದನ್ನು ನಾನು ಸಂಪೂರ್ಣವಾಗಿ ಒಪ್ಪದಿದ್ದರೂ ಭಾಗಶಃವಾದರೂ ಒಪ್ಪುತ್ತೇನೆ. ಇವತ್ತು ಕೆಲವರು ಅದನ್ನು ವೃತ್ತಿಯನ್ನಾಗಿ ಮಾಡಿಕೊಂಡು ಆ ರೀತಿಗೆ ತಂದಿಟ್ಟಿರುವ ಪರಿಸ್ಥಿತಿ ಇದೆ. ಬೆಳೆ ಇಡುವ ಹಾಗೂ ಇಲ್ಲ. ಮಳೆಯೂ ಆಗಿರುವುದಿಲ್ಲ. ಏನೂ ಬೆಳೆಯನ್ನೂ ಹಾಕಿರುವುದಿಲ್ಲ. ಆದರೆ ಪರಿಹಾರವನ್ನು ಪಡೆಯುವ ಪರಿಸ್ಥಿತಿ ಇವತ್ತು ಆಗಿದೆ. ಕೆಲವು ಪ್ರದೇಶಗಳಲ್ಲಿ ಇನ್ನೂ ಅದರಲ್ಲಿ ಬಹಳ ಎಕ್ಸ್‌ಪರ್ಟ್ಸ್ ಆಗಿಬಿಟ್ಟಿದ್ದಾರೆ. ವರ್ಷ ವರ್ಷವೂ ಆದರಿಂದ ಲಾಭ ಪಡೆದಿರತಕ್ಕ ಅನೇಕ ನಿದರ್ಶನಗಳೂ ಅನೇಕ ಇವೆ. ಆದರೆ ಅದರ ಬಗ್ಗೆ ಸಾರ್ವತ್ರಿಕವಾಗಿ ಇವತ್ತು ಜಾಗ್ರತೆಯಾಗಿದೆ. ರೈತನ ಪ್ರಾರಂಭಿಕ ಹಂತದಲ್ಲೇ ಆ ತಪ್ಪನ್ನು ಮಾಡದ ರೀತಿಯಿಂದ ಅದರ ಬಗ್ಗೆ ತರಬೇತಿಯನ್ನು ಕೊಡುವ ಬಗ್ಗೆ ಮಾರ್ಗದರ್ಶನ ಮಾಡುವುದು ಬಹಳ ಸೂಕ್ತ ಎಂದು ಹೇಳಿ ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇವತ್ತು ರಾಜ್ಯ ಸರ್ಕಾರದ ಪಾಲು, ಕೇಂದ್ರ ಸರ್ಕಾರದ ಪಾಲೂ ಆದರಲ್ಲಿ ಇದೆ. ಆರ್ಥಿಕ ಪರಿಸ್ಥಿತಿ ಮೇಲೆ ರಾಜ್ಯಸರ್ಕಾರದ ಆದಷ್ಟು ಬೇಗ ಬಿಡುಗಡೆ ಮಾಡುತ್ತದೆ ಎಂದು ಹೇಳಿ ನಾನು ಭಾವಿಸುತ್ತೇನೆ. ಅದರ ಮೂರನೇ ಒಂದು ಪಾರ್ಟಿ ಏನು ಇದೆ, ಆ ಮೂರನೇ ಪಾರ್ಟಿ ಇನ್‌ಷ್ಯೂರೆನ್ಸ್ ಕಂಪನಿ. ಅವರದು ಯಾವುದೂ ಏನೂ ಸ್ಟೇಕ್ ಇಲ್ಲ. ಅವರದ್ದು ಏನೂ ಅದರಲ್ಲಿ ತೊಂದರೆ ಇಲ್ಲ. ಲಾಭನೂ ಇಲ್ಲ, ಲುಕ್ಸಾನೂ ಇಲ್ಲ. ಆದರೆ ಕೆಲವು ಫೀಗಳ ಮೇಲೆ, ಕೆಲವು ಛಾರ್ಜಸ್ ಮೇಲೆ, ಕೆಲವು ಆವಶ್ಯಕ ಒಂದು ಅವರಿಗೆ ಸಹಾಯದ ಮೇಲೆ, ಕೆಲಸ ಮಾಡಿದ್ದಕ್ಕೆ ಪರಿಹಾರದ ಮೇಲೆ ಅವರು ಈ ಕೆಲಸ ಮಾಡುತ್ತಾರೆ. ಆದರೆ ಎಷ್ಟು ಅಬ್ಜೆಕ್ಟೀವ್ ಆಗಿ ಮಾಡುತ್ತಾರೆನ್ನುವುದು ಬಹಳ ಮುಖ್ಯ. ಆ ಪರಿಸ್ಥಿತಿ ನೋಡಿದಾಗ ಬಹಳ ಗಂಭೀರವಾಗಿದೆ ಎಂದು ಅನ್ನಿಸುತ್ತದೆ; ಅದನ್ನು ನೋಡುತ್ತೇವೆ. ಅನೇಕ ವಿಧವಾಗಿ ನಾವು ಕೇಳುತ್ತೇವೆ. ಆ ಒಂದು ಪರಿಹಾರ ಪಡೆಯಬೇಕಾದರೆ ಎಲ್ಲೆಲ್ಲೋ ಹೋಗಿ ಯಾವ್ಯಾವ ಮಟ್ಟದಲ್ಲೋ ಹಣವನ್ನು ಕೊಟ್ಟು ಬರುತ್ತಾರೆ ಎನ್ನುವಂತಹ ಮಾತನ್ನು ಸಹ ಅವರು ಹೇಳಿದರು. ಅದು ಹೋಗಬೇಕು ಮತ್ತು ರೈತರ ಮಟ್ಟದಲ್ಲಿ ಸಹಿತ ಯಾರು ನಿಜವಾಗಿ ತೊಂದರೆಯಲ್ಲಿರುತ್ತಾರೆ, ತೊಂದರೆಗೆ ಸಿಕ್ಕಿ ಹಾಕಿಕೊಂಡಿರುತ್ತಾರೆ, ಇನ್‌ಶ್ಯೂರ್ ಮಾಡಿರುತ್ತಾರೆ ಅವರ ಹಣ ನೇರವಾಗಿ ದೊರೆಯುವಂತಹ ವ್ಯವಸ್ಥೆ ಮಾಡಬೇಕು. ಮತ್ತು ಕೆಲವೇ ಪದಾರ್ಥದ ಮೇಲೆ, ಬೆಳೆಗಳ ಮೇಲೆ ವಿಮೆ ಇರುವುದಿಲ್ಲ. ಅದು ನೀರಾವರಿ ಪ್ರದೇಶದಲ್ಲಿಯೇ ಇರಬಹುದು, ಅಲ್ಲಿ ಬೆಳೆದಂತಹ ಬೆಳೆಗಳಿಗೆ ವಿಮೆ ಇರುವುದಿಲ್ಲ. ಒಣ ಪ್ರದೇಶದಲ್ಲಿ ಸ್ವಲ್ಪ ಪರಿಹಾರ ಕೊಡುವಂತಹ ಬೆಳೆಗಳಿಗೆ ಮಾತ್ರ ಇರುತ್ತದೆ. 120,130 ಕೋಟಿ ರೂಪಾಯಿ ಪರಿಹಾರದ ಮೊತ್ತ ಆಗಬಹುದು ಇಲ್ಲ ಅದು 100 ಕೋಟಿ ರೂಪಾಯಿ ಆಗಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ನಿಜವಾಗಿಯೂ ಅವನು ಬೆಳೆದು

ಲುಕ್ಸಾನು ಆಗಿದ್ದರೆ ತುಂಬಿ ಕೊಟ್ಟರೆ ಅದೊಂದು ರೀತಿ ಆರ್ಥಿಕ ಚೇತನಕ್ಕೆ ದಾರಿ ಮಾಡಿಕೊಡುತ್ತದೆ. ಅವನಲ್ಲಿ ಒಂದು ತರಹ ಪ್ರಾಮಾಣಿಕತೆ ಬೆಳೆಸಲಿಕ್ಕೆ ಸಾಧ್ಯ ಆಗುತ್ತದೆ. ಆ ರೀತಿಯಾದಂತಹ ಪರಿಸ್ಥಿತಿಯನ್ನು ಇವತ್ತು ಇದರಲ್ಲಿ ತರಬೇತು ಎಂದು ಹೇಳುತ್ತೇನೆ. ಇದೊಂದು ಮೋಸದ ಜಾಲ ಆಗಬಾರದು ಎನ್ನುವ ಮಾತನ್ನು ಹೇಳಿ. ಇವತ್ತು ಬರಗಾಲದ ಪರಿಸ್ಥಿತಿ ಇದೆ; ಅದು ಹೋಗಲಿ ಅದು ಇರಬಾರದು, ಅದನ್ನು ತರಬಾರದು ಎಂದು ಪ್ರಾರ್ಥನೆಯನ್ನು ಮಾಡಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸ ಗೌಡ ಅವರೇ, ತಮಗೆ ಎಷ್ಟು ಸಮಯ ಮಾತನಾಡಲು ಬೇಕು?

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ (ಕೋಲಾರ) : ಮಾನ್ಯ ಅಧ್ಯಕ್ಷರೆ, ತಾವು ಎಷ್ಟು ಹೊತ್ತು ಅವಕಾಶ ಕೊಡುತ್ತೀರಿ, ಅಷ್ಟು ಹೊತ್ತು ಮಾತನಾಡುತ್ತೇನೆ. ಕೋಲಾರದಲ್ಲಿ ಬರ ಜಾಸ್ತಿ ಎಂದು ನಮ್ಮ ನಾಯಕರು ಹೇಳುತ್ತಿದ್ದರು.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ಕೋಲಾರದಲ್ಲಿ ಬರ ಜಾಸ್ತಿ ಇರಬಹುದು, ಆದರೆ ಮಾತನಾಡುವುದಕ್ಕೆ ಕೋಲಾರದವರಿಗೆ ಯಾರಿಗೆ ಬರ ಇದೆ ಹೇಳಿ.

ಅಧ್ಯಕ್ಷರು : ತಾವು ಹತ್ತು ನಿಮಿಷ ಮಾತನಾಡಿ

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಹತ್ತು ನಿಮಿಷ ಆಗುವುದಿಲ್ಲ, ಒಂದು ಗಂಟೆ ಆದರೂ ಮಾತನಾಡಲೂ ಅವಕಾಶ ಕೊಡಿ.

ಅಧ್ಯಕ್ಷರು : ಇವತ್ತು ಮುಕ್ತಾಯವಾಗಿ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ : ಅದಷ್ಟು ಬೇಗ ಮುಗಿಸೋಣ. ಹತ್ತು ನಿಮಿಷ ಆಗುವುದಿಲ್ಲ.

ಅಧ್ಯಕ್ಷರು : ಆಯಿತು, ಹತ್ತು ನಿಮಿಷದ ಬದಲು ಹದಿನೈದು ನಿಮಿಷ ಮಾತನಾಡಿ ಅಷ್ಟರೊಳಗೆ ನಿಮ್ಮ ಭಾಷಣ ಮುಗಿಸಿ.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ (ಕೋಲಾರ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಎರಡು ವಿಚಾರ ಇದೆ. ಒಂದು ಅತಿವೃಷ್ಟಿ ಹಾಗೂ ಇನ್ನೊಂದು ಅನಾವೃಷ್ಟಿ. ಎರಡು ವರ್ಷಗಳ ಹಿಂದೆ ಅತಿವೃಷ್ಟಿ ಆಗಿತ್ತು. ಇದೇ ಮನೆಯಲ್ಲಿ ಬಹಳಷಟ್ಟು ಗಲಾಟೆ ಆಗಿ ನಾವು ಬೆಳೆದಂತಹ ಬೆಳೆಗಳಿಗೆ ಬೆಲೆ ಇಲ್ಲ ಎನ್ನುವಂತಹ ಒಂದು ಕೂಗು ಆಗಿದ್ದರಿಂದ ಆಗ ಆವರ್ತ ನಿಧಿ ನಮ್ಮ ರಾಜ್ಯದಲ್ಲಿ ಹುಟ್ಟಿಕೊಂಡಿತು. ಅದು ಎಷ್ಟೇ ಕೊಡಲಿ, 15 ಕೋಟಿ ರೂ. ಕೊಡಲಿ, 20 ಕೋಟಿ ರೂ. ಕೊಡಲಿ. 100 ಕೋಟಿ ರೂ. ಕೊಡಲಿ, ಸಂಬಂಧಪಟ್ಟ ಮಂತ್ರಿಗಳು ಐನೂರು ಕೋಟಿ ರೂಪಾಯಿ ಎಂದು ಹೇಳುತ್ತಿದ್ದರು, ಅದು ಆಗಲಿ, ಅದು ಬೇರೆ ಮಾತು. ಅದಕ್ಕೆ ಒಂದು ಮೊಮೆಂಟಮ್ ಸಿಕ್ಕಿದೆ. ಅಂದರೆ ಅತಿ ವೃಷ್ಟಿ ಆದಾಗ ಅಥವಾ ಒಳ್ಳೆಯ ಬೆಳೆಗಳು ಆದಾಗ ಒಂದು ಕಡೆ ನಮ್ಮ ಔಟ್‌ಪುಟ್‌ಗೆ ಕೊಡುವಂತಹ ಬೆಲೆ. ಇನ್ನೊಂದು ಅನಾವೃಷ್ಟಿ ವಿಚಾರ. ನಮ್ಮ ರಾಜ್ಯದಲ್ಲಿ ಇವತ್ತು 130 ತಾಲ್ಲೂಕುಗಳಲ್ಲಿ ಮಳೆ ಇಲ್ಲ. ನಾನು ಈಗ

ಒಳಗೆ ಬರುವಾಗ ಒಂದೊಂದು ಹನಿ ಬಿತ್ತು. ನಾನು ಅಂದುಕೊಂಡೆ ಏನೋ ಇವತ್ತು ದೇವರ ದಯೆಯಿಂದ ಮಳೆ ಬರುತ್ತಿದೆ. ಈಗ ಮತ್ತೆ ಬಿತ್ತೋ ಗೊತ್ತಿಲ್ಲ. ನಾನು ಒಳಗೆ ಬಂದ ಮೇಲೆ ನೋಡಲಿಲ್ಲ. ಬಂದಾಗ ಒಂದೊಂದು ಹನಿ ಬೀಳುತ್ತಿದ್ದುದು ನೋಡಿ ಅಂದುಕೊಂಡೆ.

ಅಧ್ಯಕ್ಷರು : ನಾನು ನಿನ್ನೆ ಹೇಳಿದ್ದೆನಲ್ಲಾ ಮಳೆ ಬರುತ್ತದೆ ಎಂದು,

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಹೌದು ನಿನ್ನೆ ನೀವು ಹೇಳಿದ್ದೀರಿ. ಏನೋ ಸೈಂಟಿಫಿಕ್ ಆಗಿ ಟಿವಿಯಲ್ಲಿ ಬಂತು ಎಂದು ಹೇಳುತ್ತಿದ್ದಿರಿ.

ಅಧ್ಯಕ್ಷರು : ಟಿವಿಯಲ್ಲಿ ಅಲ್ಲ, ಹಿಂದೂ ಪತ್ರಿಕೆಯ ನಾಲ್ಕನೇ ಪುಟ ನೋಡಿ ಮಳೆ ಬರುತ್ತಿರುವ ವಿಚಾರ ಇಡೀ ಭಾರತದ ಮ್ಯಾಪ್‌ನಲ್ಲಿ ತೋರಿಸಿದ್ದರು.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ : ಮೂರು ಗಂಟೆಯಲ್ಲಿ ಒಂದೊಂದು ಹನಿ ನಾನು ಒಳಗೆ ಬರುವಾಗ ಬಂತು. ಸಂತೋಷದ ಒಂದು ಸುದ್ದಿ ಕೂಡ. ಇವತ್ತು ಈ ಅನಾವೃಷ್ಟಿಯ ಹಿನ್ನೆಲೆಯಲ್ಲಿ ನಮ್ಮ ರಾಜ್ಯದಲ್ಲಿ ಬಹಳ ಕಷ್ಟದ ದಿನಗಳನ್ನು ನಾವು ನೋಡುತ್ತಿದ್ದೇವೆ. ಹಿಂದೆ ಮಾನ್ಯ ಗುಂಡೂರಾವ್ ಅವರು ಮುಖ್ಯಮಂತ್ರಿಗಳು ಆಗಿದ್ದಾಗ ಈ ತರಹ ಅತಿವೃಷ್ಟಿ ಬಂದಾಗ ಅವರು ವೈಜ್ಞಾನಿಕವಾಗಿ ಮಳೆ ಬರುವ ಹಾಗೆ ಒಂದು ಉಪ್ಪು ಚೆಲ್ಲಿದರೆ ಮಳೆ ಬರುತ್ತದೆ ಎನ್ನುವ ಒಂದು ಪ್ರಯತ್ನ ಮಾಡಿದ್ದರು. ಆ ಉಪ್ಪು ಚೆಲ್ಲಿ ಆಗಿ 15 ದಿವಸಕ್ಕೋ, ತಿಂಗಳಿಗೋ ಬಹಳ ಯಥೇಚ್ಛವಾದ ಮಳೆ ಬಂತು. 1983-84 ಎಂದು ಕಾಣುತ್ತದೆ ನಾನು ಆ ವರ್ಷ ಮರೆತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : 1983-84ರಲ್ಲಿ ನೀವೇ ಬಂದಿರಿ. 1980 ರಿಂದ 1983ರ ವರೆಗೆ ನಾವು ಇದ್ದೆವು.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ : ನೀವು ಮಂತ್ರಿಗಳು ಆಗಿದ್ದರಿಂದ ನಿಮಗೆ ಚೆನ್ನಾಗಿ ಜ್ಞಾಪಕ ಇದೆ. ಉಪ್ಪು ಹಾಕಿದಾಗ ಬರಲಿಲ್ಲ. ಆದಾದ ಮೇಲೆ ಬಹಳ ಒಳ್ಳೆಯ ಮಳೆ ಆಯಿತು. ಇದರ ಬಗ್ಗೆ ಏನಾದರೂ ಸರ್ಕಾರ ಚಿಂತನೆ ಮಾಡಿದೆಯೇ? ವೈಜ್ಞಾನಿಕವಾಗಿ ಮಳೆ ಬರಲಿಕ್ಕೆ ಏನಾದರೂ ಅವಕಾಶಗಳು ಇವೆಯೇ ಅಥವಾ ಬೇರೆ ದೇಶಗಳ ಜೊತೆ ಸಂಪರ್ಕ ಮಾಡುತ್ತದಾ ಸರ್ಕಾರ? ಜಪಾನ್‌ನಲ್ಲಿ ಈ ತರಹ ಒಂದು ಟೆಕ್ನಾಲಜಿ ಇದೆ ಎಂದು ನಾನು ಕೇಳಿದ್ದೇನೆ. ಅದು ಸರಿಯಾಗಿದೆ ಎಂದು ನಾನು ಹೇಳಲಾರೆ. ಅದನ್ನು ನಾನು ಕೇಳಿದ್ದೇನೆ. ಇದಕ್ಕೆ ಏನಾದರೂ ಯೋಚನೆ ಮಾಡಿದ್ದಾರಾ? ಚಿಂತನೆ ಮಾಡಿದ್ದಾರಾ ಎನ್ನುವುದನ್ನೂ ಕೂಡ ಯೋಚನೆ ಮಾಡಬೇಕು ಎನ್ನುವುದೇ ನನ್ನ ವಿಷಯವಾಗಿದೆ. ಇವತ್ತು ಮಳೆ ಇಂಗಿ ಹೋಗಿದೆ. ಸರ್ಕಾರ ಇದಕ್ಕೆ ಏನು ಯೋಚನೆ ಮಾಡಿದ್ದಾರೆ ಎಂದು ಕೇಳಿದರೆ ಇನ್ನೂ ಯೋಚನೆ ಮಾಡುವುದರಲ್ಲೇ ಇದ್ದಾರೆ. ಇವತ್ತು ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಇಲ್ಲ. ಇನ್ನೊಬ್ಬ ಮಂತ್ರಿಗಳು ಇದ್ದಾರೆ ಎಂದು ನನಗೆ ಈಗ ತಾನೇ ಗೊತ್ತಾಯಿತು, ಮಾನ್ಯ ನಾಗಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾರೆ. ಇವತ್ತು ಮಳೆ ಇಂಗಿ ಹೋದರೆ ಏನು ಮಾಡಬೇಕು ಎಂದು ಸಂಬಂಧಪಟ್ಟ ಮಂತ್ರಿಗಳು ಯೋಚನೆ ಮಾಡಬೇಕು. ಎಲ್ಲವನ್ನೂ ಮಾನ್ಯ ಮುಖ್ಯಮಂತ್ರಿಗಳೇ ಮಾಡುವುದಕ್ಕೆ ಆಗುವುದಿಲ್ಲ. ಸಂಬಂಧಪಟ್ಟ ಮಂತ್ರಿಗಳು ಅದರ ಬಗ್ಗೆ ಏನಾದರೂ ಚಿಂತನೆ ಮಾಡಿದ್ದಾರಾ ಎಂಬುದನ್ನು

ಕೇಳಿದರೆ ಅದೊಂದು ದೊಡ್ಡ ಸೊನ್ನೆ ಎಂದು ನಾನಂತೂ ಹೇಳುತ್ತೇನೆ. ಏಕೆಂದರೆ ನಮ್ಮ ರೆವಿನ್ಯೂ ಮಂತ್ರಿಗಳು ಅದರ ಬಗ್ಗೆ ಯೋಚನೆಯೇ ಮಾಡುವುದಿಲ್ಲ. ಆ ಮೇಲೆ ವ್ಯವಸಾಯ ಇಲಾಖೆಯ ಮಂತ್ರಿಗಳು ಈಗ ಹೊಸದಾಗಿ ಬಂದಿದ್ದಾರೆ. ಪಾಪ ಅವರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಆಗುವುದಿಲ್ಲ. ಇವತ್ತು ಮಳೆ ಇಂಗಿ ಹೋದರೆ ಮಳೆ ಬರದೇ ಹೋದರೆ ಏನೇನು ಯೋಜನೆ ಮಾಡಬೇಕು? ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವುದರ ಬಗ್ಗೆ ಸರ್ಕಾರ ಖಂಡಿತವಾಗಿ ಒಂದು ಪ್ರೋಗ್ರಾಮ್ ಹಾಕಿಕೊಳ್ಳಬೇಕಾಗುತ್ತದೆ. ಆದ್ದರಿಂದ ಕಾರ್ಯಕ್ರಮವನ್ನು ಏನಾದರೂ ಹಾಕಿಕೊಂಡಿದ್ದಾರಾ ಏನು ಎಂದು ಇವತ್ತು ನಾವು ಯೋಚನೆ ಮಾಡಬೇಕು. ಇವತ್ತು ನಮ್ಮ ರಾಜ್ಯದಲ್ಲಿ ಕೇವಲ ಎರಡು ಪರ್ಸೆಂಟ್ ಎಂಪ್ಲಾಯೀಸ್ ಇದ್ದಾರೆ. 64 ಪರ್ಸೆಂಟ್ ಇನ್‌ಕಂನ್ನು ನಾವು ಸಂಬಂಳ-ಸಾರಿಗೆ ಟಿಎ-ಡಿಎಗಾಗಿ ಅವರಿಗೆ ಹೋಗುತ್ತದೆ. ಉಳಿಯುವಂತಹ ಹಣ ಎಷ್ಟು ಎಂದರೆ 36 ಪರ್ಸೆಂಟ್ ಮೊನ್ನೆ ಚಿಂತಾಮಣಿಯಲ್ಲಿ ಸಂಬಳ ಕೊಡುವುದು ಲೇಟಾಗಿದೆ. 4ನೇ, ತಾರೀಖು, 6ನೇ ತಾರೀಖು ಆಯಿತು. ಅವಾಗಲೇ ಪತ್ರಿಕೆಗಳು ಬಂದಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಆ ಖಾತೆಯ ಸಂಬಂಧಪಟ್ಟ ಮಂತ್ರಿಗಳು. ಇನ್ನೂ ಸಂಬಳ ಕೊಟ್ಟಿಲ್ಲ ಅಂದರೆ ಹಣ ಇಲ್ಲ ಎಂತಲಾ?

ಶ್ರೀ ಕಾಗೋಡು ತಿಮ್ಮಪ್ಪ : ಒಂದಕ್ಕೊಂದು ಉಪ್ಪು ಖಾರ ಹೇಳುವುದಕ್ಕೆ ಹೋಗಬೇಡಿ. ಅಲ್ಲಿ ಏನಾಯಿತು ಎಂದರೆ ಮೇಲ್ದರ್ಜೆಗೆ ಏರಿದಾಗ ನಾವು ಸ್ಯಾಲರಿ ಕಾಂಪೊನೆಂಟ್‌ನ್ನು 2-3 ಹೆಡ್‌ನಲ್ಲಿ ಸ್ಯಾಂಕ್ಷನ್ ಮಾಡಿದ್ದೇವೆ. ಬಜೆಟ್ ಪ್ರೋಸೆಸ್ ಮಾಡುವಾಗ ಅದು ಸ್ಟೇಟ್ ಸೆಕ್ಟಾರ್‌ಗೆ ಬಂತು. ಆ ನಂತರ ಒಂದು ಆಜ್ಞೆ ಆಯಿತು. ಒಂದು ಆಜ್ಞೆ ಹೊರಡಿತ್ತು ಸಂಬಳ ಕೊಟ್ಟರು. ಇನ್ನೊಂದು ಆಜ್ಞೆ ಹೊರಟಿರಲಿಲ್ಲ. ಅದು ಲೋಕಲ್ ಆಫೀಸರ್ ಅವರ ಲ್ಯಾಫ್ಸ್ ಅಷ್ಟೇ, ಬೇರೆ ಅಲ್ಲ, ಅವತ್ತು ಹೇಳಿದ ತಕ್ಷಣವೇ ಆರ್ಡರ್ ಹೊರಡಿಸಿದ್ದೇವೆ. ನಿನ್ನೆ ಕೂಡ ವೆರಿಫೈ ಮಾಡಿದ ಸಂಬಳ ಕೂಡ ಕೊಟ್ಟಿದ್ದಾರೆ.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ : ಬಹಳ ಸಂತೋಷ. ನೀವೂ ಆ ಕಾಳಜಿ ಏನು ಇಟ್ಟು ಕೊಂಡಿದ್ದೀರಿ ನಮ್ಮ ಎಂಪ್ಲಾಯೀಸ್‌ಗೆ ಸಂಬಳ ಕೊಡಬೇಕು ಎಂದು, ಅದೇ ಕಾಳಜಿ ವಿಮೆ ವಿಚಾರದಲ್ಲಿ ಏಕೆ ಇಲ್ಲ ಎಂಬುದೇ ನನ್ನ ಪ್ರಶ್ನೆ. ನೀವು ಇದನ್ನು ಹೇಳುತ್ತೀರಿ ಎಂತರೇ ನಾನು ಚಿಂತಾಮಣಿಯ ವಿಚಾರ ಹೇಳಿದೆ. ನೀವು ಹೇಳಲಿ ಎಂತಲೇ ನಾನು ಚಿಂತಾಮಣಿ ವಿಚಾರ ಎತ್ತಿದ್ದು. ಯಾವ ಸಂಬಳ 3-ದಿವಸ, 4 ದಿವಸ ಲೇಟಾಗಿ ಕಡಿಮೆ ಆಗುವಷ್ಟರಲ್ಲಿ ನಿಮಗೆಲ್ಲಾ ಜ್ಞಾನೋದಯ ಆಗಿದೆ, ಆದರೆ ವಿಮೆ ವಿಚಾರದಲ್ಲಿ ನೀವು ಹೇಳಿದ ಹಾಗೆಯೇ ಹೋದ ವರ್ಷ ಬೆಳೆಯೇ ಆಗಿಲ್ಲ. ನಾವು ಹಣ ಕೊಡುತ್ತೇವೆ ಎಂದು ನೀವು ಹೇಳಿದ್ದೀರಿ. ದುರಾದೃಷ್ಟವಶಾತ್ ಬರದ ಪರಿಸ್ಥಿತಿಯಿಂದಾಗಿ ರಾಜ್ಯವು ತೊಂದರೆಯ ದಿನಗಳನ್ನು ಅನುಭವಿಸಿದೆ. ಸರ್ಕಾರವು ಹಲವಾರು ಬರ ಪರಿಹಾರ ಕ್ರಮಗಳ ಮೂಲಕ ರೈತರ ತೊಂದರೆಗಳನ್ನು ನಿವಾರಿಸಿದೆ. ಇಳುವರಿಯಲ್ಲಿ ವೈಫಲ್ಯವಾದ ಕಾರಣಕ್ಕಾಗಿ ಬೆಳೆ ವಿಮೆಗೆ ಚಂದಾದಾರರಾಗಿದ್ದ ರೈತರಿಗೆ ಸುಮಾರು 120 ಕೋಟಿ ರೂಪಾಯಿಗಳ ಪರಿಹಾರ ದೊರೆಯಲಿದೆ ಇದು ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ 2002-03ನೇ ಸಾಲಿನ ಭಾಷಣದಲ್ಲಿ ಹೇಳಿದ್ದಂತಹ ಮಾತು. ಇವತ್ತು ಸುಮಾರು ಆ ಹಣವನ್ನು ನೀವು ಕಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಸುಮಾರು 50 ಕೋಟಿ ರೂಪಾಯಿ ಖರ್ಚಾಗಿದೆ.

ಶ್ರೀ ಕೆ.ಶ್ರೀನಿವಾಸ ಗೌಡ ಕುಡುವನಹಳ್ಳಿ : ನೀವು ಯಾವತ್ತು ಕಟ್ಟಿದ್ದೀರಿ ಎಂಬ ಬಗ್ಗೆ ನನ್ನಲ್ಲಿ ಮಾಹಿತಿ ಇದೆ. ನಾನು ಯಾವುದೂ ಮಾಹಿತಿ ಇಲ್ಲದೇ ಮಾತನಾಡುವುದಿಲ್ಲ. ನೀವು ಯಾವತ್ತು ಕಟ್ಟಿದ್ದೀರಿ? ಈ ಹಣವನ್ನು ನೀವು ಇತ್ತೀಚೆಗೆ 2-3 ದಿವಸದಲ್ಲಿ ಕಟ್ಟಿದ್ದೀರಿ. 54 ಕೋಟಿ ರೂಪಾಯಿ ಅಂದರೆ 54.99 ಕಟ್ಟಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಯಾವತ್ತು ಕಟ್ಟಬೇಕು ಎನ್ನುತ್ತಾರೆ ಅವತ್ತು ಕಟ್ಟುತ್ತಾರೆ. ಸುಮ್ಮನೇ ಮುಂಚೆ ಹೋಗಿ ಕೊಟ್ಟು ಬಿಡುತ್ತಾರಾ?

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೆ, ನೋಡಿ ಜಗಳಗಂಟಿ ಎಂದರೆ ನಮ್ಮ ಮಾನ್ಯ ತಿಮ್ಮಪ್ಪನವರು. ಬಹಳ ಜಗಳ ಕಾಯುತ್ತಾರೆ. ಏನು ಇಲ್ಲದಿದ್ದರೂ ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗುತ್ತಾರೆ. ನೀವು ಒಪ್ಪಿಕೊಳ್ಳಿ. ಹೌದು ನಾವು ಮುಂದೆಯೇ ಕಟ್ಟಬೇಕಾಗಿತ್ತು, ಕಟ್ಟಲಿಲ್ಲ ತಪ್ಪಾಗಿದೆ ಎಂದು ಒಪ್ಪಿಕೊಳ್ಳಿ. ಈಗ ಕಟ್ಟಿದ್ದೇವೆ ಎಂದು ಒಪ್ಪಿಕೊಳ್ಳಿ ನಾನು ಬೇಕಾದರೆ ಕುಳಿತುಕೊಳ್ಳುತ್ತೇನೆ, ಸಂತೋಷದ ವಿಚಾರ. ಆದರೆ ನೀವು ತಪ್ಪೂ ಮಾಡಿದಾಗ ಅದನ್ನು ಡಿಫೆಂಟ್ ಮಾಡಿಕೊಳ್ಳುವುದು ತಪ್ಪು. ಸಮಯಕ್ಕೆ ಸರಿಯಾಗಿ ಕಟ್ಟಬೇಕು. ಈಗ ನಿಮ್ಮ ಆಸ್ಪತ್ರೆಯಲ್ಲಿ ಅಲ್ಲಿನ ಕೆಲಸಗಾರರಿಗೆ ಸಂಬಳ ಆಗದಿದ್ದಕ್ಕೆ ನಿಮಗೆ ನೋವಾಗಿದೆ. ರೈತರ ವಿಮೆ ಕಟ್ಟದಿದ್ದಾಗ ನಿಮಗೆ ಏತಕ್ಕಾಗಿ ನೋವಾಗಲಿಲ್ಲ? ಸರ್ಕಾರ ಏಕೆ ಇದರ ಬಗ್ಗೆ ಚಿಂತನೆ ಮಾಡಲಿಲ್ಲ? ಈ ಕುರಿತ ಕಾಳಜಿ ಏಕೆ ಉಂಟಾಗಲಿಲ್ಲ? ವ್ಯತ್ಯಾಸವಾಗಿರುವುದು ಇಲ್ಲಿಯೇ. ಈ ವ್ಯತ್ಯಾಸವನ್ನು ಹೋಗಲಾಡಿಸುವುದೇ ನಮ್ಮ ನಿಮ್ಮೆಲ್ಲರ ಕರ್ತವ್ಯಗಳಾಗಬೇಕೆಂಬುದು ನನ್ನ ಧ್ಯೇಯವಾಗಿದೆ. ನೀವು ಇದನ್ನು ಮೊದಲೇ ಕಟ್ಟಿದ್ದರೆ ನಿಯಮ 69ರಡಿ ಇಷ್ಟೊತ್ತು ಮಾತನಾಡುವ ಅಗತ್ಯವಿರಲಿಲ್ಲ. ಅದು ಅಷ್ಟಕ್ಕೆ ನಿಲ್ಲುವುದಿತ್ತು. ಆದರೆ, ನೀವು ಬಹಳ ಲೇಟಾಗಿ ಕಟ್ಟಿದ್ದೀರೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ನಾವೇಕೆ ರೈತರಾಗಿ ಹುಟ್ಟಿದ್ದೇವೆಂದು ಒಮ್ಮೊಮ್ಮೆ ನನಗನ್ನಿಸುತ್ತದೆ. ಕಳೆದ ಯಾವ ಬೆಳೆ ಬೆಳದರೂ ಸೂಕ್ತ ಬೆಲೆ ಸಿಗಲಿಲ್ಲ. ಕೋಲಾರ ಜಿಲ್ಲೆಯಲ್ಲಿ ಹುಣಸೆ ಮರ ಸಾಕಷ್ಟು ಸಂಖ್ಯೆಯಲ್ಲಿದ್ದು ಹುಣಸೆ ಕಾಯಿ ಫಸಲನ್ನು ತೆಗೆದುಕೊಳ್ಳಲು ಮರ ಹತ್ತುವುದಕ್ಕೂ ಕಷ್ಟವಾಗಿದೆ. ಏಕೆಂದರೆ, ಕೂಲಿ ಕೊಡುವುದಕ್ಕಾಗುವುದಿಲ್ಲವೆಂದು ಮರದಿಂದ ಹುಣಸೆಕಾಯಿಯನ್ನು ಉದುರಿಸಲಿಲ್ಲ. ಇನ್ನು ಪತ್ರಿಕೆಗಳಲ್ಲಿ ಮಾವು ಫಸಲು ಬಗ್ಗೆ ಪ್ರಸ್ತಾಪಿಸಿ, ಈ ಸಲ ಅಷ್ಟು ದರಕ್ಕೆ ಮಾರಾಟವಾಗುತ್ತದೆ, ಇಷ್ಟು ದರಕ್ಕೆ ಮಾರಾಟವಾಗುತ್ತದೆಂದು ಹೇಳಲಾಗಿತ್ತು ಮಾವು ಫಸಲು ಬಂದಾಗ ಎಷ್ಟು ದರಕ್ಕೆ ಮಾರಿದ್ದೇವೆಂದು ನಮಗೂ-ನಿಮಗೂ ಗೊತ್ತು ಕೊನೆಗೆ ಮಾವಿನ ಬೆಲೆ ಬಿದ್ದು ಹೋಯಿತು. ಇನ್ನು ತೆಂಗು ಬೆಳೆಗೆ ನುಸಿ ರೋಗ ತಗುಲಿದ್ದುದರಿಂದ ಅದರ ಗತಿ ಹೇಗಿದೆಯೆಂದು ಮೇಲೆ ನೋಡುವುದೇ ಬೇಡವೆನಿಸುತ್ತದೆ. ನಮ್ಮ ಜಿಲ್ಲೆನಲ್ಲಿ ಜೆ.ಸಿ.ಬಿ. ತೆಗೆದುಕೊಂಡು ತಳ್ಳಲಿಕ್ಕೆ ಹೋಗಿದ್ದಾರೆ. ನುಸಿರೋಗ ತಡೆಗಟ್ಟುವ ಸಲುವಾಗಿ ತೆಂಗು ಬೆಳೆಗೆ ಔಷಧಿ ಸಿಂಪಡಿಸಲು ಹೋದ ಮಂತ್ರಿಗಳೇ ಮಂತ್ರಿಮಂಡಲದಿಂದ ಹೊರಟು ಹೋದರು, ಪಾಪ! ತೆಂಗಿಗೆ ನುಸಿರೋಗ ಯಾವಾಗ ಹರಡಿತೋ ನಮ್ಮ ಕೃಷಿ ಮಂತ್ರಿಗಳಾಗಿದ್ದವರಿಗೂ ಈ ರೋಗ ತಗುಲಿದ್ದು ನೋವಿನ ಸಂಗತಿ. ಅವರ ಬಗ್ಗೆ ನನಗೆ ಹೆಮ್ಮೆ ಇದೆ. ಏಕೆಂದರೆ, ಕಳೆದ

ವರ್ಷ ಸುಮಾರು ಒಂದು ನೂರು ಕೋಟಿ ರೂಪಾಯಿಗಳಷ್ಟು ಆವರ್ತ ನಿಧಿ ಇಡಬೇಕೆಂದು ಪ್ರಸ್ತಾಪವಾದ ತಕ್ಷಣವೇ ಅವರು ಅದಕ್ಕೆ ಸ್ಪಂದಿಸಿ ಆ ಕುರಿತಾದ ಪ್ರಸ್ತಾವವನ್ನು ಸಚಿವ ಸಂಪುಟ ಸಭೆ ಮುಂದಿಟ್ಟು ಅದಕ್ಕೆ ಒಪ್ಪಿಗೆ ತೆಗೆದುಕೊಳ್ಳುವ ಮೂಲಕ ತಾವು ಹೇಳಿದ ಕಾರ್ಯವನ್ನು ಮಾಡಿ ತೋರಿಸಿದರು. ಆದುದರಿಂದ, ಉತ್ತಮ ಕೆಲಸ ಮಾಡಿದವರು ಮಂತ್ರಿಮಂಡಲದಿಂದ ಹೊರಡುಹೋದರಲ್ಲಾ ಎಂಬುದು ನನ್ನ ವ್ಯಥೆಯಾಗಿದೆ. ಇನ್ನು ಕೋಲಾರ ಜಿಲ್ಲೆಯಲ್ಲಿ ರೇಷ್ಮೆ ಬೆಳೆ ಯಾವ ಪರಿಸ್ಥಿತಿಗೆ ಬಂದಿದೆಯೆಂದರೆ, ಮಾನ್ಯ ಅಧ್ಯಕ್ಷರೆ, ತಾವು ಕೋಲಾರ ಜಿಲ್ಲೆಯವರಾಗಿರುವುದರಿಂದ ತಮ್ಮ ಗಮನಕ್ಕೆ ಒಂದು ವಿಷಯ ತರಬಯಸುತ್ತೇನೆ. ರೇಷ್ಮೆ ಧಾರಣೆ ಕುಸಿದಿದ್ದರಿಂದ ಒಬ್ಬ ರೈತನನ್ನು ಕೋಲಾರ ಜಿಲ್ಲೆಯಲ್ಲಿ ಟ್ರ್ಯಾಕ್ಟರ್ ಮೇಲೆ ಹತ್ತಿಸಿ ಆತನ ಪಕ್ಕದಲ್ಲಿ ರೇಷ್ಮೆ ಸೊಪ್ಪು ಇಟ್ಟು ಸಾಂಕೇತಿಕವಾಗಿ ನೇಣು ಹಾಕಿಕೊಳ್ಳುವಂತೆ ಮಾಡಿ ಕೋಲಾರದಾದ್ಯಂತಹ ಮೆರವಣಿಗೆ ಮಾಡಿದ್ದಾರೆ. ರೇಷ್ಮೆ ಬೆಳೆಗಾರರಾದ ರೈತರ ಪರಿಸ್ಥಿತಿ ಇಂದು ಯಾವ ದಿಕ್ಕಿನತ್ತ ಸಾಗುತ್ತಿದೆ ಎಂಬುದನ್ನು ಗಮನಿಸಬೇಕು. ಕೇಂದ್ರ ಸರ್ಕಾರ ಚೀನಾದಿಂದ ರೇಷ್ಮೆಯನ್ನು ಆಮದು ಮಾಡಿಕೊಂಡಿತು. ಇದು ರೇಷ್ಮೆ ಬೆಳೆಗಾರರಿಗೆ ಬಂದಿರುವ ಅತ್ಯಂತ ದೊಡ್ಡ ಸಮಸ್ಯೆ. ಇದು ಯಾವ ಪರಿಸ್ಥಿತಿಗೆ ಹೋಗಿ ನಿಲ್ಲಬೇಕಿತೋ ಅಲ್ಲಿಗೆ ನಿಲ್ಲಲಿಲ್ಲ. ಒಂದು ಕೆ.ಜಿ ರೇಷ್ಮೆ ಗೂಡಿಗೆ ರೂ. 125-150 ಇದ್ದುದ್ದು ಇವೊತ್ತು ರೂ. 50-60ಗಳಿಗೆ ಕುಸಿದಿದೆ. ರೇಷ್ಮೆ ಧಾರಣೆ ಎಷ್ಟು ಕೆಳಗೆ ಕುಸಿಯಲು ಸಾಧ್ಯವೋ ಅಷ್ಟು ಕುಸಿದಿದೆ. ಚೀನಾ ದೇಶದಿಂದ ಆಮದಾದ ರೇಷ್ಮೆ ಕುರಿತ ಅಂಕಿ-ಅಂಶಗಳನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. 1997-98ರಲ್ಲಿ ಸುಮಾರು 2,346 ಟನ್‌ಗಳಷ್ಟು ರೇಷ್ಮೆ ಬಂದಿದ್ದರೆ 98-99ರಲ್ಲಿ 2,743 ಟನ್, 99-2000ರಲ್ಲಿ 5,018 ಟನ್, 2000-2001ರಲ್ಲಿ 4,713 ಟನ್ ಹಾಗೂ 2001-02 ರಲ್ಲಿ 6,,797 ಟನ್‌ಗಳಷ್ಟು ರೇಷ್ಮೆ ಚೈನಾದೇಶದಿಂದ ನಮ್ಮ ದೇಶಕ್ಕೆ ಬಂದಿದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಚೀನಾ ದೇಶದಿಂದ ಆಮದಾಗಿ ಬಂದಿರುವ ರೇಷ್ಮೆ ಕುರಿತಂತೆ ಹೇಳುವುದಾದರೆ, ಆಮದು ಶುಲ್ಕ ಕೊಟ್ಟು ನಮ್ಮ ದೇಶಕ್ಕೆ ಬಂದಿರುವ ರೇಷ್ಮೆಯ ಅಂಕಿ-ಅಂಶಗಳ ಮಾಹಿತಿ ಮಾತ್ರ ನಿಮ್ಮ ಹತ್ತಿರ ಇದೆ. ಆದರೆ, ಆಮದು ಶುಲ್ಕ ನೀಡದೆ ಕಳ್ಳತನದ ದಾರಿಯಲ್ಲಿ ರೇಷ್ಮೆ ಪ್ರಮಾಣದ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇಲ್ಲ. ಆಮದು ಶುಲ್ಕ ಕೊಟ್ಟಿದ್ದರೆ ಎಷ್ಟು ಪ್ರಮಾಣದಲ್ಲಿ ಚೀನಾ ದೇಶದಿಂದ ನಮ್ಮ ದೇಶಕ್ಕೆ ರೇಷ್ಮೆ ಬಂದಿದೆಯೆಂಬುದು ಗೊತ್ತಾಗುತ್ತಿತ್ತು, ಆಮದು ಸುಂಕ, ಕಸ್ಟಮ್ಸ್ ಡ್ಯೂಟಿ ಇತ್ಯಾದಿ ನೀಡದೆ ಬೇರೆ ಮಾರ್ಗದಲ್ಲಿ ಕದ್ದು ತರುತ್ತಿರುವ ರೇಷ್ಮೆ ಬಗ್ಗೆ ಲೆಕ್ಕ ಇರುವುದಿಲ್ಲ. ಇದು ನಮ್ಮ ರೇಷ್ಮೆ ಉದ್ದಿಮೆಗೆ, ಕೃಷಿಗೆ ಬೀಳುತ್ತಿರುವ ದೊಡ್ಡ ಪೆಟ್ಟು.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಬಹಳ ಮುಖ್ಯವಾಗಿರುವುದೇನೆಂದರೆ, ರೇಷ್ಮೆ ಗೂಡಿನ ಧಾರಣೆ ಕಡಿಮೆಯಾಗಬೇಕಾದರೆ ಗೂಡನ್ನು ಕೊಳ್ಳುವಂತಹ ರೀಲರ್ಸ್ ಏನಿದ್ದಾರೆ, ಅವರಲ್ಲಿ ಬಹಳಷ್ಟು ಜನ ಅಲ್ಪಸಂಖ್ಯಾತರು. ಒಂದು ಕೆ.ಜಿ. ರೇಷ್ಮೆ ಗೂಡಿಗೆ 1,200 ರೂಪಾಯಿಗಳಿದ್ದುದ್ದು ಇವೊತ್ತು 700 ರೂಪಾಯಿಗಳಿಗೆ ಕುಸಿದಿವುದರಿಂದ ಮಾರುಕಟ್ಟೆಗೆ ತೆರಳಿ ಗೂಡನ್ನು ಹೇಗೆ ಖರೀದಿಸಬೇಕೆಂಬ ಬಗ್ಗೆ ಯೋಚಿಸುತ್ತಿದ್ದಾರೆ. ಯಾವಾಗ ಅವರ ಶಕ್ತಿ ಕುಂದಿತೋ ರೈತನ ಪರಿಸ್ಥಿತಿಯೂ ಹದಗೆಟ್ಟಿತು. ಇದರ ಬಗ್ಗೆ ಯಾವ ರೀತಿ ಕ್ರಮ ಕೈಗೊಳ್ಳಬಹುದೆಂಬ ಬಗ್ಗೆ

ಸರ್ಕಾರ ಯೋಚಿಸಬೇಕು. ನಮ್ಮ ದೇಶದ ಇತರ ರಾಜ್ಯಗಳಲ್ಲಿ ರೇಷ್ಮೆಯಿಂದ ಬಟ್ಟೆ ತಯಾರಿಸುವುದು ಲಾಭದಾಯಕವಾಗುವುದಿಲ್ಲವೆಂಬ ಕಾರಣಕ್ಕೆ ನಮ್ಮ ರಾಜ್ಯಕ್ಕೆ ರೇಷ್ಮೆಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಆದರೆ, ಇದರ ನೇರ ಹೊಡೆತ ರೈತನ ಮೇಲೆ ಬೀಳುತ್ತಿದೆ. ಈ ಕುರಿತು ಸರ್ಕಾರ ಗಂಭೀರವಾಗಿ ಚಿಂತಿಸಬೇಕು. ನಾವು ಆಮದು ಮಾಡಿಕೊಳ್ಳುತ್ತಿರುವ ರೇಷ್ಮೆಗೂ ಮತ್ತು ಜವಳಿಗೂ ಯಾವುದೇ ಹೊಂದಾಣಿಕೆ ಇರುವುದಿಲ್ಲ. ಆದಕಾರಣ, ಆಮದು ಮಾಡಿಕೊಳ್ಳುತ್ತಿರುವ ರೇಷ್ಮೆಯನ್ನು ಕೂಡಲೇ ನಿಲ್ಲಿಸಿ, ರಫ್ತು ಮಾಡುವ ಜವಳಿ ಹಾಗೂ ಗುಣಮಟ್ಟದ ರೇಷ್ಮೆಯನ್ನು ಮಾತ್ರ ಅಮದು ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕಾಗುತ್ತದೆ ಈ ರೀತಿ ಕ್ರಮ ಕೈಗೊಂಡಾಗ ಮಾತ್ರ ರೇಷ್ಮೆಗೂಡಿನ ಧಾರಣೆಯಲ್ಲಿ ಸ್ಥಿರತೆಯುಂಟಾಗುತ್ತದೆಂದು ಹೇಳಲಿಚ್ಛಿಸುತ್ತೇನೆ. ಇನ್ನು ಇಂಪೋರ್ಟ್ ಡ್ಯೂಟಿ ಬಗ್ಗೆ ಹೇಳುವುದಾದರೆ, ಇದು ಶೇಕಡ 30.2ರಷ್ಟಿದೆ. ಇದನ್ನು ಕನಿಷ್ಠ ಶೇಕಡ 60.70ರಷ್ಟು ಮಾಡದಿದ್ದರೆ ರೇಷ್ಮೆ ಬೆಳೆಯುವ ರೈತರು ಹಾಳಾಗುವುದಿಲ್ಲ, ಬದಲಿಗೆ ಕೋಲಾರ ಜಿಲ್ಲೆಯಲ್ಲಿ ರೈತರು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಸಜ್ಜಾಗಿದ್ದಾರೆ. ಈಗಾಗಲೇ 16-18 ಆತ್ಮಹತ್ಯೆ ಪ್ರಕರಣಗಳಾಗಿವೆ. ಇದು ಇನ್ನೂ ಹೆಚ್ಚಾಗುತ್ತದೆ. ಇದನ್ನು ತಡೆಗಟ್ಟಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿರುವುದರಿಂದ ಅವರಲ್ಲಿ ಕೇಳಿಕೊಳ್ಳುವುದೇನೆಂದರೆ, ರಾಜ್ಯ ಸರ್ಕಾರದ ವತಿಯಿಂದ ರೇಷ್ಮೆ ಬೆಳೆಯುವ ಕ್ಷೇತ್ರದ ಶಾಸಕರುಗಳ ನಿಯೋಗವೊಂದನ್ನು ಮಾನ್ಯ ಪ್ರಧಾನಮಂತ್ರಿಗಳ ಹಾಗೂ ಜವಳಿ ಮಂತ್ರಿಗಳ ಬಳಿಗೆ ಕರೆದುಕೊಂಡು ಹೋಗಬೇಕಾಗುತ್ತದೆ.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಹಾಗೂ ಜವಳಿ ಸಚಿವರು) : ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆದಿದ್ದು, ದಿನಾಂಕ 18ರಂದು ಸರ್ವ ಪಕ್ಷಗಳ ನಿಯೋಗವೊಂದನ್ನು ಕರೆದುಕೊಂಡು ಹೋಗಲು ತೀರ್ಮಾನವಾಗಿರುವುದರಿಂದ ತಾವು ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರಿಗೆ ಒಂದು ಸಲಹೆ ನೀಡಬಯಸುತ್ತೇನೆ. ಹಿಂದೆ ಮಾನ್ಯ ಎಂ. ಮಹದೇವ್‌ರವರು ರೇಷ್ಮೆ ಸಚಿವರಾಗಿದ್ದಾಗ ರೇಷ್ಮೆ ಬೆಳೆಯುವ ಎಲ್ಲಾ ಪ್ರದೇಶದ ಗೌರವಾನ್ವಿತ ಶಾಸಕರು ಹಾಗೂ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳ ಸಭೆ ಕರೆದು ಸಂಬಂಧಿತ ಕಾನೂನಿಗೆ ಕೆಲವು ಬದಲಾವಣೆಗಳನ್ನು ತರಬೇಕೆಂದು ತಿಳಿಸಿ ಆ ಕುರಿತ ಕ್ರಮ ಜರುಗಿಸಿದ್ದರು. ಕಾನೂನಿಗೆ ಒಂದು ರೀತಿಯಲ್ಲಿ ಕೆಲವು ತಿದ್ದುಪಡಿಗಳನ್ನು ತರುವ ಕಾರ್ಯವನ್ನು ನಾನು ಅಂದಿನ ಸಭೆಯಲ್ಲಿಯೇ ಸ್ವಾಗತಿಸಿದ್ದೆ. ಅದು ಸೂಕ್ತ ಕ್ರಮವೂ ಆಗಿತ್ತು. ಈಗ 18ನೇ ತಾರೀಖಿಂದು ಸರ್ವ ಪಕ್ಷಗಳ ನಿಯೋಗ ಪ್ರಧಾನಮಂತ್ರಿಗಳ ಬಳಿಗೆ ಹೋಗುವುದೆಂದು ಹೇಳಿದ್ದೀರಿ. ನನ್ನ ಸಲಹೆ ಏನೆಂದರೆ, ಇದಕ್ಕೆ ಸಂಬಂಧಿಸಿದಂತೆ ಪ್ರಧಾನಮಂತ್ರಿಗಳನ್ನು ನೋಡುವುದರ ಜೊತೆಗೆ ವಾಣಿಜ್ಯ ಸಚಿವರನ್ನೂ ನೋಡುವ ಅವಶ್ಯಕತೆ ಬಹಳವಾಗಿದೆ. ಅದಕ್ಕೆ ಮುಂಚಿತವಾಗಿ ನಾವೆಲ್ಲರೂ ಇಲ್ಲಿ ಸಭೆ ಸೇರಿ ಒಂದು ವಿಚಾರವನ್ನು ತೀರ್ಮಾನ ಮಾಡಬೇಕಾಗುತ್ತದೆ. ಸರ್ಕಾರ ರೇಷ್ಮೆ ಮತ್ತು ರೇಷ್ಮೆ ಗೂಡಿಗೆ ಸ್ವಲ್ಪ ಬೆಂಬಲ ಬೆಲೆ ಕೊಡುವ ಬಗ್ಗೆ ಯೋಚಿಸಬೇಕಾಗುತ್ತದೆ. ನಮ್ಮ ದೇಶಕ್ಕೆ ನೇಪಾಳದಿಂದಾಗಲೀ, ಬಾಂಗ್ಲಾದೇಶದಿಂದಾಗಲೀ ಬರುತ್ತಿರುವ ರೇಷ್ಮೆ ಮೇಲೆ ನಿರ್ಬಂಧ

ವಿಧಿಸುವುದು ಹಾಗೂ ಕಳ್ಳತನದಿಂದ ಬರುವ ರೇಷ್ಮೆಯನ್ನು ತಡೆಗಟ್ಟುವುದು ಒಂದು ಭಾಗವಾದರೆ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಬಿಹಾರ ರಾಜ್ಯಗಳಲ್ಲಿ ನೇಕಾರರು ಉಪಯೋಗಿಸುವ ರೇಷ್ಮೆ ಏನಿದೆ, ಹೆಚ್ಚುವರಿ ರೇಷ್ಮೆ ಎಲ್ಲಿಂದ ಬರುತ್ತಿಯೆಂದು ಪತ್ತೆ ಹಚ್ಚುವುದು ಎರಡನೆಯ ಭಾಗ. ಈ ರೀತಿ 2-3 ಕ್ರಮಗಳನ್ನು ಕೇಂದ್ರ ಸರ್ಕಾರ ಕೈಗೊಳ್ಳಬಹುದು. ಬಹಳ ಪ್ರಮುಖವಾಗಿರುವುದೇನೆಂದರೆ, ರಾಜ್ಯ ಸರ್ಕಾರ ರೇಷ್ಮೆ ಬೆಳೆಗಾರರ ಸಹಕಾರಕ್ಕೆ ಬರಬೇಕಾಗುತ್ತದೆ. ಈಗ ರೇಷ್ಮೆ ನೂಲಿಗೆ ಹಾಗೂ ಗೂಡಿಗೆ ಸ್ವಲ್ಪಮಟ್ಟಿಗಾದರೂ ಬೆಂಬಲ ಬೆಲೆಯನ್ನು ತಾತ್ಕಾಲಿಕವಾಗಿ ಕಲ್ಪಿಸಿಕೊಡಬೇಕಾಗುತ್ತದೆ. ಎಲ್ಲಾ ಸಂದರ್ಭದಲ್ಲೂ ದುಡ್ಡು ಕೊಡಬೇಕೆಂದು ನಾನು ಹೇಳುವುದಿಲ್ಲ. ರೇಷ್ಮೆ ಬೆಳೆಗಾರರಿಗೆಂದು ಸುಮಾರು 50-60 ಕೋಟಿ ರೂಪಾಯಿಗಳಷ್ಟು ನಿಧಿ ಇಡುವ ಅವಶ್ಯಕತೆ ತಮಗೆ ಗೊತ್ತಿದೆ. ಆದುದರಿಂದ, ರೇಷ್ಮೆ ಸಚಿವರಾದ ತಾವು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಸಚಿವರ ಸಂಪುಟ ಸಭೆಯಲ್ಲಿ ಪ್ರಸ್ತಾವ ಇಟ್ಟು ಕೂಲಂಕುಷವಾಗಿ ಚರ್ಚಿಸಿ ರೇಷ್ಮೆ ಗೂಡಿಗೆ ಮತ್ತು ನೂಲಿಗೆ ಸ್ವಲ್ಪಮಟ್ಟಿಗಾದರೂ ಬೆಂಬಲ ಬೆಲೆ ಒದಗಿಸಿಕೊಡಬೇಕೆಂದು ನನ್ನ ಒತ್ತಾಯವಾಗಿದೆ. ಮಾನ್ಯ ಹಿರಿಯ ಸದಸ್ಯರಾದ ವೈ.ಕೆ. ರಾಮಯ್ಯನವರು ಹಾಗೂ ನಾವುಗಳೆಲ್ಲರೂ ಸೇರಿ 1993-94ರಲ್ಲಿ ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆ ತೆಗೆದುಕೊಂಡು ಹೋಗಿದ್ದೇವು. ಅವೊತ್ತು ಸರ್ಕಾರದಲ್ಲಿ ಮಂತ್ರಿಗಳಾಗಿದ್ದಂಥವರು ನಡೆದುಕೊಂಡ ರೀತಿ ನಮ್ಮ ಮನಸ್ಸಿಗೆ ನೋವುಂಟು ಮಾಡಿತು. ಅದನ್ನು ಈ ಸಂದರ್ಭದಲ್ಲಿ ಹೇಳುವ ಅವಶ್ಯಕತೆಯಿಲ್ಲವೆಂದು ತಿಳಿದ್ದೇನೆ. ಅಧಿವೇಶನ ಜರುಗುತ್ತಿರುವ ಈ ಸಮಯದಲ್ಲಿ ಕೇಂದ್ರಕ್ಕೆ ಹೋಗುವುದರಿಂದ ಉಪಯೋಗವಾಗುತ್ತದೆಂದು ನಾನು ಭಾವಿಸಿಕೊಂಡಿಲ್ಲ.

4.10 ಪಿ.ಎಂ.

ಮಾನ್ಯ ಲೋಕಸಭಾ ಸದಸ್ಯರನ್ನೆಲ್ಲಾ ಕರೆಸಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕಾಗುತ್ತದೆ. ಲೋಕಸಭಾ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುನ್ನ ನನಗೆ ಗೊತ್ತಿರುವ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಲೋಕಸಭಾ ಸದಸ್ಯರುಗಳನ್ನೆಲ್ಲಾ ಕರೆಸಿ ರಾಜ್ಯದ ಸಮಸ್ಯೆಗಳನ್ನು ಕಾವೇರಿ ವಿಚಾರದಲ್ಲಿ ಮತ್ತು ಬೇರೆ ಬೇರೆ ವಿಚಾರದಲ್ಲಿ ಚರ್ಚೆ ಮಾಡುವವರಿದ್ದಾರೆ. ಆ ಸಂದರ್ಭದಲ್ಲಿ ತಾವು ದಯಮಾಡಿ ನಮ್ಮ ಲೋಕಸಭಾ ಸದಸ್ಯರಿಗೂ ಈ ವಿಚಾರವನ್ನು ತಿಳಿಸಬೇಕಾಗುತ್ತದೆ. ನಮ್ಮ ರಾಷ್ಟ್ರದ 70 ಭಾಗ ರೇಷ್ಮೆ ಪ್ರೊಡಕ್ಷನ್ ಕರ್ನಾಟಕದವರೇ ಮಾಡುತ್ತೇವೆ. ನಮಗೆ ಸಾವಿರಾರು ಕೋಟಿ ರೂಪಾಯಿಗಳ ಉತ್ಪನ್ನ ಇದೆ. ಮಾನ್ಯ ಶ್ರೀನಿವಾಸಗೌಡರವರು ಹೇಳಿದಂತೆ, ಬೆಳೆಗಾರರು ನೂಲು ಎಳೆಯತಕ್ಕವರು, ಟ್ವಿಸ್ಟ್ ಮಾಡತಕ್ಕವರು, ನೇಕಾರರು, ಅಲ್ಲಿ ಕೂಲಿ ಕೆಲಸ ಮಾಡತಕ್ಕವರು, ಇವರೆಲ್ಲರನ್ನೂ ಸಹ ಗಮನದಲ್ಲಿಟ್ಟುಕೊಂಡು ಸುಮಾರು 90 ಲಕ್ಷದಿಂದ 1 ಕೋಟಿಯಷ್ಟು ಜನ ಆಗುತ್ತಾರೆಂದು ಪ್ರೊ॥ ದಂಡಿನ್ ಹಾಗೂ ಇತರ ತಜ್ಞರ ಅಭಿಪ್ರಾಯವಿದೆ. ನಮ್ಮ ಇಲಾಖಾ ಅಧಿಕಾರಿಗಳೂ ಸಹ ಅದೇ ಮಾತನ್ನು ಹೇಳುತ್ತಾರೆ. ಆದ್ದರಿಂದ ತಾತ್ಕಾಲಿಕವಾಗಿ ಈ ಸಂದರ್ಭದಲ್ಲಿ ಒತ್ತಾಯ ಮಾಡತಕ್ಕದ್ದು ಏನೆಂದರೆ, ಸರ್ಕಾರದಿಂದ 25 ಕೋಟಿ ರೂಪಾಯಿಗಳಷ್ಟು ಬೆಂಬಲ ಬೆಲೆಯನ್ನು ರೇಷ್ಮೆ ಗೂಡಿಗೆ, ನೂಲಿಗೆ ಕೊಡತಕ್ಕದ್ದನ್ನು ಮೊದಲು ಘೋಷಣೆ ಮಾಡಿ. ಆದ್ದರಿಂದ ಕೇಂದ್ರ ಸರ್ಕಾರದವರಿಗೂ ಕೂಡ ನಾವು ಮಾಡಿದ್ದೇವೆ ನೀವು ಸಹಾ ಸ್ವಲ್ಪ ಸಹಕಾರಕ್ಕೆ ಬನ್ನಿ ಎಂದು ನಾವು ಹೇಳಬಹುದು. ಅನಂತರ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ನಿಯೋಗ

ಹೋದರೆ ಪರಿಣಾಮಕಾರಿಯಾಗುತ್ತದೆ ಎಂಬುದು ನನ್ನ ಅಭಿಪ್ರಾಯ ಈ ಒತ್ತಾಯವನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮಾಡುತ್ತೇನೆ.

Mr. Speaker : It is a very good suggestion.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ನಾನು ಅದನ್ನೇ ಹೇಳುವವನಿದ್ದೆ. ಆದರೆ ನಮ್ಮ ನಾಯಕರೇ ಅದನ್ನು ಹೇಳಿದರು. ಬಾಂಗ್ಲಾ ದೇಶ ಮತ್ತು ನೇಪಾಳದ ಮೂಲಕ ಬರುವುದನ್ನು ಸ್ಥಗಿತಗೊಳ್ಳುವುದರ ಜೊತೆಗೆ ಈ ವರ್ಷದಲ್ಲಿ 124.72 ಕೋಟಿ ರೂಪಾಯಿ ಮೌಲ್ಯದ ರೇಷ್ಮೆ ಜವಳಿ ಹೆಚ್ಚಾಗಿ ಬಂದಿದೆ. ಇವೆಲ್ಲಾ ಕಾರಣಗಳಾಗಿ ರೇಷ್ಮೆ ಬೆಲೆ ಕುಸಿದಿದೆ. ರೇಷ್ಮೆ ಬೆಲೆ ಕುಸಿದಿರುವ ಪರಿಣಾಮ ನಮ್ಮ ನಾಯಕರು ಹೇಳಿದಂತೆ ನಿಯೋಗ ಹೋಗುವುದರ ಜೊತೆಗೆ ನೀವು, ಮಾರ್ಕೆಟ್ ಇಂಟರ್‌ವೆನ್‌ಷನ್ ಅನ್ನೂ ಮಾಡಬೇಕು. ಇವತ್ತು ಏನು ಆವರ್ತ ನಿಧಿ 100 ಕೋಟಿ ರೂ.ಗಳನ್ನು 400 ಕೋಟಿ ರೂಪಾಯಿಗಳಿಗೆ ಏರಿಸುವುದಾಗಿ ಯಾವ ಆಧಾರದ ಮೇಲೆ ಮಂತ್ರಿಗಳು ಹೇಳಿದರೋ ಗೊತ್ತಿಲ್ಲ. ಸರ್ಕಾರ ಮಾಡುವ ಒಳ್ಳೆಯ ಕೆಲಸವನ್ನು ಒಳ್ಳೆಯದು ಎಂದೇ ಹೇಳಬೇಕಾಗುತ್ತದೆ. ಎರಡು ವರ್ಷಗಳ ಹಿಂದೆ ಎಲ್ಲಾ ಬೆಳೆಗಳ ಬೆಲೆ ಕುಸಿದಾಗ, ನಾವು ಬಹಳಷ್ಟು ಗಲಾಟೆ ಮಾಡಿದೆವು. ಆವರ್ತ ನಿಧಿಯನ್ನು 100 ಕೋಟಿ ರೂಪಾಯಿಗಳು ಮಾಡಿ ಎಂದು ನಾನೇ ಸಲಹೆ ಕೊಟ್ಟಿದ್ದೆ. ಅದಕ್ಕೆ ಡೆವಲಪ್‌ಮೆಂಟ್ ಕಮಿಷನರ್ ಅನ್ನು ಅಧ್ಯಕ್ಷರನ್ನಾಗಿ ಮಾಡಿ ಎಂದು ನಾನೇ ಸಲಹೆ ಕೊಟ್ಟಿದ್ದೆ. ಅದರ ಪ್ರಕಾರ ನೀವು ಮಾಡಿದ್ದೀರಿ. ಅದು ಸಂತೋಷದ ವಿಚಾರ. ಆದರೆ ತಾವು ಎಷ್ಟು ನೂರು ಕೋಟಿ ರೂಪಾಯಿಗಳನ್ನು ಇಡಬೇಕಾಗಿತ್ತೋ ಅಷ್ಟನ್ನು ಇಟ್ಟಿಲ್ಲ. ಅದು ಕಡಿಮೆ ಇದೆ. ಆ ಹಣವನ್ನು ಜಾಸ್ತಿ ಮಾಡುವಂತಹ ಕೆಲಸ ಮಾಡಬೇಕು. ಇವತ್ತು ನಮಗೆ ಯಾವಾಗಲೂ ಒಳ್ಳೆಯ ಬೆಲೆ ಆದಾಗ ಬೆಲೆ ವ್ಯತ್ಯಾಸವಾಗುತ್ತದೆ. ಕೇವಲ 15-20 ಪರ್ಸೆಂಟ್ ಬೆಳೆ ಜಾಸ್ತಿಯದಾಗ ಆ 20 ಪರ್ಸೆಂಟ್ ಬೆಳೆಯನ್ನು ಮಾತ್ರ ಕೊಂಡುಕೊಂಡರೆ ನಮ್ಮ ಬೆಲೆಗಳು ಸ್ಥಿರವಾಗಿರುತ್ತದೆ. ಆ 20 ಪರ್ಸೆಂಟಿಗೇ ನಾವು ಇಷ್ಟೆಲ್ಲಾ.

ಶ್ರೀ ಎಂ.ಮಹದೇವ್ (ಪಶುಸಂಗೋಪನ ಮತ್ತು ಸಕ್ಕರೆ ಸಚಿವರು) : ರೇಷ್ಮೆ ಬೆಲೆ ಕುಸಿತವಾಗಿರುವ ಸಂದರ್ಭದಲ್ಲಿ ನಮ್ಮ ರಾಜ್ಯ ಸರ್ಕಾರ ಕೆ.ಎಸ್.ಎಂ.ಬಿ. ಮೂಲಕ 4-5 ಕೋಟಿ ರೂಪಾಯಿಗಳ ರೇಷ್ಮೆ ನೂಲನ್ನು ಪರ್ಚೇಸ್ ಮಾಡಿದೆ. ಆದ್ದರಿಂದ 80 ರೂ. ಇರತಕ್ಕದ್ದು ಈಗ 110 ರೂಪಾಯಿಗಳಿಗೆ ಹೋಗಿದೆ. ಮತ್ತು ಕೇಂದ್ರ ಸರ್ಕಾರದ ಮಂತ್ರಿಗಳು ಇದಕ್ಕೆ ಬೆಂಬಲ ಬೆಲೆಯನ್ನು ಕೊಡಲು ತಯಾರಿದ್ದೇವೆ ಎಂದು ಪತ್ರಿಕೆಯಲ್ಲಿ ಹೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಈ ಪರಿಸ್ಥಿತಿಯನ್ನು ವಿವರಿಸಿ ಹೊರಗಡೆಯಿಂದ ಬರತಕ್ಕ ರೇಷ್ಮೆಯ ಆಮದನ್ನು ತಡೆಗಟ್ಟಬೇಕು. ಬೆಂಬಲ ಬೆಲೆಯ ಪರಿಸ್ಥಿತಿ ಇದೆ ಎನ್ನುವ ಬಗ್ಗೆ ಅವರಿಗೆ ವಿವರಣೆಯನ್ನು ಕೊಟ್ಟು ಪತ್ರವನ್ನು ಬರೆದಿದ್ದಾರೆ. ನಾನೂ ಸಹ ಪತ್ರವನ್ನು ಬರೆದಿದ್ದೇನೆ. ಆಗಿನ ಕೇಂದ್ರ ಜವಳಿ ಮಂತ್ರಿಗಳು ಇದಕ್ಕೆ ಬೆಂಬಲ ಬೆಲೆಯನ್ನು ನಾವು ಎಷ್ಟೇ ಆದರೂ ಕೊಡುತ್ತೇನೆ ಎನ್ನುವ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ, ಆ ಸಚಿವರು ಹೋದರು. ಆದರೆ ಸರ್ಕಾರ ಹೋಗಿವಲ್ಲಾ. ಆ ಪತ್ರಿಕಾ ಹೇಳಿಕೆಯ ಕಟ್ಟಿಂಗ್ಸ್ ಅನ್ನು ಕೇಂದ್ರ ಸರ್ಕಾರಕ್ಕೆ ನಾನು ಕಳುಹಿಸಿ ಕೊಟ್ಟು ತಾವು ಬೆಂಬಲ ಬೆಲೆಯನ್ನು ಯಾವ ರೀತಿ ಕೊಡುತ್ತೀರಾ? ಇದರಲ್ಲಿ ನಿಮ್ಮ ಪಾತ್ರವೇನು? ರಾಜ್ಯ ಸರ್ಕಾರದ

ಪಾತ್ರವೇನು? ಅದರ ಬಗ್ಗೆ ನಮಗೆ ಸರಿಯಾದಂತಹ ಮಾಹಿತಿಯನ್ನು ತಾವು ಕೊಟ್ಟು ನಮಗೆ ಹೇಳಿದರೆ ನಮ್ಮ ರಾಜ್ಯ ಸರ್ಕಾರದ ಇದಕ್ಕೆ ಸ್ಪಂದಿಸಲು ತಯಾರಿದ್ದೇವೆ ಎನ್ನತಕ್ಕ ಪತ್ರವನ್ನು ನಾವು ಬರೆದಿದ್ದೇವೆ. ಆದರೆ ಬಗ್ಗೆ ನಮಗೆ ಇನ್ನೂ ಅವರಿಂದ ಉತ್ತರ ಬಂದಿಲ್ಲ. ಬೆಂಬಲ ಬೆಲೆ ಎಂದು ಕೊನೆಪಕ್ಷ 10 ರೂಪಾಯಿ ಎಂದು ತೆಗೆದುಕೊಂಡರೂ ಸಹಾ 50-60 ಕೋಟಿ ರೂಪಾಯಿಗಳನ್ನಾದರೂ ರಾಜ್ಯ ಸರ್ಕಾರ ಇನ್‌ವೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. ಬಹುಶಃ ಅದರಿಂದಲೂ ರೈತರಿಗೆ ಅಷ್ಟಾಗಿ ತೃಪ್ತಿಯಾಗುವುದಿಲ್ಲ. ನೂಲನ್ನು ಕೆ.ಎಸ್.ಎಂ.ಬಿ ಮೂಲಕ ಪರ್ಚೇಸ್ ಮಾಡಿದರೆ ರೈತರಿಗೆ ಅನುಕೂರವಾಗುತ್ತದೆ ಎಂಬ ದೃಷ್ಟಿಯಿಂದ 4-5 ಕೋಟಿ ರೂಪಾಯಿ ರೇಷ್ಮೆಯನ್ನು ಅಲ್ಲಿಂದ ತೆಗೆದುಕೊಳ್ಳುತ್ತಿದ್ದೇವೆ. ಈಗ ಅದು ರೈಸ್ ಆಗುತ್ತಿದೆ. ಇದು ಸೀಜನ್, ಸೀಜನ್ ಇರುವಾಗ ಬೆಲೆ ಕುಸಿಯುತ್ತದೆ. ಈಗ ಸೀಜನ್ ಕಡಿಮೆಯಾಗುತ್ತಿದೆ. ಇದರಿಂದ ಜಾಸ್ತಿಯಾಗುತ್ತದೆ. ಚೀನಾದಿಂದ ಬರತಕ್ಕಂಥ ರೇಷ್ಮೆಯನ್ನು ಕಂಟ್ರೋಲ್ ಮಾಡಲು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಏನಾದರೂ ಪ್ರಯತ್ನ ಮಾಡಿದರೆ ಇದರ ಅನುಕೂಲವಾಗುತ್ತದೆ.

ಶ್ರೀ ಕೆ.ಶ್ರೀನಿವಾಸ ಗೌಡ ಕುಡುವನಹಳ್ಳಿ : ನಾಲ್ಕೈದು ಕೋಟಿ ರೂಪಾಯಿ ರಾಕ್ಷಸನ ಹೊಟ್ಟೆಗೆ ಅರಕಾಸುಮಜ್ಜಿಗೆ ಇದ್ದಂತೆ, ಆ ಹಣ ಏನೇನೂ ಸಾಲದು.

ಶ್ರೀ ಎಂ. ಮಹದೇವ್ : 28 ಕೋಟಿ ರೂಪಾಯಿಗಳ ನೂಲಿನ ದಾಸ್ತಾನನ್ನು ಕೆ.ಎಸ್.ಎಂ.ಬಿ. ಹೊಂದಿದೆ. ಆದರ ಮೇಲೆ 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಇದು ಸಾಕಾಗದಿದ್ದರೆ ಇನ್ನೂ 4-5 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಸಾಲ ಕೊಡಲು ತಯಾರಿದ್ದೇವೆ ಎಂಬ ಆಶ್ವಾಸನೆಯನ್ನು ಕೆ.ಎಸ್.ಎಂ.ಬಿ.ಗೆ ಕೊಟ್ಟಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಲು ಸರ್ಕಾರಕ್ಕೆ ಏನು ತೊಂದರೆ ಇದೆ? ಮೊನ್ನೆ ನಮ್ಮ ಹಾರ್ಟಿಕಲ್ಚರ್ ಮಂತ್ರಿಗಳು ರೈತರು ಬೆಳೆದಂತಹ ಎಲ್ಲಾ ಬೆಳೆಗಳಿಗೆ ನಾವು ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡುತ್ತೇವೆ ಎಂದು ಹೇಳಿದರು. ರೇಷ್ಮೆಯನ್ನೂ ಸಹ ರೈತ ಬೆಳೆಯುತಕ್ಕ ಗೂಡು. ಅದಕ್ಕೂ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಿ. ಎಲ್ಲಿಯವರೆಗೆ ಸ್ಟೆಬಿಲಿಟಿ ಬರುತ್ತದೋ ಅಲ್ಲಿಯವರೆಗೆ ಮಾಡಿ. 150 ರೂಪಾಯಿಗಳಿಗೆ ನೀವು ತೆಗೆದುಕೊಳ್ಳಿ. ಇವರಿಗೂ ಕೊಡಬೇಕಾಗುತ್ತದೆ. ನೂಲು ತೆಗೆಯುವಂತಹ ಟ್ವಿಸ್ಟಿಂಗ್ ರೀಲಿಂಗ್‌ನವರಿಗೂ ಸಹಾ ಇದನ್ನು ಕೊಟ್ಟರೆ ಅವತ್ತು ರೇಷ್ಮೆಗೆ ಒಂದು ಸ್ಟೆಬಿಲಿಟಿ ಬರುತ್ತದೆ. ಹೋದ ರೇಷ್ಮೆ ಸಚಿವರು ಮಾರ್ಕೆಟ್‌ಗಳಿಗೆ ನಾಲ್ಕು-ನಾಲ್ಕು ಆಫೀಸರ್‌ಗಳನ್ನು ಮಾಡಿ ಬಿಟ್ಟರು. ಅಲ್ಲಿ ಬೇಕಾಗಿರುತಕ್ಕವರು ಒಬ್ಬರೇ, ಆದರೆ 4-5 ಜನ ಮಾಡಿ ಆ ರೇಷ್ಮೆ ಮಾರುಕಟ್ಟೆಯ ಸಿಸ್ಟಮ್ ಅನ್ನೇ ಹಾಳುಮಾಡಿ ಬಿಟ್ಟರು. ಈ ರೀತಿಯಾಗಿ ನಾವುಗಳು ಮಾಡತಕ್ಕ ತಪ್ಪುಗಳಿಂದ ಅಲ್ಲಿ ಇವತ್ತು ಕಷ್ಟಗಳಾಗುತ್ತಿವೆ. ಅಲ್ಲಿ ಪೋಸ್ಟೇ ಇರುವುದಿಲ್ಲ. ಅಲ್ಲಿಗೆ ಹಾಕಿದ್ದೀರಿ. ಈ ರೀತಿ ಮಾಡದ್ದರಿಂದ ರೇಷ್ಮೆ ಬೆಲೆ ಕೆಳಕ್ಕೆ ಬರಲು ಅದೂ ಒಂದು ಕಾರಣವಾಯಿತು ಇವತ್ತು...

ಶ್ರೀ ಎಂ. ಮಹದೇವ್ : ನಾವು ಹಾಕಿರುವ ಪೋಸ್ಟ್‌ಗಳಿಂದ ಮಾರುಕಟ್ಟೆಗಳಲ್ಲಿ ಆಗುತ್ತಿದ್ದ ರೈತರ ಶೋಷಣೆ, ದಾಂಧಲೆ ತಪ್ಪಿದೆಯೇ ಹೊರತು ಬೇರೆ ಏನೂ ಆಗಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ : ಇವರು ಯಾರನ್ನೂ ಕೇಳಲಿಲ್ಲ, ಮಾಡಲಿಲ್ಲ. ಇನ್‌ಫೋರ್ಸ್‌ಮೆಂಟ್ ಅನ್ನು ತೆಗೆದರು. ಕೋಲಾರದಲ್ಲಿ ಗಲಾಟೆಯಾದ ಮೇಲೆ ಮತ್ತೆ ಇಂಟ್ರಡ್ಯೂಸ್ ಮಾಡಿದರು. ಇವೆಲ್ಲಾ ಏಕೆ? ತಾವು ರೈತರ ಬಗ್ಗೆ ಮಾತನಾಡಿ, ರೈತರ ಬಗ್ಗೆಯೇ ಚಿಂತನೆ ಮಾಡಿ. ನೀವು ಮಂತ್ರಿಗಳಾದ ಮಾತ್ರಕ್ಕೆ ಮನಸ್ಸಿಗೆ ಬಂದಂತೆ ಮಾಡುವುದಿಲ್ಲ.

ಶ್ರೀ ಎಂ. ಮಹದೇವ್ : ಎನ್‌ಫೋರ್ಸ್‌ಮೆಂಟ್ ಅನ್ನು ಎಲ್ಲಿ ತೆಗೆದಿದ್ದೇವೆ? ನಾವು ಅದನ್ನು ತೆಗೆದೇ ಇಲ್ಲ, ಅದನ್ನು ಕಡಿಮೆ ಮಾಡಿದ್ದೇವೆಯೇ ಹೊರತು ತೆಗೆದಿಲ್ಲ.

ಗೊಂದಲ

ಅಧ್ಯಕ್ಷರು : ನೀವಿಬ್ಬರೂ ಮಾತನಾಡುತ್ತಿರುವುದು ಇಬ್ಬರಿಗೂ ಕೇಳಿಸುತ್ತಿದೆಯೇ ಅಥವಾ ಅರ್ಥವಾಗುತ್ತಿದೆಯೇ? ಒಬ್ಬರಾದ ಮೇಲೆ ಒಬ್ಬರು ಮಾತನಾಡಿ.

ಶ್ರೀ ಎಂ.ಮಹದೇವ್ : ಎನ್‌ಫೋರ್ಸ್‌ಮೆಂಟ್ ತೆಗೆದಿರುವುದಕ್ಕೆ ಅವರ ಹತ್ತಿರ ಏನು ಆಧಾರ ಇದೆ? ನಾವು ಎನ್‌ಫೋರ್ಸ್‌ಮೆಂಟ್ ಸಿಬ್ಬಂದಿಯನ್ನು ಕಡಿಮೆ ಮಾಡಿದ್ದೇವೆ. ಸರ್ಕಾರ ಎನ್‌ಫೋರ್ಸ್‌ಮೆಂಟ್ ಅನ್ನು ತೆಗೆದಿಲ್ಲ. ಆದರೆ ಅಗತ್ಯವಾದ ಸಿಬ್ಬಂದಿಯನ್ನು ಇಟ್ಟುಕೊಂಡು ಅನಗತ್ಯ ಸಿಬ್ಬಂದಿಯನ್ನು ತೆಗೆದಿದ್ದೇವೆಯೇ ಹೊರತು ಎನ್‌ಫೋರ್ಸ್‌ಮೆಂಟ್ ಅನ್ನು ಪೂರ್ಣವಾಗಿ ತೆಗೆದಿದ್ದೇವೆ ಎನ್ನತಕ್ಕ ಮಾತನ್ನು ತಾವು ಸದನದಲ್ಲಿ ಹೇಳಿದರೆ ನಾನು ಅದಕ್ಕೆ ಏನು ಹೇಳಬೇಕು?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ನೀವು ಅದನ್ನು ತೆಗೆದಿರಿ. ಕೋಲಾರದಲ್ಲಿ ಗಲಾಟೆಯಾದ ಮೇಲೆ ಮತ್ತೆ ಇಂಟ್ರಡ್ಯೂಸ್ ಮಾಡಿದಿರಿ.

ಶ್ರೀ ಎಂ.ಮಹದೇವ್ : ಇಲ್ಲ ತೆಗೆದಿಲ್ಲ, ತೆಗೆದಿರುವುದಕ್ಕೆ ತಮ್ಮ ಹತ್ತಿರ ಆಧಾರವೇನಿದೆ?

ಅಧ್ಯಕ್ಷರು : ತಾವು ಈ ರೀತಿ ಮಾತನಾಡಿದರೆ ನಾನು ಮಧ್ಯೆ ಇಂಟರ್‌ಫಿಯರ್ ಆಗಬೇಕಾಗುತ್ತದೆ.

ಶ್ರೀ ಎಂ. ಮಹದೇವ್ : ಸುಮ್ಮನೆ ಏಕೆ ಇಲ್ಲದಿರುವ ಆಪಾದನೆಯನ್ನು ಮಾಡುತ್ತೀರಿ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಇರುವುದನ್ನೇ ನೇರವಾಗಿ ಹೇಳುತ್ತಿದ್ದೇನಲ್ಲಾ.

ಶ್ರೀ ಎಂ. ಮಹದೇವ್ : ನಾವು ತೆಗೆದಿದ್ದೇವೆ ಎನ್ನುವುದಕ್ಕೆ ತಾವು ಆಧಾರ ಸಮೇತ ಕೊಡಿ. ಒಪ್ಪಿಕೊಳ್ಳುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ತಮಗೆ ಗೊತ್ತಿದ್ದಂತೆ ಚನ್ನಯ್ಯ ರಂಗ ಮಂದಿರದಲ್ಲಿ ರೈತರು ಸೇರಿ ಇವರನ್ನು ಕರೆಸಿ ಅವರು ಗಲಾಟೆ ಮಾಡಿದ ದಿವಸ, ಹಾಗಾದರೆ ನಾನು ಇದನ್ನು ವಿತ್‌ಡ್ರಾ ಮಾಡುತ್ತೇನೆ ಎಂದು ತಾವು ಹೇಳಿದಿರಿ. ತಾವೇಕೆ ಈ ಮನೆಗೆ ತಪ್ಪು ಮಾಹಿತಿ ನೀಡುತ್ತಿದ್ದೀರಿ?

ಶ್ರೀ ಎಂ. ಮಹದೇವ್ : ಅವರು ಏನೇ ಹೇಳಿದರೂ ಕೂಡ ನಾನು ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ?

ಗೊಂದಲ

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ನಾನು ಅದನ್ನು ಕಣ್ಣಾರೆ ನೋಡಿದ್ದೇನೆ.

ಅಧ್ಯಕ್ಷರು : ಸ್ವಲ್ಪ ಶಾಂತ ರೀತಿಯಲ್ಲಿ ಮಾತನಾಡಿ, ಏಕೆ ಜಗಳ ಆಡುತ್ತೀರಿ?

ಶ್ರೀ ಎಂ. ಮಹದೇವ್ : ಅವರು ಸರಿಯಾಗಿ ಮಾತನಾಡಲಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸರ್ಕಾರದ ಮೇಲೆ ಆಧಾರ ರಹಿತವಾಗಿ ಮಾತನಾಡಿದರೆ ಏನುಹೇಳಬೇಕಾಗುತ್ತದೆ? ನಾನು ಎನ್‌ಫೋರ್ಸ್‌ಮೆಂಟ್ ಅನ್ನು ಅಬಾಲಿಷ್ ಮಾಡಿದ್ದೇನೆ ಎಂದು ನಿಮಗೆ ಹೇಳಿದ್ದೇನೆಯೇ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ನೀವು ಮಾಡಿರುವ ಕೆಲವು ಕ್ರಮಗಳಿಂದ ನಮ್ಮ ರೇಷ್ಮೆ ಬೆಳೆ ಬೆಳೆಯುವಂತಹ ಬೆಳೆಗಾರರು ರೇಷ್ಮೆ ನೂಲು ತೆಗೆಯುವರಿಗೆ ತೊಂದರೆಯಾಗಿದೆ.

ಶ್ರೀ ಎಂ. ಮಹದೇವ್ : ರೈತರನ್ನು ನೀವು ಹಾಳು ಮಾಡುತ್ತಿದ್ದೀರಿ. ರೈತರಿಗೆ ಏನು ಆಗಿಲ್ಲ, ಅವರು ಚೆನ್ನಾಗಿಯೇ ಇದ್ದಾರೆ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೇ conclude please.

ಗೊಂದಲ

ಅಧ್ಯಕ್ಷರು : ರಾಜಕೀಯದ ವಿಚಾರಗಳನ್ನು ಇಲ್ಲಿ ತರಬೇಡಿ. ಇದು ರಾಜಕೀಯ ಮಾತನಾಡುವ ಪ್ಲಾಟ್‌ಫಾರಂ ಅಲ್ಲ. ಕೇವಲ ಜನರ ಸೇವೆಯ ಮಾಡುವ ವಿಷಯವನ್ನು ಮಾತ್ರ ತಾವುಗಳು ಇಲ್ಲಿ ಮಾತನಾಡಬೇಕು.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೇ, ಸರ್ಕಾರದಿಂದ ಏನಾದರೂ ಉತ್ತರವನ್ನು ಕೊಡುವುದಿದ್ದರೆ ಈಗಿನ ರೇಷ್ಮೆ ಸಚಿವರು ಕೊಡಲಿ. ಮಾಜಿ ರೇಷ್ಮೆ ಸಚಿವರು ಈ ಬಗ್ಗೆ ಮಾತನಾಡುವುದು ಬೇಡ. ಅವರು ಈಗಲೂ ಸಚಿವರಿರಬಹುದು.

ಅಧ್ಯಕ್ಷರು : ಹಾಗಾದರೆ ನೀವು ಇಷ್ಟು ಹೊತ್ತು ಅವರ ಜೊತೆಯಲ್ಲಿ ಏಕೆ ಮಾತನಾಡಿದಿರಿ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೇ, ಹಿಂದಿನ ರೇಷ್ಮೆ ಸಚಿವರು ಮಾಡಿರುವ ಕೆಲವಾರು ತಪ್ಪು ಕಾನೂನುಗಳಿಂದ ಇವತ್ತು ನಾವು ಸಂಕಷ್ಟಕ್ಕೆ ಸಿಲುಕಿದ್ದೇವೆ. ಇದರಲ್ಲಿ ಎರಡನೇ ಮಾತಿಲ್ಲ. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು : ರೇಷ್ಮೆ ವಿಷಯ ಬಿಟ್ಟು ಬರದ ವಿಚಾರಕ್ಕೆ ಬನ್ನಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಬರದ ಹಿನ್ನೆಲೆಯಲ್ಲಿಯೇ ಇವೆಲ್ಲಾ ಆಗಿದೆ ಎಂದು ಮಾತನಾಡುತ್ತಿದ್ದೆ.

ಅಧ್ಯಕ್ಷರು : ತಾವು ಹೇಳಿದ್ದು ನನಗೆ ಅರ್ಥವಾಯಿತು. ರೇಷ್ಮೆಗೆ ಹೀಗೆ ಆಗಿದ್ದರಿಂದ ಬರ ಆಯಿತು ಎಂದು ನೀವು ಹೇಳುತ್ತಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೇ, ಗೂಡನ್ನು ತೆಗೆಯುವುದು ಮತ್ತು ರೇಷ್ಮೆಯನ್ನು ಕೊಳ್ಳುವುದು ಎರಡನ್ನೂ ಕೂಡ ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಮ್ ವ್ಯಾಪ್ತಿಗೆ ತರಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತಿದ್ದೇನೆ. ಈ ರೀತಿ ಮಾಡಿದರೆ ಮಾತ್ರ ನಾಲ್ಕೈದು ಜಿಲ್ಲೆಯ ರೈತರು ಬದುಕುತ್ತಾರೆ. ಇಲ್ಲದಿದ್ದರೆ ಈಗಾಗಲೇ ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ತಿಳಿಸಿರುವಂತೆ ರೈತರು ಹುರಿ ಹಾಕಿಕೊಳ್ಳುವುದು ಗ್ಯಾರಂಟಿ, ಹೋದ ಬುಧವಾರ ಕೋಲಾರ ಎಲ್ಲಾ ಬಂದ್ ಆಗಿತ್ತು. ಜಿಲ್ಲಾದ್ಯಂತ ಎಲ್ಲಾ ಹಳ್ಳಿಗಳಲ್ಲಿಯೂ ಕೂಡ ರೇಷ್ಮೆಗೆ ಸಂಬಂಧಪಟ್ಟಂತೆ ಎಲ್ಲಾ ಚಟುವಟಿಕೆಗಳನ್ನೂ ಬಂದ್ ಮಾಡಲಾಗಿತ್ತು. ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಸಂಕಷ್ಟದಲ್ಲಿರುವ ರೈತರ ನೆರವಿಗೆ ಸರ್ಕಾರ ಬರಬೇಕು. ಈಗಿನ ಮಂತ್ರಿಗಳು ಇದಕ್ಕೆ ಆದ್ಯತೆ ಕೊಟ್ಟು ಮಾರ್ಕೆಟ್ ಇಂಟರ್‌ವೆನ್‌ಷನ್ ಅನ್ನು ಮಾಡಬೇಕು. ಇದರ ಜೊತೆಗೆ ಮಾನ್ಯ ಪ್ರಧಾನ ಮಂತ್ರಿಗಳು ಮತ್ತು ಮಾನ್ಯ ಕೇಂದ್ರ ಕಾಮರ್ಸ್ ಮಿನಿಸ್ಟರ್ ಬಳಿಗೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಿಯೋಗವೊಂದನ್ನು ಕರೆದುಕೊಂಡು ಹೋಗಿ ನಮ್ಮ ತೊಂದರೆಯನ್ನು ಹೇಳದೇ ಹೋದರೆ ನಾವಂತೂ ಬಹಳ ಸಂಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತೇವೆ ಎಂದು ಮಾತನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಶ್ರೀ ಮನೋಹರ ಹೆಚ್. ತಹಸೀಲ್ದಾರ್)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ನಾವು ಬೆಳೆದಂತಹ ಬೆಳೆಗಳ ಬೆಲೆ ಕುಸಿತಕ್ಕಾಗಿ ಇಟ್ಟಿರುವ ಆವರ್ತ ನಿಧಿಯನ್ನು ಬರಗಾಲಕ್ಕೆ ಉಪಯೋಗಿಸುವುದಕ್ಕೆ ಚಿಂತನೆ ಮಾಡಬೇಕು. ಸರ್ವೇ ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿ 23 ವರ್ಷಗಳಿಗೊಮ್ಮೆ ಬರ ಬರುತ್ತಲೇ ಇರುತ್ತದೆ. ಈ ಬರಗಾಲವನ್ನು ಶಾಶ್ವತವಾಗಿ ಹೋಗಲಾಡಿಸಲು ಏನೇನು ಮಾಡಬೇಕು ಎಂಬುದರ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ಮಾಡಬೇಕು. ವೈಜ್ಞಾನಿಕವಾಗಿ ಚಿಂತನೆ ಮಾಡದಿದ್ದರೆ ಪ್ರಯೋಜನವಿಲ್ಲ. ಬರಗಾಲ ಬಂದ ವರ್ಷದಲ್ಲಿ, ಆ ಸಮಯಕ್ಕೆ ಏನೋ ಒಂದಷ್ಟು ಕಾಮಗಾರಿ ಮಾಡಿ ನಂತರ ಮತ್ತೆ ಅದರ ಬಗ್ಗೆ ಮರೆತು ಹೋಗುವಂತಹ ಕೆಲಸ ಮಾಡಬಾರದು. ಶಾಶ್ವತವಾಗಿ ಇದಕ್ಕೆ ಏನಾದರೂ ಪರಿಹಾರ ಕಂಡು ಹಿಡಿಯಬೇಕು. ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವ ಜಿಲ್ಲೆಗಳು ಮತ್ತು ತಾಲ್ಲೂಕುವುಗಳು ಯಾವುವು ಎಂಬುದನ್ನು ಮಾರ್ಕ್ ಮಾಡಿ, ಅವುಗಳು ಬರದಿಂದ ಹೊರ ಬರುವುದಕ್ಕೆ ಏನೇನು ಮಾಡಬೇಕು ಎಂಬುದರ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ಮಾಡುವಂತಹ ಕೆಲಸ ಮಾಡಬೇಕು. ರೈತರ ಆತ್ಮಹತ್ಯೆಗಳ ಬಗ್ಗೆ ನಾನು ಕಳೆದ ಬಾರಿ ಕೂಡ ಪ್ರಸ್ತಾಪಿಸಿದ್ದೆ. ಹೋದ ಸಲ ನಮ್ಮ ಸರ್ಕಾರವಿದ್ದಾಗ, ರೈತರ ಆತ್ಮಹತ್ಯೆಗಳ ರಾಜ್ಯದಲ್ಲಿ ಆದಾಗ ಮಾನ್ಯ ಬಲರಾಂ ಜಾಖಡ್‌ರವರು ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಭೇಟಿ ನೀಡಿದ್ದರು. ಈ ಸಾರಿ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಮತ್ತು ಲೋಕಸಭೆಯ ಮಾನ್ಯ ವಿರೋಧ ಪಕ್ಷದ ನಾಯಕಿಯವರೂ ಆದ ಶ್ರೀಮತಿ ಸೋನಿಯಾ ಗಾಂಧಿಯವರು ಪಕ್ಕದ ರಾಜ್ಯದ ಅನಂತಪುರದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಭೇಟಿ ನೀಡಿ ಸಾಂತ್ವನ ಹೇಳಿದರು. ಕರ್ನಾಟಕದಲ್ಲಿ ಸುಮಾರು 150 ಜನ ರೈತರು ಸತ್ತು ಹೋದರು. ಇವರ್‍ಯಾರು ನಿಮಗೆ ಓಟು ಹಾಕಲಿಲ್ಲವೇ? ನಾನು ಬಹಳ ನೊಂದು ಹೇಳಬೇಕಾಗುತ್ತದೆ. ಕರ್ನಾಟಕ,

ಆಂಧ್ರ ಪ್ರದೇಶ, ಕಾಶ್ಮೀರ ಹೀಗೆ ಎಲ್ಲಿದ್ದರೂ ಸಹ ರೈತರು ಎಂದರೆ ರೈತರೇ. ಕರ್ನಾಟಕ ರಾಜ್ಯಕ್ಕೂ ಭೇಟಿ ನೀಡುವ ಬುದ್ಧಿ ಅವರಿಗೆ ಏಕೆ ಬರಲಿಲ್ಲ? ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರದಲ್ಲಿದೆ ಎಂಬ ಒಂದೇ ಕಾರಣದಿಂದಾಗಿ ಇಲ್ಲಿಯ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಅವರು ಇವರ ಕಡೆಗೆ ಗಮನ ಹರಿಸಲಿಲ್ಲವೇ? ಈ ಮಾತನ್ನು ಬಹಳ ನೊಂದು ಹೇಳಬೇಕಾಗುತ್ತದೆ. ರೈತರ ವಿಷಯದಲ್ಲಿ ರಾಜಕೀಯ ಮಾಡಬಾರದು. ಎಲ್ಲಾ ರಂಗಗಳಲ್ಲೂ ಕೂಡ ರೈತರನ್ನು ಒಂದು ವೆಪನ್ ಆಗಿ ಮಾಡಿಕೊಳ್ಳಲಾಗುತ್ತಿದೆ. ಇದು ಎಲ್ಲಾ ಕಡೆ ನಡೆದುಕೊಂಡು ಬಂದಿರುವಂತಹ ಪರಿಸ್ಥಿತಿಯಾಗಿದೆ. ಅನಂತಪುರದಲ್ಲಿ ರೈತರು ಸತ್ತರೆ ಶ್ರೀಮತಿ ಸೋನಿಯಾ ಗಾಂಧಿಯವರು ಭೇಟಿ ನೀಡಿ ಸಾಂತ್ವನ ಹೇಳುತ್ತಾರೆ. ಅಲ್ಲಿ ಪಾರ್ಟಿ ವತಿಯಿಂದ ದುಡ್ಡು ಕಲೆಕ್ಟ್ ಮಾಡಿ ರೈತರಿಗೆ ಕೊಡುತ್ತಾರೆ. ಅದೇ ಕರ್ನಾಟಕದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡರೆ, ದುಡ್ಡು ಕೊಡದಿದ್ದರೂ ಪರವಾಗಿಲ್ಲ, ಕನಿಷ್ಠ ಪಕ್ಷ ಸಾಂತ್ವನ ಹೇಳಲಿಕ್ಕಾದರೂ ಅವರು ಕರ್ನಾಟಕಕ್ಕೆ ಭೇಟಿ ನೀಡಲಿಲ್ಲ? ಇದಕ್ಕೆ ಏನು ಕಾರಣ? ಹಾಗಾದರೆ ಕರ್ನಾಟಕದ ರೈತರು ನಿಮಗೆ ಓಟು ಹಾಕಲಿಲ್ಲವೇ? ಇದು ಪ್ರಶ್ನೆ ಮಾಡಬೇಕಾದಂತಹ ವಿಷಯ. ನಮ್ಮ ಜಿಲ್ಲೆಯ ಪಕ್ಕದಲ್ಲಿರುವಂತಹ ಜಿಲ್ಲೆಗೆ ಬಂದು ಅವರು ಹೋಗುತ್ತಾರೆ. ಕರ್ನಾಟಕದಲ್ಲಿ ಸುಮಾರು 158 ಜನ ರೈತರು ಆತ್ಮಹತ್ಯೆ ಮಾಡಿಕೊಂಡರೂ ಸಹಾ ಅವರಿಗೆ ಸಾಂತ್ವನ ಕೂಡ ಹೇಳಲಿಲ್ಲ. ಇದು ಬಹಳ ಅನ್ಯಾಯ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಮುಂದೆ ಅವರು ಇಲ್ಲೂ ಕೂಡ ಬಂದು ಸಾಂತ್ವನ ಹೇಳುತ್ತಾರೋ ಅಥವಾ ಕಾಂಗ್ರೆಸ್ ಪಾರ್ಟಿಯಿಂದ ಒಂದಷ್ಟು ದುಡ್ಡು ಕಲೆಕ್ಟ್ ಮಾಡಿ ಸತ್ತವರ ಬಂಧುಗಳಿಗೆ ಹಣವನ್ನಾದರೂ ಕೊಡಿಸುತ್ತಾರೋ ಗೊತ್ತಿಲ್ಲ. ಅವರು ಆ ಕೆಲಸವನ್ನು ಮಾಡಬೇಕೆಂದು ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ಸರ್ಕಾರವನ್ನು ಆಗ್ರಹಿಸುತ್ತಿದ್ದೇನೆ. ಇವತ್ತು ಮಳೆ ನೀರು ಸಂಗ್ರಹಿಸುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಹೇಳಿದ್ದಾರೆ. ವಾಟರ್ ಮ್ಯಾನೇಜ್‌ಮೆಂಟ್ ಮಾಡದಿದ್ದರೆ ಈ ದೇಶದಲ್ಲಿ ಮತ್ತು ರಾಜ್ಯದಲ್ಲಿ ಯಾವಾಗಲೂ ಕೂಡ ಬರ ಬರುತ್ತಲೇ ಇರುತ್ತದೆ. ನಾನು ಹಿಂದೆ ಕೂಡ ಈ ಮಾತನ್ನು ಹೇಳಿದ್ದೇನೆ. ನಾನು ಒಮ್ಮೆ ಇಸ್ರೇಲ್‌ಗೆ ಹೋಗಿದ್ದೆ. ಜೋರ್ಡಾನ್‌ನಲ್ಲಿ ಒಂದೇ ಒಂದು ರಿವರ್‌ನಿಂದ ವ್ಯವಸಾಯಕ್ಕೆ ಮತ್ತು ಕುಡಿಯುವ ನೀರಿಗಾಗಿ ಎರಡಕ್ಕೂ ನೀರನ್ನು ಬಳಸಿಕೊಳ್ಳುತ್ತಾರೆ. ಅವರು ಕೇವಲ ವಾಟರ್ ಮ್ಯಾನೇಜ್‌ಮೆಂಟ್‌ನಿಂದ ಇದನ್ನು ಸಾಧಿಸುತ್ತಾರೆ. ಅಂದರೆ ಅವರು ಡ್ರಿಪ್ ಇರಿಗೇಷನ್ ಮತ್ತು ಸ್ಪಿಂಕ್ಲರ್ ಮಾತ್ರ ಬಳಸುತ್ತಾರೆ. ನಾನು ಕಳೆದ ಬಾರಿಯ ಅಧಿವೇಶನದಲ್ಲೂ ಸಹ ಇದನ್ನು ಹೇಳಿದ್ದೆ. ನಮ್ಮ ದೇಶದ ಕೇರಳ ರಾಜ್ಯದಿಂದ ಅಲ್ಲಿಗೆ ಹೋಗಿರುವ ರೈತನೊಬ್ಬನ ಮನೆಗೆ ಆಹ್ವಾನದ ಮೇರೆಗೆ ಟೀಗಾಗಿ ನಾವು ಹೋಗಿದ್ದೆವು. ಆ ರೈತನನ್ನು ನೀವು ಇಲ್ಲಿ ಹೇಗಿದ್ದೀರಿ? ಏನು? ಎಂದು ಕೇಳಿದರೆ, ಅವನು "Here I am earning one inch of the land one drop of water I will even one dollar" ಎಂದು ಹೇಳಿದ. ಆ ಕೆಚ್ಚಿದೆ, ಈ ದೇಶದ, ಈ ರಾಜ್ಯದ ರೈತರಿಗೆ ಬರಬೇಕು. ಒಂದು ಇಂಚು ಜಮೀನು ಮತ್ತು ಒಂದು ಡ್ರಾಪ್ ನೀರಿನಲ್ಲಿ ನಾವೂ ಕೂಡ ಒಂದು ರೂಪಾಯಿ ಸಂಪಾದನೆ ಮಾಡುತ್ತೇವೆ ಎನ್ನುವಂತಹ ಧೈರ್ಯವನ್ನು ಇಲ್ಲಿಯ ರೈತರಿಗೆ ಕಲಿಸಿಕೊಡಬೇಕಾದುದು ನಿಮ್ಮ ಮತ್ತು ನಮ್ಮೆಲ್ಲರ ಹಾಗೂ ಸರ್ಕಾರಗಳ ಕರ್ತವ್ಯವಾಗಿದೆ ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಇವತ್ತು ನಾವು ಬರದ ಛಾಯೆಯಲ್ಲಿ ಇದ್ದೇವೆ. ಬಡ್ಡಿ ಮನ್ನಾ ಬಗ್ಗೆ ಹೇಳುವುದಾದರೆ, ಕ್ರೆಡಿಟ್ ಸಿಸ್ಟಮ್ ಅನ್ನು ಅದರಲ್ಲೂ

ಕೋ-ಆಪರೇಟಿವ್ ಕ್ರೆಡಿಟ್ ಸಿಸ್ಟಮ್ ಅನ್ನು ನಾವುಗಳೇ ಹಾಳು ಮಾಡಿದ್ದೇವೆ. ಏಕೆ ಅಂದರೆ, ನಮಗೆ ಮೊದಲು ಕಾಣಿಸುವುದು ಬರೀ ಕೋ-ಆಪರೇಟಿವ್ ಇನ್ಸ್‌ಟಿಟ್ಯೂಷನ್‌ಗಳೇ, ಯಾವುದೇ ಸರ್ಕಾರವಿದ್ದರೂ ಸಹಾ ಮೊದಲು ಕೋ-ಆಪರೇಟಿವ್ ಇನ್ಸ್‌ಟಿಟ್ಯೂಷನ್‌ಗಳಲ್ಲಿ ಬಡ್ಡಿ ಮನ್ನಾ ಮಾಡುತ್ತಾರೆ. ಇದರಿಂದಾಗಿ ಯಾರು ಕ್ರಾನಿಕಲ್ ಮತ್ತು ವಿಲ್‌ಫುಲ್ ಡಿಫಾಲ್ಟರ್ಸ್ ಇರುತ್ತಾರೋ ಅಂತಹವರಿಗೆ ಅವಕಾಶ ಸಿಗುತ್ತದೆ. ಯಾರು ಮಾರ್ಚ್ 31ಕ್ಕೆ ಸರಿಯಾಗಿ ಕಟ್ಟಿಕೊಂಡು ಹೋಗುತ್ತಾರೋ ಅವರಿಗೆ ಆ ಸೌಲಭ್ಯ ಸಿಗುವುದಿಲ್ಲ. ಇದನ್ನು ನಾವುಗಳು ಅರ್ಥ ಮಾಡಿಕೊಳ್ಳಬೇಕು. ಇವತ್ತು ಅಸಲಿ ಅಥವಾ ಬಡ್ಡಿ ಮನ್ನಾ ಮಾಡುವುದಿದ್ದರೆ ಅದನ್ನು ವೈಜ್ಞಾನಿಕವಾಗಿ ಚಿಂತನೆ ಮಾಡಿ ಮಾಡಬೇಕು. ನಿಜವಾಗಿಯೂ ಯಾವ ರೈತನಿಗೆ ಕಟ್ಟಲಿಕ್ಕೆ ಆಗುವುದಿಲ್ಲವೋ ಅಂತಹವನಿಗೆ ಅನುಕೂಲವಾಗುವಂತೆ ಮಾಡಬೇಕು. ನನ್ನಂತೆ ಚೆನ್ನಾಗಿದ್ದುಕೊಂಡು, ನನ್ನನ್ನು ಏನು ಮಾಡುತ್ತಾರೆ? ಅವನಿಗೆ ಆಗುವ ಹಾಗಿದ್ದರೆ ನನಗೂ ಆಗಲಿ' ಎನ್ನುವಂತಹ ಭಾವನೆ ಇರುವಂತಹ ರೈತರಿಗೆ ಮನ್ನಾ ಮಾಡುವಂತದ್ದು ಮಾಡಬಾರದು. ಇಲ್ಲದಿದ್ದರೆ ಕೋ-ಆಪರೇಟಿವ್ ಕ್ರೆಡಿಟ್ ಸಿಸ್ಟಮ್ ಅನ್ನು ನಾವು ಹಾಳು ಮಾಡಿದಂತಾಗುತ್ತದೆ ಎನ್ನುವಂತಹ ಮಾತನ್ನು ಈ ಸಮಯದಲ್ಲಿ ನಾನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಅನೇಕ ಕಂಟ್ರಾಕ್ಟರ್‌ಗಳ ಬಿಲ್‌ಗಳನ್ನು ಪಾವತಿಸಿಲ್ಲ. ಮೊನ್ನೆ ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನಾನು ಏನನ್ನೋ ಕೇಳಿದೆ. ಅರ್ರ್ಯಾಕ್ ಅನ್ನು ಆ್ಯಕ್ಷನ್ ಮಾಡಬೇಕೆಂದರೆ ಗುತ್ತಿಗೆದಾರರು ಮುಂದೆ ಬರುತ್ತಿಲ್ಲವೆಂದು ಅವರು ಹೇಳುತ್ತಾರೆ. ಇದಕ್ಕೆ ಸೆಕೆಂಡ್ಸ್ ಹಾವಳಿ ಜಾಸ್ತಿ ಆಗಿರುವುದೇ ಕಾರಣ ಎಂದು ಅವರು ಹೇಳುತ್ತಾರೆ. ಫೈನಾನ್ಸ್ ಅಪ್ರೋಪ್ರಿಯೇಷನ್ ಬಿಲ್ ಬಂದಾಗ ನಾನು ಅದರ ಬಗ್ಗೆ ಹೆಚ್ಚಿಗೆ ಮಾತನಾಡುತ್ತೇನೆ. ಎಲ್ಲಿಂದ ನಮ್ಮ ರಾಜ್ಯಕ್ಕೆ ಟ್ಯಾಕ್ಸ್ ಬರಬೇಕಾಗಿತ್ತೋ ಅದು ಬಂದಿದ್ದರೆ ಇವತ್ತು ನೀವು ವಿಮೆ ಕಂತನ್ನು ಕಟ್ಟುತ್ತಿದ್ದಿರಿ. ಅದು ಬಾರದೇ ಇರುವುದರಿಂದ ವಿಮೆ ಕಂತು ಕಟ್ಟುವುದು ನಿಧಾನವಾಗಿದೆ. ಎಲ್ಲಿ ತೆರಿಗೆ ಸೋರಿಕೆಯಾಗುತ್ತಿದೆಯೋ ಅಂತಹ ಕಡೆ ಆದ್ಯತೆ ಕೊಟ್ಟು ಅದನ್ನು ತಡೆಗಟ್ಟಿ ಕಟ್ಟುನಿಟ್ಟಾಗಿ ಅದನ್ನು ವಸೂಲು ಮಾಡಬೇಕು. ಇವತ್ತು ಈ ಬರವನ್ನು ಶಾಶ್ವತವಾಗಿ ಪರಿಹರಿಸಬೇಕಾದರೆ ನಮ್ಮದೇ ಆದಂತಹ ಕೆಲವು ಟೈಮ್ ಬೌಂಡ್ ಪ್ರೋಗ್ರಾಮ್‌ಗಳನ್ನು ಹಾಕಿಕೊಳ್ಳಬೇಕು. ಆ ಟೈಮ್ ಬೌಂಡ್ ಪ್ರೋಗ್ರಾಮ್‌ಗಳಲ್ಲಿ ಅಲ್ಲಿನ ವಾಟರ್ ಮ್ಯಾನೇಜ್‌ಮೆಂಟ್ ಅನ್ನು ಸ್ಟ್ರಿಕ್ಟಾಗಿ ಮೆಂಟೇನ್ ಮಾಡಬೇಕು. ಯಾರು ಏನೇ ಹೇಳಿದರೂ ಅಲ್ಲಿ ಡ್ರಿಪ್ ಇರಿಗೇಷನ್ ಅಥವಾ ಸ್ಪ್ರಿಂಕ್ಲರ್ ಹಾಕಲೇಬೇಕು ಎಂದು ಹೇಳಬೇಕಾಗುತ್ತದೆ. ಈ ತರಹ ಮಾಡದ ಹೊರತು ಈ ಬರವನ್ನು ನಾವು ನೀಗಿಸುವುದಕ್ಕೆ ಸಾಧ್ಯವಿಲ್ಲ. ಮಳೆ ಬರುವುದು, ನಂತರ ಮೂರು ವರ್ಷ ಮಳೆ ಬಾರದೇ ಹೋಗುವುದು, ಇದು ಕಾಮನ್ ಫಿನಾಮಿನಾ ಆಗಿ ಬಿಟ್ಟಿದೆ. ಈ ಪರಿಸ್ಥಿತಿಯನ್ನು ನೀವು ನಿಭಾಯಿಸಬೇಕಾದರೆ ರೈತರಿಗೆ ಈಗ ಬಹಳ ಅಗತ್ಯವಾಗಿ ಬೇಕಾಗಿರುವಂತಹ ಬಿತ್ತನೆ ಬೀಜಗಳನ್ನು ಪೂರೈಸಬೇಕು. ಧಾರವಾಡ ಮುಂತಾದ ಕೆಲವು ಜಿಲ್ಲೆಗಳಲಿ ಬಿತ್ತನೆ ಮಾಡಿದ್ದು, ಅದು ಈಗಾಗಲೇ ಹೋಗಿದೆ. ಮತ್ತೆ ಏನಾದರೂ ಹಿಂಗಾರು ಮಳೆ ಬಂದರೆ, ಆಗ ಅವರಿಗೆ ಬಿತ್ತನೆ ಬೀಜ ಮತ್ತು ಗೊಬ್ಬರ ಕೊಡುವಂತಹ ಕೆಲಸಗಳನ್ನು ಆದ್ಯತೆ ಮೇರೆಗೆ ಸರ್ಕಾರ ಮಾಡಬೇಕು. ನಾನು ಒಂದು ವಿಚಾರದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ನಿನ್ನೆ 54 ಕೋಟಿ ರೂಪಾಯಿಗಳ ವಿಮೆ ಹಣವನ್ನು ಕಟ್ಟಿದ್ದೀರಿ. ಇನ್ನು ಇಳಿದಿರುವ ಹಣವನ್ನು ದಯವಿಟ್ಟು ಬೇಗನೇ ಕಟ್ಟಿ. ಸರ್ಕಾರ ಅದನ್ನು ಯಾವಾಗ ಕಟ್ಟುತ್ತದೆ? ಎಂದು ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ಸರ್ಕಾರವನ್ನು

ಕೇಳುತ್ತಿದ್ದೇನೆ. ನಾನು ಆಗಲೇ ಮಾನ್ಯ ತಿಮ್ಮಪ್ಪನವರನ್ನು ಕೇಳಿದೆ. ಚಿಂತಾಮಣಿಯಲ್ಲಿ ಸಂಬಳ ಕೊಡಲಿಲ್ಲವೆಂದರೆ ಅವರು ಅಷ್ಟು ಬೇಗನೇ ಕೆಟ್ಟಾಗಿ ಮಾತನಾಡಿದರು. ಆದರೆ ರೈತರ ವಿಚಾರ ಬಂದರೆ ಯಾರಿಗೂ ಕೆಚ್ಚೇ ಬರುವುದಿಲ್ಲ. ಈ ರೀತಿ ತಾರತಮ್ಯ ಮಾಡಬಾರದು. ಕೋಲಾರ ಜಿಲ್ಲೆಯಲ್ಲಿ ನಾವು ಬದುಕುತ್ತಿರುವುದು ಹಾಲು ಮತ್ತು ರೇಷ್ಮೆಯಿಂದ. ರೇಷ್ಮೆ ಕಥೆ ಬಗ್ಗೆ ನಾನು ಆಗಲೇ ಹೇಳಿದೆ. ಹಾಲಿನ ಪರಿಸ್ಥಿತಿ ಏನಾಗಿದೆ? ಎಂದು ಈಗ ಹೇಳಬಯಸುತ್ತೇನೆ. ಇವತ್ತು ಕನ್‌ಸ್ಯೂಮರ್ಸ್‌ಗೆ ಹಾಲಿಗೆ ಲೀಟರ್‌ಗೆ ಒಂದು ರೂಪಾಯಿ ಜಾಸ್ತಿ ಮಾಡಿದ್ದಾರೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕೇಳಬೇಕು. ಇದರಲ್ಲಿ ಕೇವಲ 45 ಪೈಸೆ ಮಾತ್ರ ಕೋಲಾರ ಯೂನಿಂಗ್ ಕೊಡುತ್ತಾರೆ. ಉಳಿದಿದ್ದು 13 ಪೈಸೆ ಏಜೆಂಟ್‌ಗೆ ಕೊಡುತ್ತಾರೆ. ಉಳಿದ ಹಣವನ್ನು ಮದರ್ ಡೈರಿಯಲ್ಲಿ ಇಟ್ಟುಕೊಳ್ಳುತ್ತಾರೆ. ಈಗಾಗಲೇ ಈ ಯೂನಿಯನ್ ನಾಲ್ಕು ಕೋಟಿ ರೂಪಾಯಿ ನಷ್ಟ ಅನುಭವಿಸುತ್ತಿದೆ. ಇದನ್ನು ಯಾವ ರೀತಿ ಸರಿ ಮಾಡಬೇಕೆಂದು ಯೋಚನೆ ಮಾಡಬೇಕು. ಸಂಬಂಧಪಟ್ಟ ಮಂತ್ರಿಗಳು ಮದರ್ ಡೈರಿಯವರಿಗೆ ಕರೆಸಿ ಈ ಹಣವನ್ನು ಹೆಚ್ಚಿಗೆ ಇಟ್ಟುಕೊಳ್ಳದೆ ಯಾರು ಹಾಲನ್ನು ಉತ್ಪತ್ತಿ ಮಾಡುತ್ತಾರೆ. ಅವರಿಗೆ ತಲುಪಿಸುವ ಕೆಲಸವನ್ನು ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿ ನನಗೆ ಬರದ ವಿಷಯದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಉಪಾಧ್ಯಕ್ಷರೆ, ನಾವು ಈ ಸದನದಲ್ಲಿ ನಿನ್ನೆಯಿಂದ ರಾಜ್ಯದ ಬರದ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಲಿಕ್ಕೆ ಪ್ರಾರಂಭಿಸಿರುವಂಥದ್ದು ಸದನದ ದೃಷ್ಟಿಯಿಂದ ಅತ್ಯಂತ ಸ್ವಾಗತಾರ್ಹವಾದ ನಿರ್ಧಾರ. ನಾವು ಈ ಸದನದಲ್ಲಿ ಮೊಟ್ಟ ಮೊದಲನೆಯದಾಗಿ ಈ ಚರ್ಚೆಯ ಮೂಲಕ ರಾಜ್ಯದ ರೈತನಿಗೆ ಒಂದು ವಿಶ್ವಾಸ ಕೊಡಬೇಕಾದಂತಹ ಪ್ರಾಮುಖ್ಯವಾದು ಕರ್ತವ್ಯ ಹಾಗೂ ಜವಾಬ್ದಾರಿ ನಮ್ಮ ಮೇಲೆ ಇದೆ. ಕಳೆದ ವರ್ಷ ಬರದ ಪರಿಸ್ಥಿತಿ ಬಂದಾಗ ರಾಜ್ಯ ಆ ಪರಿಸ್ಥಿತಿಯನ್ನು ಎದರಿಸಿರುವುದನ್ನು ನೋಡಿದಾಗ ರೈತರು ಬಹಳ ಜಿಗುಪ್ಸೆಗೊಂಡಿದ್ದಾರೆ ಸರ್ಕಾರದ ಬಗ್ಗೆ ನಿರಾಶೆಗೊಂಡಿದ್ದಾಗ ಆ ಹಿನ್ನೆಲೆಯಲ್ಲಿ ಆತ್ಮಹತ್ಯೆ ಆಗಿರುವುದನ್ನು ಕಂಡಿದ್ದೇವೆ. ಆ ಹಿನ್ನಲೆಯಲ್ಲಿ ಅನೇಕರು ನಮ್ಮ ರಾಜ್ಯವನ್ನೇ ತೊರದು ಬೇರೆ ರಾಜ್ಯಗಳಿಗೆ ಹೋಗಿ ಕೂಲಿ ಕೆಲಸ ಮಾಡುವುದನ್ನು ಸಹ ನೋಡಿದ್ದೇವೆ. ರೈತರು ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ರಾಜ್ಯದ ಜನ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಬರದ ಪರಿಸ್ಥಿತಿ ಹಾಗೆಯೇ ಉಳಿದರೆ ನಾವು ಈ ಪರಿಸ್ಥಿತಿ ಎದುರಿಸವುದು ಹೇಗೆ ಎಂದು ಗಂಭೀರವಾದ ಸವಾಲು ಅವರು ಕಣ್ಣು ಮುಂದೆ ಬಂದು ನಿಂತಿದೆ. ಸರ್ಕಾರವಾಗಲಿ, ಸದನವಾಗಲಿ, ನಾವು ಇಲ್ಲಿ ಕುಳಿತು ಈ ವಿಷಯವನ್ನು ಚರ್ಚೆ ಮಾಡುವುದರ ಮೂಲಕ ಐದು ಕೋಟಿ ಜನತೆಗೆ ನಮ್ಮನ್ನು ಯಾರು ಇಲ್ಲಿ ಆರಿಸಿ ಕಳುಹಿಸಿದ್ದಾರೆ ಅವರಿಗೆ ನಾವು ಒಂದು ವಿಶ್ವಾಸ ತುಂಬುವ ಕೆಲಸ ಆಗಬೇಕು ಅವರಲ್ಲಿ ಒಂದು ಆತ್ಮವಿಶ್ವಾಸವನ್ನು ತುಂಬಿ ಇಲ್ಲಿ ಈ ಪರಿಸ್ಥಿತಿಯನ್ನು ನಾವು ಸಮರ್ಥವಾಗಿ ನಿಭಾಯಿಸುತ್ತೇವೆ, ನಾವು ಸರ್ಕಾರವಾಗಿ .. ನೀವು ವಿಶ್ವಾಸದಿಂದ ಇರಿ ಎನ್ನುವಂತಹ ಆತ್ಮವಿಶ್ವಾಸ ಜಾಗೃತೆ ಮೂಡಿಸುವ ಕೆಲಸ ಆಗಬೇಕು.

ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಅಭಿನಂದನೆ ಸಲ್ಲಿಸುತ್ತೇನೆ. ಅವರು ಕೃಷಿ ಸಚಿವರನ್ನು ಬದಲು ಮಾಡಿದ್ದಕ್ಕೆ, ಅದಕ್ಕೆ ಅವರಿಗೆ ಅಭಿನಂದನೆ ಏತಕ್ಕಾಗಿ ಅಂದರೆ ನಮ್ಮ ಹಿಂದಿನ ಕೃಷಿ ಸಚಿವರು ಹೇಗಿದ್ದರು ಎಂದರೆ, ಕುತ್ತಿಗೆಗೆ ಹಗ್ಗ ಹಾಕಿಕೊಂಡಿರುವ ರೈತರಿಗೆ ಅವರ

ಹಗ್ಗ ತಪ್ಪಿಸುವುದಕ್ಕೆ ನೋಡಲಿಲ್ಲ, ಅವರ ಹಗ್ಗ ಹಿಡಿದು ಎಳೆದರು. ಅದರ ಪರಿಣಾಮವನ್ನು ನಾವು ನುಸಿ ರೋಗದಲ್ಲಿ ನೋಡಿದ್ದೇವೆ. ಅವರು ರೈತರ ಆತ್ಮ ವಿಶ್ವಾಸವನ್ನು ಸಂಪೂರ್ಣವಾಗಿ ಹಾಳು ಮಾಡುವುದಕ್ಕೆ ಹಿಂದಿನ ಕೃಷಿ ಸಚಿವರು ಅತ್ಯಂತ ಒಂದು ಮಹತ್ತರವಾದ ಪಾತ್ರವನ್ನು ಅವರು ನಿರ್ವಹಿಸಿದ್ದಾರೆ. ಈ ಕೃಷಿ ಸಚಿವರಲ್ಲಿ ಕಂದಾಯ ಸಚಿವರಲ್ಲಿ ಮತ್ತು ಸರ್ಕಾರದಲ್ಲಿ ನಾನು ವಿನಂತಿ ಮಾಡುವುದು ಇಷ್ಟೆ. ರೈತರು ಹತಾಶರಾದ ಸಂದರ್ಭದಲ್ಲಿ ರೈತರು ಗಂಭೀರವಾದ ಸವಾಲನ್ನು ಎದುರಿಸುವ ಸಂದರ್ಭದಲ್ಲಿ ಸರ್ಕಾರದಿಂದ ಜವಾಬ್ದಾರಿಯುತವಾದ ಸ್ಥಾನದಲ್ಲಿರುವವರು ಹಗುರವಾದ ಸಹ ಯಾವುದೇ ಹೇಳಿಕೆಯನ್ನು ನೀವು ಮೊದಲು ಕೊಡಬಾರದು. ಕಳೆದ ವರ್ಷ ಕಂದಾಯ ಸಚಿವರು ಹೇಳಿದರು, ಇನ್ನೂ ಸದನ ಪ್ರಾರಂಭವಾಗಿಲ್ಲ, ಕೇಂದ್ರ ಸರ್ಕಾರಕ್ಕೆ ಮನವಿ ಕಳುಹಿಸಿಲ್ಲ, ಕೇಂದ್ರ ಸರ್ಕಾರದ ಬಗ್ಗೆ ನಮಗೆ ಭರವಸೆ ಇಲ್ಲವೆಂದು ಹೇಳಿದರು, ಯಾಕೆ ಈ ಅವಿಶ್ವಾಸದ ಮಾತನ್ನು ಹೇಳಿ ರೈತದಲ್ಲಿ ವಿಶ್ವಾಸ ಮೂಡಿಸುವ ಬದಲು ಅವಿಶ್ವಾಸವನ್ನು ಮೂಡಿಸುವ ಪ್ರಯತ್ನ ನಮ್ಮ ಕಂದಾಯ ಸಚಿವರಿಂದ ಕಳೆದ ಬಾರಿ ಆಯಿತು. ಅಷ್ಟೇ ಅಲ್ಲ, ರಾಜ್ಯ ಸರ್ಕಾರ ಕಳೆದ ಬಾರಿ 800 ಕೋಟಿ ರೂಪಾಯಿಗಳಿಗೆ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿತು. ಮನವಿಯನ್ನು ಸ್ವತಃ ಕಂದಾಯ ಸಚಿವರು ತೆಗೆದುಕೊಂಡು ಹೋಗಬೇಕಾಗಿತ್ತು. ಅದು ಹೋಗಲಿ, ಮುಖ್ಯ ಮಂತ್ರಿಗಳು ಸ್ವತಃ ಕೇಂದ್ರ ಸರ್ಕಾರಕ್ಕೆ ಕೊಡುವಂತಹ ಆ ಒಂದು ಪ್ರಸ್ತಾವನೆಯನ್ನು ತೆಗೆದುಕೊಂಡು ಹೋಗಬೇಕಾಗಿತ್ತು. ಆದರೆ ನಾವು ಯಾವಾಗ ಹೋಗಿ ಕೇಂದ್ರ ಸರ್ಕಾರಕ್ಕೆ ರಾಜ್ಯದ ಬರ ಪರಿಸ್ಥಿತಿ ಗಂಭೀರತೆಯ ಅರಿವನ್ನು ಮೂಡಿಸಿ ಕೊಟ್ಟವೋ ಅದರ ನಂತರ ಸರ್ವಪಕ್ಷಗಳ ನಿಯೋಗ ಹೋಯಿತು. ರಾಜ್ಯದ ಬರ ಪರಿಸ್ಥಿತಿ ಗಂಭೀರತೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲರೂ ಜೊತೆಗೆ ಹೋಗಿ ರಾಜ್ಯದ ಜನತೆಯ ಪರವಾಗಿ ಅಹವಾಲುಗಳನ್ನು ಮಂಡಿಸಿದ್ದೇವೆ. ಅದರ ಪರಿಣಾಮ ರಾಜ್ಯಕ್ಕೆ ಒಂದು ಲಕ್ಷ ಟನ್ ದವಸಧಾನ್ಯಗಳು ಬಂದಿವೆ. ಒಂದೇ ಕಂತಿನಲ್ಲಿ ಸಿಆರ್‌ಎಫ್‌ನಲ್ಲಿ ಹಣವನ್ನು ಕೊಟ್ಟಿದ್ದಾರೆ. ಹೀಗೆ ಅನೇಕ ರೀತಿಯ ಸಹಾಯಗಳನ್ನು ಕೊಟ್ಟಿದ್ದಾರೆ. ಮೇವು ಪೂರೈಕೆ ಆಗಿದೆ. ಕೊಟ್ಟಿರುವ ಆಹಾರಧಾನ್ಯಗಳು ಖರ್ಚಾಗಿದ್ದರೆ ಮತ್ತೆ ಕೇಳಿ ಒಂದು ಲಕ್ಷ ಟನ್ ಕೊಡುವುದಕ್ಕೆ ತಯಾರಾಗಿದ್ದೇವೆಂದು ಕೇಂದ್ರ ಸರ್ಕಾರದಿಂದ ವಿಶ್ವಾಸದ ಮಾತು ಬಂತು ಒಂದು ಲಕ್ಷ ಟನ್ ಆಹಾರವನ್ನು ಕೊಟ್ಟು ಎರಡು ಲಕ್ಷ ಟನ್ ಮೇವು ಕೊಟ್ಟು, ಒಂದು ಲಕ್ಷ ಟನ್ ಮತ್ತೆ ಕೊಡುವುದಕ್ಕೆ ಸಿದ್ದರಿದ್ದೇವೆಂದು ಹೇಳಿದರು. ಇಂತಹ ಸಂದರ್ಭ ಹಗುರವಾಗಿ ಸರ್ಕಾರದಲ್ಲಿ ಇರುವವರು ಜವಾಬ್ದಾರಿಯುತವಾದ ಮಾತನಾಡದೆ ಇರುವುದು ಸರಿಯಲ್ಲ. ಸರ್ಕಾರಕ್ಕೆ ತನ್ನದೇ ಆದ ಇತಿಮಿತಿಗಳಿವೆ. ಆ ಇತಿಮಿತಿಗಳನ್ನು ಮೀರಿ ನಿಂತು ನಾವು ನಿಮ್ಮನ್ನು ರಕ್ಷಿಸುತ್ತೇವೆ ಎನ್ನುವ ವಿಶ್ವಾಸ ಈ ಸದನದ ಮೂಲಕ ರಾಜ್ಯದ ಜನತೆಗೆ ಕೊಡಬೇಕಾದ ಅಗತ್ಯತೆ ಇದೆ. ಮೊಟ್ಟ ಮೊದಲನೆಯದಾಗಿ ನನ್ನ ವಿನಂತಿ ಏನೆಂದರೆ, ಸರ್ಕಾರದ ಜವಾಬ್ದಾರಿಯುತ ಸ್ಥಾನದಲ್ಲಿರುವ ಮಂತ್ರಿಗಳು ಅತ್ಯಂತ ಜವಾಬ್ದಾರಿಯುತ ಹೇಳಿಕೆ ಕೊಡಬೇಕು. ಹಗುರವಾಗಿ ಮಾತನಾಡದೆ, ಒಬ್ಬರೊಬ್ಬರ ಮೇಲೆ ದೋಷಾರೋಪಣೆ ಮಾಡದೆ ಇಂತಹ ಬರದ ಪರಿಸ್ಥಿತಿಯಂತಹ ಸಂದರ್ಭದಲ್ಲಿ ತೆಗೆದುಕೊಳ್ಳದೆ ಜವಾಬ್ದಾರಿಯುತವಾದ ಮಾತುಗಳನ್ನು ಮಾತನಾಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನೂ ಎರಡನೆಯದಾಗಿ ನಾನು ಇದನ್ನು ಹೇಳಿದರೆ ರಾಜಕಾರಣ ಎಂದು ಅನ್ನಿಸಬಹುದು, ಆದರೆ ಎರಡನೆಯದಾಗಿ ಮಂತ್ರಿಮಂಡಲದ ವಿಸ್ತರಣೆಯಿಂದ ಅನೇಕರು ಅತೃಪ್ತಗೊಂಡಿದ್ದಾರೆ. ಅದು ಪತ್ರಿಕೆಯಲ್ಲಿ ಬರುತ್ತಿದೆ. ವಾಸ್ತವಿಕವಾಗಿ ಅದಗ ಸ್ಪಷ್ಟತೆ ಬರುತಾ ಇದೆ. ಪ್ರತಿಭಾನ್ವಿತ ಶಾಸಕರು ಮಂತ್ರಿಗಳಾಗಬೇಕೆಂದು ಹಂಬಲ

ವ್ಯಕ್ತಪಡಿಸಿದರು. ಅವರಿಗೆ ಸಾಮರ್ಥ್ಯ ಇದೆ, ಅವರಿಗೆ ಅವಕಾಶ ಸಿಗಲಿಲ್ಲ. ಅನೇಕ ಜನ ದೆಹಲಿಗೆ ಹೋಗುತ್ತಿದ್ದಾರೆ, ದೆಹಲಿಯಿಂದ ಇಲ್ಲಿಗೆ ಬರುತ್ತಿದ್ದಾರೆ. ಇದನ್ನು ಪತ್ರಿಕೆಯಲ್ಲಿ ನಾವು ನೋಡುತ್ತಿದ್ದೇವೆ. ನಮ್ಮ ಸುತ್ತ ಮುತ್ತ ನಡೆಯುವ ಘಟನೆಯನ್ನು ನೋಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಯಾರು ಭಿನ್ನರಿದ್ದಾರೆ, ನಾಯಕತ್ವ ನಿಷ್ಠರು ಯಾರಿದ್ದಾರೆ ಎನ್ನೂವುದರ ಬಗ್ಗೆ ನಮಗೆ ಏನೂ ಬೇಕಾಗಿಲ್ಲ. ನಿಮ್ಮ ಈ ಚಟುವಟಿಕೆಗಳು ರಾಜ್ಯದ ಜನ ಇನ್ನಷ್ಟು ಹೆಚ್ಚು ಬೇಸರಗೊಳ್ಳುವ ಹಾಗೆ ಮಾಡುತ್ತಿವೆ. ನಮ್ಮ ಪರಿಸ್ಥಿತಿ ನೋಡುವುದರ ಬದಲು ನಿಮ್ಮ ಆಂತರಿಕ ಕಚ್ಚಾಟದಲ್ಲಿ ನೀವು ಮುಳುಗಿದ್ದೀರಿ ಎಂಬ ಬಗ್ಗೆ ಆ ಮೂಲಕ ಇಡೀ ಸದನದ ಬಗ್ಗೆ ನಮ್ಮ ಬಗ್ಗೆ ಬೇಸರ ವ್ಯಕ್ತ ಪಡಿಸುತ್ತಿದ್ದಾರೆ. ಹಾಗಾಗಿ ನಿಮ್ಮ ಭಿನ್ನಮತೀಯ ಚಟುವಟಿಕೆ ನಿಮ್ಮ ನಿಷ್ಠಾವಂತರ ಚಟುವಟಿಕೆ ರಾಜಕೀಯದಲ್ಲಿ ನಾಲ್ಕು ಗೋಡೆಗಳ ಮಧ್ಯೆ ಆಂತರಿಕ ವಿಷಯ ಎಂದು ಎನ್ನಿಸಿದರೂ ಆಂತರಿಕವಾಗಿ ನಿಮ್ಮದೇ ಆದ ರೀತಿಯಲ್ಲಿ ನೀವು ಮಾಡಿಕೊಂಡರೂ ಆದರ ದುಷ್ಪರಿಣಾಮ ರಾಜ್ಯದ ಜನತೆ ಮೇಲೆ ಆಗದೆ ಇರುವ ಹಾಗೆ ಕಟು ಎಚ್ಚರವನ್ನು ನಾಯಕತ್ವ ನೋಡಬೇಕು. ಗಂಭೀರವಾದ ಸವಾಲನ್ನು ಎದುರಿಸಬೇಕಾದುದು ಇದೆ. ಇಲ್ಲವಾದರೆ ದಿನಬೆಳಗಾದರೆ ಇವರೇ ಕಚ್ಚಾಡುತ್ತಾರೆ, ನಮ್ಮ ಸಮಸ್ಯೆಗೆ ಇವರು ಏನು ಬರುತ್ತಾರೆ ಎನ್ನುವ ಮಾತು ರಾಜ್ಯದ ಜನತೆ ಮೂಲಕ ನಮಗೆ ಅದು ಕಂಡುಬರುವುದಿದೆ. ಹಾಗಾಗಿ ನಿಮ್ಮ ಭಿನ್ನಮತ, ನಿಷ್ಠಾವಂತ ಚಟುವಟಿಕೆ ಯಾವುದೇ ಇದ್ದರೂ ದಯವಿಟ್ಟು ಅದಕ್ಕೆ ಪೂರ್ಣ ವಿರಾಮವನ್ನು ಹಾಕಿ, ಈ ರೀತಿಯ ಚಟುವಟಿಕೆಯನ್ನು ಅವರು ನಿಲ್ಲಿಸಬೇಕೆನ್ನುವಂತಹ ಆಗ್ರಹವನ್ನು ಸಹ ನಾನು ಮಾಡುತ್ತಿದ್ದೇನೆ. ಬರದ ಪರಿಸ್ಥಿತಿ ಗಂಭೀರವಾಗಿ ಬೆಳೆದಿದೆ, ಅದರ ಬಿಸಿ ನಮಗೆಲ್ಲರಿಗೆ ತಟ್ಟಿದೆ. ಉತ್ತರ ಕನ್ನಡ ಜಿಲ್ಲೆ ಸಿರ್ಸಿಯಿಂದ ನಾನು ಬಂದಿದ್ದೇನೆ. ನನ್ನ ಕ್ಷೇತ್ರ ಅಂಕೋಲ. ಕರಾವಳಿ ಮಲೆನಾಡಿನ ಎಲ್ಲಾ ಕ್ಷೇತ್ರವನ್ನು ನನ್ನ ಕ್ಷೇತ್ರ ಒಳಗೊಂಡಿದೆ. ಇಲ್ಲಿ 100 ಇಂಚಿನವರೆಗೆ ಮಳೆ ಆಗ ಬೇಕಾಗಿತ್ತು. ಆದರೆ ಕಳೆದ ವರ್ಷ ಮಳೆ ಆಗಲ್ಲ. ನಮ್ಮ ಬುಗ್ಗೆಗಳು ಬರಲಿಲ್ಲ. ಕೆರೆ ಕಟ್ಟೆಗಳು ತುಂಬಲಿಲ್ಲ, ಈ ವರ್ಷದ ಪರಿಸ್ಥಿತಿ ಎಂದರೆ, ಬಿತ್ತನೆ ಕಾರ್ಯ ಮಾಡಿದ್ದಾರೆ, ನಾಟಿ ಮಾಡುವುದಕ್ಕಾಗಿ ಸಸಿಗಳನ್ನು ಹಾಕಿದ್ದಾರೆ, ಆದರೆ ಇವತ್ತಿನ ತನಕ ಮಳೆ ಇಲ್ಲದ ಕಾರಣದಿಂದ ನಾಟಿ ಮಾಡುವುದಕ್ಕಾಗುತ್ತಿಲ್ಲ. ಬಿತ್ತನೆ ಕೆಲಸವನ್ನು ಮುಂದುವರೆಸುವುದಕ್ಕಾಗುತ್ತಿಲ್ಲ. ಈ ರೀತಿಯಾದಂಥ ಅನೇಕ ಸಮಸ್ಯೆಗಳನ್ನು ಮಲೆನಾಡಿನ ಜಿಲ್ಲೆಗಳಲ್ಲಿ ನಾವು ಅನುಭವಿಸುತ್ತಿದ್ದೇವೆ ಎಂದರೆ, ರಾಜ್ಯದ, ಬಯಲುಸೀಮೆಯ ಉಳಿದ ಜಿಲ್ಲೆಗಳಲ್ಲಿ ಅದರ ಗಂಭೀರತೆ ಎಷ್ಟು ಇರಬಹುದು ಎನ್ನುವುದನ್ನು ನಾವು ಊಹೆ ಮಾಡಬಹುದು. ನೆಟ್ಟಿರುವ ಸಸಿಗಳು ಒಣಗುತ್ತಿವೆ. ಇವತ್ತು ನಾವು ಎಲ್ಲಾ ಕಡೆ ವನ ಮಹೋತ್ಸವ ಆಚರಣೆ ಮಾಡುತ್ತಿದ್ದೇವೆ. ಜೂನ್ ಜುಲೈ ಬಂತು ಎಂದರೆ ವನ ಮಹೋತ್ಸವ ಆಚರಣೆ ಮಾಡುತ್ತೇವೆ. ವನ ಮಹೋತ್ಸವದಲ್ಲಿ ನೆಟ್ಟಂತಹ ಸಸಿಗಳು ಒಣಗಿ ಹೋಗಿ ಮತ್ತೆ ಅದೇ ಗುಂಡಿಯಲ್ಲಿ ಮತ್ತೆ ಮುಂದಿನ ವರ್ಷ ಸಸಿಗಳನ್ನು ನೆಡುವಂತಹ ಪರಿಸ್ಥಿತಿ ಇದೆ. ಆ ರೀತಿಯಾದ ಪರಿಸ್ಥಿತಿ ನಮ್ಮಲ್ಲಿ ಒದಗಿಸಿದೆ. ಕೃಷಿ ಆಗಿರಲಿ ಯಾವುದೇ ಚಟುವಟಿಕೆ ಆಗಿರಲಿ ರೈತರು ಇವತ್ತು ಕಷ್ಟ ಅನುಭವಿಸುತ್ತಿದ್ದಾರೆ. ಇದರ ಜೊತೆಯಲ್ಲಿ ಕುಡಿಯುವ ನೀರಿನ ಅಭಾವ ಕೂಡ ಉಂಟಾಗಿದೆ. ಅದರ ಬಗ್ಗೆ ವಿಸ್ತಾರವಾಗಿ ಚರ್ಚೆ ಆಗಿದೆ. ಮೇವುಗಳ ಅಭಾವ ಇದೆ. ಈ ರೀತಿ ದೂರ ಅನೇಕ ಕಷ್ಟಗಳನ್ನು ಅನುಭವಿಸುತ್ತಿರುವ ಸಂದರ್ಭದ ಜೊತೆಯಲ್ಲಿ ನಮಗೆ ಕಳೆದ ವರ್ಷ ಮತ್ತು ಈ ವರ್ಷ ಎದುರಾಗಿರುವ ಬಹಳ ದೊಡ್ಡ ಸಂಕಷ್ಟ ಎಂದರೆ ರೈತರು ಬೆಳೆದ ಬೆಳೆಗೆ ಯೋಗ್ಯವಾದ ಬೆಲೆ ಸಿಗದೆ ಇರುವುದು. ನಾವು ಬೆಳೆದ ಬೆಳೆಗೆ ಯೋಗ್ಯವಾದ ಬೆಲೆ ಸಿಗಲಿಲ್ಲ.

4.40 ಪಿ.ಎಂ

ಆ ಕಾರಣದಿಂದ ನಾವು ಇವೊತ್ತು ಇನ್ನಷ್ಟು ಸಂಕಷ್ಟದಲ್ಲಿದ್ದೇವೆ. ಇವೆಲ್ಲದರ ಜೊತೆಗೆ ಗಾಯದ ಮೇಲೆ ಬರೆ ಎಳೆಯುವಂತೆ ಸರ್ಕಾರ ರೈತದಿಂದ ಸಾಲ ವಸೂಲಾತಿ ಕ್ರಮವನ್ನು ತೆಗೆದುಕೊಳ್ಳುತ್ತಿದೆ. ಸಹಕಾರ ಮಂತ್ರಿಗಳು ಈಗ ಇಲ್ಲಿ ಇಲ್ಲ. ಹರಾಜು ಹಾಕುವಂಥ ಕೆಲಸವನ್ನು ಸರ್ಕಾರ ಮಾಡಬಾರದು, ಒಂದು ವೇಳೆ ಇದನ್ನು ಮಾಡಿದರೆ ಸರ್ಕಾರ ರಾಜ್ಯದ ಜನತೆಯ ಶಾಪಕ್ಕೆ ತುತ್ತಾಗುತ್ತಾರೆ. ಹರಾಜು ಹಾಕುವಂಥದ್ದೇ ಆಗಲಿ, ಸಾಲ ವಸೂಲಾತಿಗಾಗಿ ರೈತರ ಮನೆ ಬಾಗಿಲಿಗೆ ಜೀಪ್ ಕಳುಹಿಸುವಂಥ ಕ್ರಮವನ್ನು ಮಾಡಬಾರದು. ಆದರ ಬಗ್ಗೆ ಸಹಕಾರ ಮಂತ್ರಿಗಳಾಗಲಿ, ಸರ್ಕಾರವಾಗಲಿ ಜವಾಬ್ದಾರಿಯುತವಾಗಿ ಕ್ರಮ ತೆಗೆದುಕೊಂಡು ಸಾಲ ವಸೂಲಾತಿಯನ್ನು ತಕ್ಷಣ ನಿಲ್ಲಿಸಬೇಕು ಎಂದು ಸರ್ಕಾರದಿಂದ ಸೂಚನೆಯನ್ನು ತಕ್ಷಣ ಕಳುಹಿಸಬೇಕಾದ ಅಗತ್ಯತೆ ಇದೆ. ಇನ್ನು ಬೆಳೆ ವಿಮೆ ಬಗ್ಗೆ ಕೂಡ ಚರ್ಚೆಯಾಗಿದೆ. ಈ ಬೆಳೆ ವಿಮೆ ಬಗ್ಗೆ ರೈತರಿಗೆ ಇನ್ನಷ್ಟು ಜಾಗೃತಿಯನ್ನು ಮೂಡಿಸಿ ಅವರಿಗೆ ವಿಶ್ವಾಸ ಮೂಡಿಸಿ ಪೂರ್ಣವಾದ ವಿವರಣೆಗಳನ್ನು ಈ ಬಗ್ಗೆ ರೈತರಿಗೆ ಕೊಟ್ಟು ಬೆಳೆ ವಿಮೆಯನ್ನು ಮಾಡಿಸುವಂತೆ ರೈತರಿಗೆ ಹೇಳಬೇಕು. ಇವರು ರೈತ ಸಂಪರ್ಕ ಕೇಂದ್ರ ಎಂದು ಮಾಡಿದ್ದಾರೆ. ಗ್ರಾಮ ಸೇವಕರುಗಳು ಹಳ್ಳಿಗಳಲ್ಲಿ ಅಡ್ಡಾಡುತ್ತಿದ್ದರು. ಇವತ್ತು ಇವರುಗಳು ನಾಲ್ಕು ಗೋಡೆಗಳ ಕಟ್ಟಡದ ಮಧ್ಯೆ ಫ್ಯಾನ್ ಕೆಳಗಡೆ ಕುಳಿತುಕೊಳ್ಳುವಂಥ ಸ್ಥಿತಿಯನ್ನು ಸರ್ಕಾರ ಅವರಿಗೆ ನಿರ್ಮಿಸಿಕೊಟ್ಟಿದೆ. ಅವರಿಗೆ ತಕ್ಷಣ ನೀವು ಸೂಚನೆ ಕೊಟ್ಟು ಪಂಚಾಯತ್‌ಗೆ ಒಬ್ಬೊಬ್ಬರಂತೆ ಗ್ರಾಮ ಸೇವಕರು ಏನಿದ್ದಾರೆ ಅವರುಗಳೂ ಕೂಡ ಜನರ ಜೊತೆಗೆ ಅಡ್ಡಾಡಲಿ, ನಮ್ಮ ಕಷ್ಟಸುಖಗಳನ್ನು ಕೇಳಲು ಯಾರೋ ಒಬ್ಬ ಗ್ರಾಮ ಸೇವಕ ಸರ್ಕಾರದ ವತಿಯಿಂದ ಬಂದಿದ್ದಾರೆ ಎನ್ನುವಂಥ ವಿಶ್ವಾಸ ಹಳ್ಳಿಗಳಲ್ಲಿ ನಿರ್ಮಾಣವಾಗಲಿ. ಕೃಷಿ ಸಹಾಯಕರನ್ನು ನಾಲ್ಕು ಗೋಡೆಗಳ ಮಧ್ಯೆಯೇ ನೀವು ಕೂರಿಸಬೇಡಿ. ಗ್ರಾಮ ಸೇವಕರಿಗೆ ಹಳ್ಳಿಯಲ್ಲಿ ಅಡ್ಡಾಡುವುದಕ್ಕೆ ನೀವು ಹೇಳಿ. ಸದನದಲ್ಲಿ ನಾವು ಮತ್ತು ನೀವು ಒಂದು ತಿಂಗಳು ಕುಳಿತಿರುತ್ತೇವೆ, ಕೇವಲ ಶನಿವಾರ ಮತ್ತು ಭಾನುವಾರ ಬಿಟ್ಟು ಬೇರೆ ದಿನಗಳಲ್ಲಿ ನಾವೆಲ್ಲರೂ ಹಳ್ಳಿಗಳಲ್ಲಿ ಅಡ್ಡಾಡವುದಕ್ಕೆ ಆಗುವುದಿಲ್ಲ. ಸರ್ಕಾರದ ಪರವಾಗಿ ಆ ಗ್ರಾಮ ಸೇವಕರು ಹಳ್ಳಿಯಲ್ಲಿ ಓಡಾಡಲಿ. ದಯವಿಟ್ಟು ಹಿಂದೆ ಏನು ರೈತ ಸಂಪರ್ಕ ಕೇಂದ್ರವಾಗಿದೆ. ಅದು ಇರಲಿ. ವೈಜ್ಞಾನಿಕವಾಗಿ ರೈತರಿಗೆ ಯಾವ ಯಾವ ರೀತಿಯಾಗಿ ಸಹಾಯವನ್ನು ಮಾಡುವುದಕ್ಕೆ ರೈತ ಸಂಪರ್ಕ ಕೇಂದ್ರ ನಿರ್ಮಾಣವಾಗಿದೆಯೇ ಅದು ಆ ಎಲ್ಲಾ ಕೆಲಸ ಮಾಡಲಿ. ಆದರೆ ಇಂಥ ಕಷ್ಟದ ಬರಗಾಲದ ಸಂದರ್ಭದಲ್ಲಿ ನಿಮ್ಮ ಗ್ರಾಮ ಸಹಾಯಕರು, ಕೃಷಿ ಸಹಾಯಕರು ಯಾರಿದ್ದಾರೋ ಅವರನ್ನು ಹಳ್ಳಿಯಲ್ಲಿ ಓಡಾಡಬೇಕೆಂದು ನೀವು ತಿಳಿಸಿ. ಈ ಬಗ್ಗೆ ಸೂಚನೆ ತಕ್ಷಣ ಹೋಗಬೇಕು. ಏಕೆಂದರೆ ಯಾರೋ ಒಬ್ಬರು ಜನರ ಕಷ್ಟ ಕೇಳುವುದಕ್ಕೆ ಬಂದಿದ್ದಾರೆ ಎಂದರೆ ಜನರಿಗೆ ಒಂದು ರೀತಿಯ ಸಮಾಧಾನವಾಗುತ್ತದೆ. ಅವರು ಮಾಡುವುದು ಏನು ಎಂಬ ಬಗ್ಗೆ ನಮಗೆ ಗೊತ್ತಿದೆ. ಆದರೆ ಸರ್ಕಾರದ ಪರವಾಗಿ ಕಷ್ಟವನ್ನು ಕೇಳುವುದಕ್ಕೆ ಗ್ರಾಮ ಸೇವಕರು ಬಂದಿದ್ದಾರೆಂದರೆ ಒಂದು ರೀತಿ ವಿಶ್ವಾಸ ಮೂಡುತ್ತದೆ. ಅಧ್ಯಕ್ಷರೆ, ಇನ್ನೊಂದು ಸಹಾಯ ರೈತರಿಗೆ ಆಗಬೇಕು. ಮಾನ್ಯ ಮುಖ್ಯಮಂತ್ರಿಗಳಿಂದ ರೈತರಿಗೆ ಅತ್ಯಂತ ತುರ್ತಾಗಿ ಆಗಬೇಕಾದ ಸಹಾಯವೇನು ಎಂದರೆ ಈಗೇನು ರೈತರಿಗೆ ಬೇಕಾದ ಆರ್.ಟಿ.ಸಿಗಳನ್ನು ಕಂಪ್ಯೂಟರೀಕರಣದಿಂದ ಕೊಡಲಾಗುತ್ತಿದೆ

ಇದರಿಂದ ಬಹಳ ಒಳ್ಳೆಯದು ರೈತರಿಗಾಗಿದೆ. ಹಿಂದೆ ಇದನ್ನು ಪಡೆಯಲು ರೈತರಿಗೆ ಕಛೇರಿಗಳಲ್ಲಿ ಕಿರುಕುಳವಾಗುತ್ತಿತ್ತು. ಆದರೆ ಈಗ ಕಂಪ್ಯೂಟರೀಕರಣದಿಂದ ಅದು ತಪ್ಪಿದೆ. ಆದರೆ ಆರ್.ಟಿ.ಸಿ. ಪಡೆಯಲು ನಿಗಧಿ ಮಾಡಿರುವ ಶುಲ್ಕ ಬಾರಿ ದುಬಾರಿಯಾಗಿದೆ. ಈಗ 15 ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಮೊದಲು ಒಂದು ರೂಪಾಯಿ ಎಂಭತ್ತು ಪೈಸೆಗೆ ಕೊಟ್ಟರೆ ನಮ್ಮ ಎಲ್ಲಾ ವಿಲೇಜ್ ಅಕೌಂಟೆಂಟ್‌ರು ಆರ್.ಟಿ.ಸಿ. ಕೊಟ್ಟುಬಿಡುತ್ತಿದ್ದರು. 2 ರೂಪಾಯಿಗಳಿಗೆ ಕೊಟ್ಟುಬಿಡುತ್ತಿದ್ದರು. ಆದರೆ ಇಂಥ ಕಷ್ಟದ ಸಂದರ್ಭದಲ್ಲಿ 15 ರೂಪಾಯಿ ಕೊಡಬೇಕೆಂದರೆ ರೈತರಿಗೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ತಾಲ್ಲೂಕು ಕೇಂದ್ರದಲ್ಲಿ ತಹಶೀಲ್ದಾರ್ ಕಛೇರಿಯಲ್ಲಿ ಕಂಪ್ಯೂಟರ್ ಇರುವುದು. ರೈತರು ಹಳ್ಳಿಯಿಂದ ಒಂದು ದಿನ ಕೂಲಿ ಕೆಲಸವನ್ನು ಬಿಟ್ಟು ಬರಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ವಿಶ್ವೇಶ್ವರ ಹೆಗಡೆಯವರೆ, ರೈತರು ಪಹಣಿ ಪಡೆಯಬೇಕಾದರೆ ಕನಿಷ್ಟ 100 ರಿಂದ 150 ರೂಪಾಯಿಗಳನ್ನು ಕೊಡಬೇಕಾಗುತ್ತದೆ ಎಂದು ನೀವೇ ಭಾಷಣ ಮಾಡಿದ್ದೀರಿ. ಇದನ್ನು ತಪ್ಪಿಸಬೇಕು ಎಂದು ನೀವೇ ಭಾಷಣ ಮಾಡಿದಿರಿ ಈಗ ಕೇವಲ 15 ರೂಪಾಯಿಗಳಿಗೆ ಸಿಗುತ್ತದೆ ಎಂದರೆ ಕಡಿಮೆಯೇ ಅಲ್ಲವೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅದು ಆ ರೀತಿಯಲ್ಲ ಅಧ್ಯಕ್ಷರೆ, 10, 20 ರೆಕಾರ್ಡ್ಸ್‌ಗಳು ಇದ್ದರೆ ಅವುಗಳಿಗೆ 100, 125 ರೂಪಾಯಿಗಳಲ್ಲಿ ಮುಗಿಸಿಬಿಡುತ್ತಿದ್ದೆವು. ಆದರೆ ಈಗ ಪ್ರತಿ ರೆಕಾರ್ಡ್‌ಗೆ 15 ರೂಪಾಯಿಗಳನ್ನು ಕೊಡಬೇಕಾಗಿದೆ. ನಮ್ಮ ಮನೆಯದೇ ಉದಾಹರಣೆಗೆ ನನ್ನದೇ ಒಂದು 10 ರೆಕಾರ್ಡ್‌ಗಳು ಇವೆ. ಹಿಂದೆ 10 ರೆಕಾರ್ಡ್‌ಗಳು ಇದ್ದರೆ 50 ರೂಪಾಯಿಗೋ, 100 ರೂಪಾಯಿಗೋ ಮುಗಿದು ಹೋಗುತ್ತಿತ್ತು. ಇವೊತ್ತು 10 ರೆಕಾರ್ಡ್‌ಗಳು ಇದ್ದರೆ ಒಂದೊಂದಕ್ಕೂ 15 ರೂಪಾಯಿಗಳನ್ನು ಕೊಡಬೇಕಾಗಿದೆ. ಒಂದೊಂದು ಸರ್ವೆ ನಂಬರ್ ರೆಕಾರ್ಡ್‌ಗೂ ನಾನು 15 ರೂಪಾಯಿಗಳನ್ನು ಕೊಡಬೇಕಲ್ಲಾ. ಇದು ದುಬಾರಿಯಾಗುತ್ತಿದೆ. ಒಂದು ರೂಪಾಯಿ ಎಂಭತ್ತು ಪೈಸೆಗೂ 15 ರೂಪಾಯಿಗಳಿಗೂ ಎಷ್ಟು ಅಜಗಜಾಂತರ ನೋಡಿ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನದೊಂದು ವಿನಂತಿ, ಇದರಿಂದ ಸರ್ಕಾರ ಹಣ ಮಾಡಬೇಕಾದ ಅಗತ್ಯ ಪ್ರಾಮಾಣಿಕವಾಗಿಯೂ ಇಲ್ಲ. ಆದರೆ ನಿಜವಾಗಿಯೂ ಈಗ ಮಾಡಿರುವ ಕ್ರಮದಿಂದ ಸರ್ಕಾರಕ್ಕೆ ನಿಜವಾಗಿ ಹಣ ಆಗುತ್ತಿದೆ. ದಿನಕ್ಕೆ ಒಂದೊಂದು ತಹಶೀಲ್ದಾರ್ ಕಛೇರಿಯಿಂದ 10 ಸಾವಿರ ರೂಪಾಯಿಗಳಿಗೂ ಹೆಚ್ಚು ಕಲೆಕ್ಷನ್ ಇದರಿಂದ ಆಗುತ್ತಿದೆ. ನಾನು ಕೇಳಿದೆ, ಅಲ್ಲಿ ಅಷ್ಟಷ್ಟು ಉದ್ದ ಕ್ಯೂ ಕೂಡ ನಿಲ್ಲುತ್ತಿದ್ದಾರೆ, ಅದರ ರಗಳೆ ಕೂಡ ಇದೆ. ಆದರೆ ಪ್ರಾರಂಭಿಕ ಹಂತದಲ್ಲಿ ಅನೇಕ ಅಡಚಣೆಗಳು ಇರುತ್ತವೆ, ಅದು ನನಗೂ ಅರ್ಥವಾಗುತ್ತದೆ, ಆದ್ದರಿಂದ ಅದರ ಬಗ್ಗೆ ನಾನು ಏನೂ ಹೇಳಲು ಈಗ ಬಯಸುವುದಿಲ್ಲ. ರೈತ ಒಂದು ದಿನ ಕೂಲಿ ಕೆಲಸ ಬಿಟ್ಟು ಪೇಟೆಗೆ ಬಂದರೆ ಸಂಸಾರಕ್ಕೆ ಏನಾದರೂ ತೆಗೆದುಕೊಂಡು ಹೋಗ ಬೇಕಾಗುತ್ತದೆ. ಅವನ ಊಟ ತಿಂಡಿ ಖರ್ಚು ಇರುತ್ತದೆ, ಇದರ ಜೊತೆಗೆ ಪ್ರತಿಯೊಂದು ಸರ್ವೆ ನಂಬರ್‌ಗೆ ಆರ್.ಟಿ.ಸಿ ಪಡೆಯಲು 15 ರೂಪಾಯಿ ಕೊಡಬೇಕು ಎಂದರೆ ಇದು ಬಹಳ ದುಬಾರಿ ಆಗುತ್ತದೆ, ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಸರ್ಕಾರದ ಕಡೆಯಿಂದ ಹೇಳುವಂಥ ಸಂದರ್ಭದಲ್ಲಿ ಹಿಂದೆ ಏನು 1 ರೂಪಾಯಿ 80 ಪೈಸೆ ಇದ್ದುದನ್ನು 5 ರೂಪಾಯಿ ಮಾಡುತ್ತೇವೆಂದು ಹೇಳಲಿ. 5 ರೂಪಾಯಿಗಳಿಗಿಂತ ಜಾಸ್ತಿಯಾದರೆ ರೈತರು ಇಂದು ಕೊಡುವಂಥ ಸ್ಥಿತಿಯಲ್ಲಿ ಇಲ್ಲ. ಇದರಿಂದ ಬಹಳ ತೊಂದರೆಯಾಗುತ್ತದೆ.

ಶ್ರೀ ಎಂ.ಪಿ. ಅಪಚ್ಚುರಂಜನ್ : ಸನ್ಮಾನ್ಯ ಮುಖ್ಯಮಂತ್ರಿಗಳೆ, ಈ ಆರ್.ಟಿ.ಸಿ ಪಡೆಯಲು ಒಂದು ಸರ್ವೆ ನಂಬರ್‌ಗೆ 15 ರೂಪಾಯಿ ಏನು ಮಾಡುತ್ತೀರಿ ಇದು ಮೊದಲು ಒಂದು ಕುಳಕ್ಕೆ 15 ರೂಪಾಯಿಗಳು ಇತ್ತು. ಒಂದು ಕುಳದಲ್ಲಿ ಸುಮಾರು 10 ಸರ್ವೆ ನಂಬರ್ ಬಂದರೆ ಅದಕ್ಕೆ 15 ರೂಪಾಯಿ ಕೊಟ್ಟರೆ ಜಮಾಬಂಧಿ ರೈತನಿಗೆ ಇಡೀ ಸರ್ವೆ ನಂಬರ್‌ಗೆ ಸಿಗುತ್ತಿತ್ತು. ಈಗ ಪ್ರತಿಯೊಂದು ಸರ್ವೆ ನಂಬರ್‌ಗೆ 15, 15 ರೂಪಾಯಿಗಳಾಗಿರುವುದರಿಂದ 10 ಸರ್ವೆ ನಂಬರ್ ಇದ್ದರೆ ರೈತ 150 ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ : ಒಬ್ಬೊಬ್ಬನಿಗೂ ವರ್ಷಕ್ಕೆ ಒಮ್ಮೆ ಫ್ರೀಯಾಗಿ ಕೊಡುವ ವಿಚಾರವಿದೆಯಲ್ಲಾ.

ಶ್ರೀ ಎಂ.ಪಿ. ಅಪ್ಪುಚ್ಚುರಂಜನ್ : ವರ್ಷಕ್ಕೆ ಫ್ರೀಯಾಗಿ ಕೊಡುತ್ತಿಲ್ಲ. ನೀವು ಮೊದಲನೆಯದಾಗಿ ಒಂದು ಸಾರಿ ಆರ್.ಟಿ.ಸಿ ಮಾಡಿದಾಗ ಒಂದು ಸೆಟ್ ಫ್ರಿ ಕೊಡುತ್ತೀರಿ. ಅದು ಆದನಂತರ ಕೊಡುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ವರ್ಷಕ್ಕೆ ಒಂದು ಬಾರಿ ರೈತರಿಗೆ ಫ್ರೀಯಾಗಿ ಕೊಡಬಹುದು. ಪ್ರತಿ ಬಾರಿಯೂ ಕೊಡುವುದಕ್ಕಾಗುತ್ತದೆಯೇ?

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ವರ್ಷಕ್ಕೆ ಒಂದು ಬಾರಿ ಕೊಡುತ್ತಿಲ್ಲ. ನೀವು ಕಂದಾಯ ಮಂತ್ರಿಗಳನ್ನು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ವರ್ಷಕ್ಕೆ ಒಂದು ಬಾರಿ ಫ್ರೀಯಾಗಿ ಕೊಡುತ್ತಿದ್ದೀರಿ. ಆ ರೆಕಾರ್ಡ್‌ನ್ನು ಬೇರೆ ಎಲ್ಲೂ ಕೊಡುವುದಕ್ಕೆ ಬರುವುದಿಲ್ಲ. ಮನೆಯಲ್ಲಿ ಫೈಲ್‌ನಲ್ಲಿಟ್ಟು ಕೊಳ್ಳಬೇಕಷ್ಟೆ.

ಶ್ರೀ ಅರಗ ಜ್ಞಾನೇಂದ್ರ : ನಮ್ಮ ವಿಸ್ತಾರ ಏನಾದರೂ ಹೆಚ್ಚು ಕಡಿಮೆ ಆಗಿದೆಯೇ ಎಂದು ನೋಡುವುದಕ್ಕೋಸ್ಕರ ಅದನ್ನು ಉಪಯೋಗಿಸಿಕೊಳ್ಳಬಹುದೇ ವಿನಃ ಯಾವುದೇ ಬ್ಯಾಂಕ್‌ಗಳಿಗಾಗಲಿ ಅಥವಾ ಸಂಸ್ಥೆಗಳಿಗಾಗಲಿ ಆ ರೆಕಾರ್ಡ್‌ನ್ನು ಬಳಸುವುದಕ್ಕೆ ಬರುವುದಿಲ್ಲ. ಅದಕ್ಕೆ 15 ರೂಪಾಯಿ ಕೊಟ್ಟು ಪಡೆದ ಕಾಫಿಯೇ ಆಗಬೇಕು.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಉಪಾಧ್ಯಕ್ಷರೆ, ಬಹುತೇಕ ಅದಕ್ಕೆ ಹಾಕಿದ ಹಣ ಏನು ಖರ್ಚಾಗಿತ್ತೋ ನಮ್ಮ ಮಾಹಿತಿ ಪ್ರಕಾರ ಅವೆಲ್ಲಾ ವಾಪಸ್ ಬಂದಿದೆ ಎಂದು ಹೇಳುತ್ತಾರೆ. ಬಹುತೇಕ ಅವರು ಹೇಳಿದ ಹಾಗೆ ಕಡಿಮೆ ಮಾಡಿದರೆ ಒಳ್ಳೆಯದು. ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಅದನ್ನೇ ಹೇಳಿದೆ. ಆದಾಯ ನಮಗೆ ಸಾಕಷ್ಟು ಬರುತ್ತಾ ಇದೆ. ಶ್ರೀ ಜಗದೀಶ್ ಶೆಟ್ಟರ್‌ರವರು ಶಿರಸಿಯ ತಹಸೀಲ್ದಾರ್ ಕಛೇರಿಗೆ ಬಂದಾಗ ನಾವೆಲ್ಲರೂ ಜೊತೆಯಲ್ಲಿ ಹೋಗಿ ನೋಡಿದೆವು. ಅಲ್ಲಿ ಜನರ ಉದ್ದ ಕ್ಯೂ ಇತ್ತು, ಜನರು ಬೇರೆ ಬೇರೆ ಕಷ್ಟಗಳನ್ನು ನಮಗೆ ಹೇಳಿದರು. ಆದರೆ ಪ್ರಾರಂಭಿಕ ತೊಂದರೆಗಳು ನಮಗೂ ಅರ್ಥವಾಗುತ್ತದೆ. ಎಕ್ಸ್‌ಟ್ರಾ ಒಂದು ಕಂಪ್ಯೂಟರ್ ಹಾಕುವುದಕ್ಕೆ ಹೇಳಿದ್ದರು. ಎಕ್ಸ್‌ಟ್ರಾ ಒಂದು ಕಂಪ್ಯೂಟರ್ ಬ್ಯಾಟರಿ ಜನರೇಟರ್ ಇದ್ದೊ ವ್ಯವಸ್ಥೆ ಬಂದಿದೆ. ಸಾಫ್ಟ್‌ವೇರ್‌ನಲ್ಲಿ

ಕೆಲವೊಂದು ಪ್ರಾಬ್ಲಮ್ಸ್ ಇದೆ. ಸಾಫ್ಟ್‌ವೇರ್ ಪ್ರಾಬ್ಲಮ್ ಬಗ್ಗೆ ನಾವು ಬೇರೆ ಬೇರೆ ಸಂದರ್ಭದಲ್ಲಿ ಸರ್ಕಾರಕ್ಕೆ ತಿಳಿಸುತ್ತೇವೆ. ಅದನ್ನು ಸರಿಪಡಿಸಿಕೊಳ್ಳಬೇಕಾದ ಅಗತ್ಯತೆ ಇದೆ. ಆದರೆ ಇವೆಲ್ಲದಕ್ಕಿಂತ ಪ್ರಾರಂಭಿಕ ತೊಂದರೆಗಳನ್ನು ಧಾಟಿ ನಾವು ಮುಂದೆ ಹೋಗಬಹುದು. ಆದರೆ ಹಣದ ದೃಷ್ಟಿಯಿಂದ ಬಹಳ ತೊಂದರೆಯಾಗುತ್ತಿದೆ. ಆದುದರಿಂದ 5 ರೂಪಾಯಿಗಳಿಗಿಂತ ಜಾಸ್ತಿ ಯಾವ ಕಾರಣಕ್ಕೂ ಮಾಡಬಾರದು. ನಮ್ಮ ಹಣ ನಮಗೆ ಬರುತ್ತಿದೆಯಾದ ಕಾರಣ ಕಡಿಮೆ ಮಾಡುವ ವಿಚಾರವನ್ನು ಮುಖ್ಯವಾಗಿ ಸರ್ಕಾರ ಪರಿಗಣಿಸಬೇಕು ಎಂದು ಹೇಳಬಯಸುತ್ತೇನೆ. ಇನ್ನೊಂದು ಮುಖ್ಯವಾಗಿ ಭತ್ತದ ಬೀಜದ ಬಗ್ಗೆ ಹೇಳಬೇಕೆಂದರೆ ನಿನ್ನೆಯ ದಿನ ಅರಗ ಜ್ಞಾನೇಂದ್ರರವರು ಮಾತನಾಡುತ್ತಾ ಇದರ ಬಗ್ಗೆ ಹೇಳಿದ್ದಾರೆ. ಈಗ ನಮಗೆ ಬೀಜದ ಭತ್ತವನ್ನು ಒಂದು ಕ್ವಿಂಟಾಲ್‌ಗೆ 1200 ರೂಪಾಯಿಗಳಿಗೆ ಕೊಡುತ್ತಿದ್ದಾರೆ. ಈಗ ಹೊರಗಡೆ 500 ರೂಪಾಯಿಗಳಿಗೆ ಒಂದು ಕ್ವಿಂಟಾಲ್‌ಗೆ ಸಿಗುತ್ತದೆ, ಬೀಜದ ಭತ್ತ ಎಂದರೆ 600 ರೂಪಾಯಿ ಒಂದು ಕ್ವಿಂಟಾಲ್‌ಗೆ ಕೊಡಬಹುದು. ಯಾವ ರೈತ ಇವೊತ್ತು 1200 ರೂಪಾಯಿಗಳನ್ನು ಕೊಟ್ಟು ಬೀಜದ ಭತ್ತವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆ? ಕಾಗೋಡು ತಿಮ್ಮಪ್ಪನವರೇ, ಇದರ ಬಗ್ಗೆ ನೀವೇ ಹೇಳಿ. 1200 ರೂಪಾಯಿ ಕೊಟ್ಟು ಭತ್ತದ ಬೀಜವನ್ನು ಒಂದು ಕ್ವಿಂಟಾಲ್ ರೈತ ತರುವುದಕ್ಕಾಗುತ್ತದೆಯೇ? ಇವರು ಸಬ್ಸಿಡಿ ಕೊಟ್ಟು 1200 ರೂಪಾಯಿ ಆಗುತ್ತದಂತೆ. ಆದರ ಒರಿಜಿನಲ್ ಬೆಲೆ ಎಷ್ಟಾಗುತ್ತದೋ ಅದು ನನಗೆ ಗೊತ್ತಿಲ್ಲ. ನೀವು ಗೊಬ್ಬರವನ್ನು, ಬೀಜವನ್ನು ನಿಜವಾಗಿ ಫ್ರೀಯಾಗಿ ರೈತರಿಗೆ ಕೊಡಬೇಕು. ಇಂಥ ಕಷ್ಟದ ಕಾಲದಲ್ಲಿ ಆ ಕೆಲಸ ನೀವು ಮಾಡಬೇಕು. ನಾನು ಹೇಳಲೆ, ನಿಮ್ಮ ಮಂತ್ರಿಮಂಡಲದಲ್ಲಿ ಹೊಸದಾಗಿ ಮಂತ್ರಿಗಳಾಗಿದ್ದಾರಲ್ಲಾ ಅವರ ಸನ್ಮಾನ್ಯ, ಅವರ ಹಾರತುರಾಯಿಗಳು, ಅವುಗಳಿಗೆಲ್ಲಾ ಕಡಿವಾಣ ಹಾಕಿ, ಅದೆಲ್ಲದರ ಹಣದಿಂದ ಭತ್ತದ ಬೀಜವನ್ನು ರೈತರಿಗೆ ಫ್ರೀಯಾಗಿ ನೀವು ಕೊಡಬಹುದು. ಬರದ ಪರಿಸ್ಥಿತಿ ಇರುವುದರಿಂದ ಯಾರೂ ಸನ್ಮಾನ್ಯ ಮಾಡಿಕೊಳ್ಳುವುದು ಬೇಡ, ದಯವಿಟ್ಟು ಆ ಸನ್ಮಾನಕ್ಕೆ ನೀವೆಲ್ಲಾ ಎಷ್ಟೆಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ.

ಶ್ರೀ ಡಿ.ಕೆ. ಶಿವಕುಮಾರ್ : ನಿಮ್ಮ ಸ್ನೇಹಿತರುಗಳು ಸನ್ಮಾನ ಮಾಡಿಕೊಳ್ಳಲಿಲ್ಲವೆ? ನಿಮ್ಮ ಸ್ನೇಹಿತರುಗಳು ಬೀದರ್, ಬಿಜಾಪುರಗಳಲ್ಲಿ ಸನ್ಮಾನ್ಯ ಮಾಡಿಕೊಳ್ಳುತ್ತಿದ್ದಾರಲ್ಲಾ, ಅದನ್ನು ನೀವು ನಿಲ್ಲಿಸಿಬಿಡಿ. ಡೆಮಾಕ್ರಟಿಕ್ ಪೆಟಪ್‌ನಲ್ಲಿ ನೀವುಗಳೆಲ್ಲಾ ಹೀಗೆ ಮಾತನಾಡಿದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ಕಾರದಲ್ಲಿ ನೀವಾಗಲಿ, ವಿರೋಧಿ ಪಕ್ಷದಲ್ಲಿರುವ ನಾವಾಗಲಿ, ರಾಜ್ಯದ ಜನತೆಯಾಗಲಿ ಈ ರೀತಿಯ ಅದ್ದೂರಿ ಕಾರ್ಯಕ್ರಮದ ಬಗ್ಗೆ ಯೋಚನೆ ಮಾಡಬೇಕಾಗಿದೆ. ಸರ್ಕಾರದಿಂದ ಅದ್ದೂರಿ ಕಾರ್ಯಕ್ರಮಗಳ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈ ರೀತಿ ಕಾರ್ಯಕ್ರಮಗಳು ಆಗಬೇಕೋ ಬೇಡವೋ ಎನ್ನುವುದರ ಬಗ್ಗೆ ಸರ್ಕಾರ ಪುನರ್ ಪರಿಶೀಲನೆ ಮಾಡಬೇಕಾಗಿದೆ. ನಾನು ಹೇಳಬೇಕೆಂದಿರುವುದು ಇಷ್ಟೆ, ಉಚಿತವಾಗಿ ಬೀಜ, ಗೊಬ್ಬರಗಳನ್ನು ರೈತರಿಗೆ ಕೊಡಿ, ಮೇವುಗಳನ್ನು ಕೊಡುವುದಕ್ಕೆ ಯೋಚನೆ ಮಾಡಿ. ಉಚಿತವಾಗಿ ನೀವು ಅವುಗಳನ್ನು ಕೊಡದಿದ್ದರೆ ರೈತರು ಇಂದಿನ ಪರಿಸ್ಥಿತಿಯಲ್ಲಿ ಹಣ ಕೊಟ್ಟು ಕೊಂಡುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಅವರು ಬಹಳಷ್ಟು ಸಂಕಷ್ಟದಲ್ಲಿದ್ದಾರೆ. ಆದುದರಿಂದ ಉಚಿತವಾಗಿ ಅವುಗಳನ್ನು ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನೊಂದು ಕನ್‌ಫ್ಯೂಶನ್ ರೈತರಿಗೆಲ್ಲಿದೆ, ಇವೊತ್ತು ಕೇಂದ್ರ ಸರ್ಕಾರ ಗ್ರಾಮವನ್ನು ಒಂದು ಯುನಿಟ್ ಆಗಿ ಬೆಳೆ ವಿಮೆಯನ್ನು ಕೊಡುವುದಕ್ಕೆ

ಇವೊತ್ತು ಮಂಜೂರಿ ಕೊಟ್ಟಿದೆ. ಅದರ ಬಗ್ಗೆ ಪತ್ರಿಕೆಗಳಲ್ಲಿಯೂ ನಾವು ಓದುತ್ತಿದ್ದೇವೆ. ಆದರ ರೈತರಿಗೆ ಆ ಬಗ್ಗೆ ಇನ್ನೂ ಸ್ಪಷ್ಟತೆ ಬರದೇ ಗೊಂದಲದಲ್ಲಿದ್ದಾರೆ. ಮೊದಲಿನಂತೆ ಹಿಂದೆ ಒಂದು ತಾಲ್ಲೂಕ್ ಯುನಿಟ್, ಹೋಬಳಿ ಒಂದು ಯುನಿಟ್ ಎನ್ನುವಂಥ ರೀತಿಯಲ್ಲಿಯೇ ಇದ್ದಾರೆ. ಆದರೆ ತಾಲ್ಲೂಕು, ಹೋಬಳಿ ಒಂದು ಯುನಿಟ್ ಅಲ್ಲದೇ ಒಂದು ಹಳ್ಳಿಯೂ ಯುನಿಟ್ ಆಗಿ ಪರಿವರ್ತನೆಯಾಗಿದೆ ಎನ್ನುವ ಬಗ್ಗೆ ಸರ್ಕಾರ ಸ್ಥಳೀಯ ಮಟ್ಟದಲ್ಲಿರುವ ಅಧಿಕಾರಿಗಳ ಮೂಲಕ ನಮ್ಮ ಸಾಮಾನ್ಯ ರೈತರಿಗೆ ಆದರ ಬಗ್ಗೆ ಸ್ಪಷ್ಟತೆ ಬರುವಂತೆ ಎಲ್ಲಾ ವಿಷಯಗಳನ್ನು ತಿಳಿಸಬೇಕಾದಂಥ ಅಗತ್ಯತೆ ಇದೆ. ಆ ಹಿನ್ನೆಲೆಯಲ್ಲಿ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವಂತ ಮಾತನ್ನು ಹೇಳುತ್ತಿದ್ದೇನೆ. ಇನ್ನು ಸರ್ಕಾರ ಬಹಳ ಜವಾಬ್ದಾರಿಯುತವಾಗಿ ಚಿಂತನೆ ಮಾಡಬೇಕಾಗಿರುವುದು ಕೆ.ಪಿ.ಟಿ.ಸಿ.ಎಲ್. ಬಗ್ಗೆ.

ಶ್ರೀ ಕಾಗೋಡು ತಿಮ್ಮಪ್ಪ : ತಾವೇನು ಬೀಜದ ಭತ್ತ ಒಂದು ಕ್ವಿಂಟಾಲ್‌ಗೆ 1200 ರೂಪಾಯಿ ಎಂದು ಹೇಳಿದಿರಲ್ಲಾ, ಅದರಲ್ಲಿ ಶೇಕಡ 50 ಪರ್ಸೆಂಟ್ ಸಬ್ಸಿಡಿ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಮ್ಮ ರೈತರು 1200 ರೂಪಾಯಿಗಳನ್ನು ಕೊಟ್ಟೆ ಒಂದು ಕ್ವಿಂಟಾಲ್ ಭತ್ತದ ಬೀಜವನ್ನು ತೆಗೆದುಕೊಳ್ಳಬೇಕಾಗಿದೆ. 600 ರೂಪಾಯಿಗಳಿಗೆ ಕೊಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮ ಶಿವಮೊಗ್ಗ ಜಿಲ್ಲೆಯಲ್ಲೆ ಕೆಲವು ತಾಲ್ಲೂಕಿನ ಬರಗಾಲ ಪೀಡಿತ ಪ್ರದೇಶಕ್ಕೆ ಸಬ್ಸಿಡಿ ಬೀಜ ಕೊಡುತ್ತೇವೆ. ಅಲ್ಲೆ 50 ಭಾಗದಷ್ಟು ಸಬ್ಸಿಡಿ ಕೊಟ್ಟಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಕೂಡ ನಾನು ಹೇಳಿದೆ. ಸಬ್ಸಿಡಿ ಒಂದು ಪೈಸೆ ಕೂಡ ರೈತರಿಗೆ ಬಂದು ಮುಟ್ಟುವುದಿಲ್ಲ. ಭತ್ತ ಬೀಜದ ರೇಟನ್ನು ಪ್ರೈವೇಟ್ ಕಂಪನಿಗಳು ಈಗ ಜಾಸ್ತಿ ಮಾಡಿದ್ದಾರೆ. ನಾನು ಹೇಳಿದೆನಲ್ಲಾ, ಕುಲಾಂತರಿ ಬೀಜಗಳು ಒಂದು ಸಾರಿ ತಂದು ಬೀಜದ ಭತ್ತ ಹಾಕಿದರೆ ಮುಂದಿನ ವರ್ಷ ಅದರಲ್ಲೆ ಬೀಜ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ಆ ಕಂಪನಿಗಳ ಹತ್ತಿರ ಹೋಗಬೇಕು. ಮತ್ತೆ ಆ ಕಂಪನಿಗಳ ಹತ್ತಿರ ಹೋಗಬೇಕು. ಬೀಜದ ಭತ್ತ ಕ್ವಿಂಟಾಲ್‌ಗೆ 5000 ರೂಪಾಯಿ, ಅದಕ್ಕೆ 50 ಪರ್ಸೆಂಟ್ ಸಬ್ಸಿಡಿ ಕೊಟ್ಟರೂ ಸಹ. ಆ ಬೀಜದ ಭತ್ತದ ಮೂಲಧಾರಣೆಯನ್ನು ಸರಿ ಮಾಡಬೇಕಲ್ಲ ನಿಮ್ಮ ಇಲಾಖೆಯವರು. ನಿಮ್ಮ ಹತ್ತಿರ ಸಬ್ಸಿಡಿ ತೆಗೆದುಕೊಳ್ಳುವುದಕ್ಕೆ ಆ ಕಂಪನಿಗಳು ಹುಟ್ಟಿಕೊಂಡರೆ ಹೇಗೆ ಹೇಳಿ? ರೈತರಿಗೆ ಇದರಿಂದ ಉಪಯೋಗವಾಗಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಬಗ್ಗೆ ಸರ್ಕಾರದವರು ಯೋಜನೆ ಮಾಡಬೇಕೆಂದು ಹೇಳುತ್ತಾ, ಇನ್ನು ವಿದ್ಯುತ್ ಬಗ್ಗೆ ಹೇಳುವುದಾದರೆ ಇವತ್ತು ಕೆ.ಪಿ.ಟಿ.ಸಿ.ಎಲ್ ವಿದ್ಯುತ್ ಅನ್ನು ಹಂಚಿಕೊಂಡರೆ ರೈತರು ಬಹಳ ಗಂಭೀರವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಇವತ್ತು ರಾಜ್ಯದಲ್ಲಿ ವಿದ್ಯುತ್ ಅಭಾವವಿದೆ ಎಂದು ನಮಗೆಲ್ಲರಿಗೂ ಗೊತ್ತಿದೆ. ಆದರೆ ಹೊರರಾಜ್ಯಗಳಿಂದ ಇಂತಹ ವಿಶೇಷವಾದ ಸಂದರ್ಭದಲ್ಲಿ ನಾವು ವಿದ್ಯುತ್‌ನ್ನು ತೆಗೆದುಕೊಂಡರೆ ನಮ್ಮ ರೈತರಿಗೆ ಸಮರ್ಪಕವಾದ ಹೆಚ್ಚು ವಿದ್ಯುತ್‌ನ್ನು ಪೂರೈಸುವುದಕ್ಕೆ ಸರ್ಕಾರ ಒಂದು ದೃಢವಾದಂತಹ

ನಿರ್ಧಾರ ಮಾಡಬೇಕು. ಸರ್ಕಾರದ ಆರ್ಥಿಕ ಪರಿಸ್ಥಿತಿ ನಮಗೆ ಗೊತ್ತಿದೆ, ಅವರು ಎಷ್ಟು ಕಷ್ಟದಲ್ಲಿದ್ದಾರೆ ಎಂದು ತಿಳಿದಿದೆ. ಹತ್ತು ಸಾವಿರ ರೂಪಾಯಿಯ ಚೆಕ್ ನಮ್ಮ ಟ್ರೆಜರಿಯಲ್ಲಿ ಪಾಸ್ ಆಗದೆ ಇರುವಂತಹ ಸಂದರ್ಭ ಇದೆ. ಆದರೆ ಇಂತಹ ಸಂದರ್ಭದಲ್ಲಿ ಎಲ್ಲಿ ಹಣದ ಅಪವ್ಯಯವಾಗುತ್ತಿದೆ ಅದನ್ನು ತಡೆಗಟ್ಟಿ ಹಣವನ್ನು ಸರಿಯಾದಂತಹ ರೀತಿಯಲ್ಲಿ ವ್ಯಯ ಮಾಡುವುದಕ್ಕೆ ನಿಲುವು ತೆಗೆದುಕೊಂಡು ಹೊರರಾಜ್ಯಗಳಿಂದ ಆದರೂ ವಿದ್ಯುತ್ ಅನ್ನು ತೆಗೆದುಕೊಂಡು ನಮ್ಮ ರೈತರಿಗೆ ಕೊಡುವಂತಹ ತಕ್ಷಣದ ಕ್ರಮವನ್ನು ಸರ್ಕಾರ ಮಾಡಬೇಕಾಗಿದೆ ಎಂದು ಹೇಳುತ್ತಾ, ಇವತ್ತು ಸಾಲವನ್ನು ಪರಿವರ್ತಿಸಿ ಕೊಡಬೇಕಾದಂತಹ ವಿಷಯದಲ್ಲಿ ಚರ್ಚೆಯಾಗಿದೆ. ಆ ಎಲ್ಲಾ ವಿಷಯಗಳ ಬಗ್ಗೆ ಸರ್ಕಾರ ತಕ್ಷಣ ಶಾಶ್ವತವಾಗಿ ಕೆಲವು ಕ್ರಮವನ್ನು ತೆಗೆದುಕೊಳ್ಳಬೇಕು. ಬರಗಾಲದ ಪರಿಸ್ಥಿತಿ ಬಂದಿರುವುದು ಏಕೆ? ಮಳೆ ಕಡಿಮೆ ಏಕೆ ಆಗುತ್ತಿದೆ ಎನ್ನುವುದನ್ನು ನಾವು ಚರ್ಚೆ ಮಾಡಿದಾಗ ಪರಿಸರದಲ್ಲಿ ಅಸಮತೋಲನ ಕಾಣುತ್ತಿದೆ. ಪರಿಸರದಲ್ಲಿ ಅಸಮತೋಲನ ಏತಕ್ಕಾಗಿ ನಿರ್ಮಾಣವಾಗಿದೆ? ನಮ್ಮ ಒಂದು ಅತೀ ಭೋಗದಿಂದ ನಾವು ಅಗತ್ಯಕ್ಕಿಂತಲೂ ಹೆಚ್ಚು ಬಳಸುತ್ತಿರುವುದರಿಂದ ಹಾಗೂ ಪ್ರಕೃತಿಯನ್ನು ಶೋಷಣೆ ಮಾಡುತ್ತಿರುವುದರಿಂದಲೂ ಅದರ ಜೊತೆಗೆ ದೌರ್ಜನ್ಯವನ್ನು ನಡೆಸುತ್ತಿರುವ ಕಾರಣದಿಂದಲೂ ಈ ರೀತಿಯಾಗಿದೆ. ನಮ್ಮ ಅಗತ್ಯತೆಗಳು ಎಷ್ಟು ಇರಬೇಕೆನ್ನುವುದನ್ನು ಯಾರು ಅಳೆಯಬೇಕೆನ್ನುವ ಪ್ರಶ್ನೆ ಇದೆ. ಆದರೆ ಈ ರೀತಿ ಅಸಮತೋಲನ ಆಗದ ರೀತಿಯಲ್ಲ ಕಟ್ಟೆಚ್ಚರಿಕೆಯನ್ನು ತೆಗೆದುಕೊಂಡು ಪರಿಸರದ ಸಮತೋಲನವನ್ನು ಕಾಪಾಡಿಕೊಳ್ಳುವುದಕ್ಕೆ ಯಾವ ರೀತಿಯ ಶಾಶ್ವತವಾದ ಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮ ಬುದ್ಧಿ ಬಂದಾಗಿನಿಂದ ಮಳೆಗಾಲ ಜೂನ್ 7ನೇ ತಾರೀಖು ಖಾಯಂ ಆಗಿ ಬರುತ್ತಿತ್ತು. ಈಗ ಏನಾಗಿದೆ ಎಂದರೆ ಜುಲೈ ಬಂದರೂ ಕೂಡ ಮಳೆ ಬರುತ್ತಾ ಇಲ್ಲ. ಮಳೆ ಸಕಾಲಕ್ಕೆ ಆಗಿ ನಮಗೆ ಮಳೆಗಾಲ ಮಾಮೂಲಾಗಿ ಬರಬೇಕಾದರೆ ಯಾವ ರೀತಿಯಾಗಿ ಸಮತೋಲನ ಕಾಪಾಡಿದರೆ ಜೂನ್ 7ನೇ ತಾರೀಖಿನ ದಿವಸ ಮಾನ್‌ಸೂನ್ ಸೆಟ್ ಆಗುತ್ತದೆ, ದಯವಿಟ್ಟು ಹೇಳಿ ನನಗೂ ಅನುಕೂಲವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ಕೇವಲ ರಾಜಕಾರಣಿಗಳು ಅಷ್ಟೇ ಅಲ್ಲ ಇದನ್ನು ಸಮಾಜವಾಗಿ ಕುಳಿತು ಚರ್ಚೆ ಮಾಡಿ ಜವಾಬ್ದಾರಿಯುತವಾಗಿ ಚಿಂತನೆ ಮಾಡಬೇಕು. ಏಕೆಂದರೆ ಪರಿಸರದ ರಕ್ಷಣ ಎನ್ನುವುದು ಇವತ್ತು ಯಾವುದೋ ಒಂದು ನಿರ್ಧಾರದಿಂದ ಆಗುವಂತಾದ್ದು ಅಲ್ಲ. ಇವತ್ತು ವೈಯುಕ್ತಿಕವಾಗಿ ನಾವು ನಾವು ನಿರ್ಧಾರ ಮಾಡಿಕೊಳ್ಳಬೇಕು. First person similar approach ಎಂದು ಹೇಳುತ್ತಾರೆಲ್ಲಾ. ನಾವು ನಾವು ಯೋಚನೆ ಮಾಡಿಕೊಳ್ಳಬೇಕು. ನಮ್ಮ ನಮ್ಮ ರೀತಿ ನೀತಿಗಳು ಜೀವನ ಪದ್ಧತಿಗಳು ಹೇಗಿದೆ ಎಲ್ಲವೂ ಒಟ್ಟಾಗಿರತಕ್ಕಂಥ ಪರಿಣಾಮ ಇವತ್ತು ಪರಿಸರದ ಮೇಲೆ ಆಗುತ್ತದೆ. ಹಾಗಾಗಿ ಬಹಳ ವಿಶಾಲವಾದಂತಹ ವಿಷಯವಿದೆ ನಾವೆಲ್ಲಾ ಮುಂದಿನ ದಿನಗಳಲ್ಲಿ ವಿಶಾಲವಾಗಿ ಯೋಚನೆ ಮಾಡುವಂತಹ ಪ್ರಯತ್ನ ಮಾಡೋಣ. ಆದರೆ ಈ ಪರಿಸರದ ಸಮತೋಲನ ಕಾಯ್ದುಕೊಳ್ಳುವ ದೃಷ್ಟಿಯಿಂದ ಶಾಶ್ವತವಾದಂಥ ಕೆಲವು ಯೋಚನೆಯನ್ನು ಮಾಡಬೇಕು. ಅದಕ್ಕೆ ಗಿಡಮರಗಳನ್ನು ಬೆಳೆಸುವುದಿದ್ದು ಪರಿಸರ ಕಡೆದ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕು. ನೀರು ಇಂಗಿಸಬೇಕು

ಎನ್ನುವ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಯಿತು. ಪ್ಲಾಸ್ಟಿಕ್ ಇಟ್ಟರೆ ನೀರು ಎಲ್ಲಿ ಇಂಗುತ್ತದೆ? ಇವತ್ತು ಸಾರಾಯಿ ಪ್ಯಾಕೇಟ್‌ನಿಂದ ಹಿಡಿದು ಎಲ್ಲವೂ ಪ್ಲಾಸ್ಟಿಕ್ ಮಯವಾಗಿರುವಾಗ, ನಾವು ನೀರು ಒಳಗೆ ಇಂಗಬೇಕು ಎಂದರೆ ನೀರು ಇಂಗುವಂತಹ ಜಾಗದಲ್ಲಿ ಪ್ಲಾಸ್ಟಿಕ್ ಹೋಗಿ ಕುಳಿತುಕೊಳ್ಳುತ್ತದೆ. ಇದರ ಬಗ್ಗೆ ಬಹಳ ವಿಸ್ತಾರವಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರ ಇದನ್ನು ಯೋಚನೆ ಮಾಡಬೇಕು. ಮುಂದಿನ 5, 10 ಹಾಗೂ 20 ವರ್ಷಗಳಲ್ಲಿ ಸರ್ಕಾರದಲ್ಲಿ ಯಾರು ಇರುತ್ತಾರೆ ಎನ್ನುವುದು ಮುಖ್ಯವಾಗಿಟ್ಟುಕೊಳ್ಳದೆ ಸಮಾಜವನ್ನು ಹೇಗೆ ನಡೆಸಬೇಕು ಎನ್ನುವುದರ ಬಗ್ಗೆ ಚಿಂತನೆ ಹಾಗೂ ಕಾಳಜಿ ಇರಬೇಕು. ಇದರ ಜೊತೆಗೆ ಆವರ್ತ ನಿಧಿಯನ್ನು ಕೂಡ 100 ರಿಂದ 400 ಕೋಟಿ ರೂಪಾಯಿಗೆ ಆಗಬೇಕು, ಆ ನಿಧಿಯನ್ನು ಬಲಪಡಿಸುವುದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇದಲ್ಲದೆ ರೈತನಿಗೆ ಕ್ರಾಪ್ ಪ್ಯಾಟ್ರನ್ ಬಗ್ಗೆ ವಿಶೇಷವಾದಂತಹ ಒಂದು ಅರಿವನ್ನು ಮೂಡಿಸಬೇಕಾದಂತಹ ಸಾಮಾಹಿಕ ಜವಾಬ್ದಾರಿ ಇದೆ. ಇಷ್ಟು ಇಂಚು ಮಳೆ ಬಿದ್ದರೆ ಇಂತಹ ಬೆಳೆಗಳನ್ನು ನಾನು ಬೆಳೆಸಬಹುದು ಎಂದು ರೈತರಿಗೆ ತಿಳುವಳಿಕೆ ಇರಬೇಕು. ಇಲ್ಲದೆ ಇದ್ದರೆ ನಮ್ಮ ಅಪ್ಪ ಮಾಡಿದ್ದ, ನಮ್ಮ ಮಾಡಿದ್ದ ಎಂದು ಅದನ್ನೇ ಮಾಡುತ್ತೇವೆ. ಇವತ್ತಿನ ಸಮಾಜಕ್ಕೆ ಅಗತ್ಯ ಇರುವಂತಹ ಅನೇಕ ವಿಷಯಗಳ ಬಗ್ಗೆ ನಾವು ರೈತರಲ್ಲಿ ತಿಳುವಳಿಕೆ ಮೂಡಿಸಿದರೆ ಅವರು ಬೆಳೆ ಬೆಳೆಯುವುದಕ್ಕೆ ಸಿದ್ಧರಾಗಿದ್ದಾರೆ. ಹೀಗಾಗಿ ನಮಗೆ ಇರುವಂತಹ ರಿಸೋರ್ಸ್‌ಸ್ ಹಿನ್ನೆಲೆಯಲ್ಲಿ ನಾವು ಯಾವ ರೀತಿಯಾದಂತಹ ಆರ್ಥಿಕ ಮುನ್ನಡೆಯನ್ನು ಸಾಧಿಸುವುದಕ್ಕೆ ಸಾಧ್ಯವಿದೆ ಎನ್ನುವಂತಹ ತಿಳುವಳಿಕೆಯನ್ನು ಸಹ ರೈತರಲ್ಲಿ ಆಗಬೇಕು.

ಇನ್ನೊಂದು ಮುಖ್ಯವಾಗಿ ಈ ಸಂದರ್ಭದಲ್ಲಿ ಕೊನೆಯದಾಗಿ ಪ್ರಸ್ತಾಪಿಸಿ, ನಾವು ವೈಜ್ಞಾನಿಕವಾಗಿ ಬಹಳ ಮುಂದುವರೆಯುತ್ತಿದ್ದೇವೆ ಎಂದು ಹೆಮ್ಮೆ ಪಟ್ಟುಕೊಳ್ಳುತ್ತಿದ್ದೇವೆ. ಎಷ್ಟು ವೇಗವಾಗಿ ಆಧುನಿಕ ಹಾಗೂ ವೈಜ್ಞಾನಿಕವಾಗಿ ಮುನ್ನಡೆಯುತ್ತಿದ್ದೇವೆ ಎಂದರೆ ಹಳ್ಳಿಯಲ್ಲಿ ರೈತ ಸಹ ಎಪಿಎಂಸಿಯಲ್ಲಿ ಯಾವ ಬೆಳೆಗೆ ಯಾವ ರೇಟಿದೆ ಎನ್ನುವುದನ್ನು ಕಂಪ್ಯೂಟರ್ ಮೂಲಕ ನೋಡಿಕೊಳ್ಳಬಹುದು. ಎಪಿಎಂಸಿಯಲ್ಲಿ ವೆಬ್‌ಸೈಟ್‌ನಲ್ಲಿ ಅಲ್ಲಿ ಆನ್‌ಲೈನ್ ಕನೆಕ್ಷನ್ ಕೊಟ್ಟು ಜಗತ್ತಿನ ಯಾವ ದೇಶದಲ್ಲಿ ಯಾವ್ಯಾವ ಬೆಳೆ ಯಾವ್ಯಾವ ರೇಟಿಗೆ ಮಾರುತ್ತಿದ್ದಾರೆ ಎನ್ನುವುದನ್ನು ನೋಡಿಕೊಳ್ಳಬಹುದು. ಅಷ್ಟು ಮುಂದುವರೆದಿದೆ. ಆದರೆ ಹವಾಮಾನವನ್ನು ತಿಳಿದುಕೊಳ್ಳುವುದಕ್ಕೆ ಏಕೆ ಆಗುತ್ತಿಲ್ಲ. ಹವಾಮಾನ ಇಲಾಖೆ ಎಂದು ಇದೆ. ಅಲ್ಲಿ ಏನು ಮಾಡುತ್ತಿದ್ದಾರೆ ಎಂದು ಅಧಿಕಾರಿಗಳು ಮಾತ್ರ ಹೋಗಿ ನೋಡುವುದಲ್ಲ, ಮಂತ್ರಿಗಳು ಅದಕ್ಕೆ ಸಂಬಂಧಪಟ್ಟವರು ಕರೆಸಿ ಕೇಳಿ ಮಾಡಿ. ಇವತ್ತು ಏನೋ ಆಶಾದಾಯಕವಾದಂತಹ ಇನ್ನೊಂದು ವಾರದಲ್ಲಿ ಮಳೆ ಬೀಳುಬಹುದೆಂಬ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ರೈತರಿಗೆ ತಿಳಿಸಬೇಕಲ್ಲಾ. ಹವಾಮಾನ ಇಲಾಖೆ ಜವಾಬ್ದಾರಿಯುತವಾಗಿ ಇರಬೇಕು. ಒಂದು ಸಲ ಅತಿವೃಷ್ಟಿಯಾಗುತ್ತದೆ, ಒಂದು ಸಲ ಬರಗಾಲವಾಗುತ್ತದೆ. ಏಕೆ ಹೀಗಾಗುತ್ತಿದೆ. ಹವಾಮಾನ ಇಲಾಖೆಯಲ್ಲಿ ಇರುವಂತಹವರು ಓದಿ ತಜ್ಞರಾಗಿ ಅದರಲ್ಲೇ ಡಾಕ್ಟರೇಟ್ ಮಾಡಿ ಜೀವನದ ಸರ್ವಸ್ವವನ್ನು ಅದರಲ್ಲೇ ಕಂಡು ಕೊಂಡಿರುವವರು ಸಮರ್ಥ ವಿಜ್ಞಾನಿಗಳಿದ್ದಾರೆ. ಆದರೆ ಆ ವಿಜ್ಞಾನಿಗಳ ಸಮರ್ಥತೆಯನ್ನು ಸರ್ಕಾರವಾಗಿ ನಾವು ಬಳಸಿಕೊಳ್ಳುವುದರಲ್ಲಿ ವಿಫಲರಾಗುತ್ತಿದ್ದೇವೆ ಎನ್ನುವ ಪ್ರಶ್ನೆ ಇದೆ. ಹಾಗಾಗಿ

ಈ ಹವಾಮಾನ ಇಲಾಖೆ ಪಾತ್ರ ಬಹಳ ಪ್ರಮುಖವಾದುದಾಗಿದೆ. ಅದು ಸಮರ್ಥವಾಗಿ ಜವಾಬ್ದಾರಿಯನ್ನು ನಿರ್ವಹಿಸುವಂತಹದ್ದನ್ನು ಮಾಡಬೇಕಾದದ್ದು ಸರ್ಕಾರದ ಒಂದು ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಯೋಚಿಸಬೇಕೆಂದು ಹೇಳುತ್ತಾ, ಕೇಂದ್ರ ಸರ್ಕಾರದ ಜೊತೆ ನಾವೆಲ್ಲರ ಕಳೆದ ಬಾರಿಯಂತೆ ಅಲ್ಲ, ಈ ಬಾರಿ ಇನ್ನಷ್ಟು ಹೆಚ್ಚು ಜವಾಬ್ದಾರಿಯಿಂದ ಕೇಂದ್ರ ಸರ್ಕಾರದಿಂದ ಯಾವ್ಯಾವ ರೀತಿಯ ಅನುಕೂಲಗಳನ್ನು ತೆಗೆದುಕೊಳ್ಳಬಹುದು ಆ ಎಲ್ಲಾ ಅನುಕೂಲಗಳನ್ನು ತೆಗೆದುಕೊಳ್ಳುವುದಕ್ಕೆ ಬೇಕಾಗಿರುವಂತಹ ಪ್ರಯತ್ನವನ್ನು ಮಾಡೋಣ. ಒಟ್ಟಾರೆ ಆಗಿ ರೈತರ ಕೊರಳಿಗೆ ಉರಳಾಗಿ ಬಂದಂತಹ ಹಗ್ಗ ಏನಿದೆ ಅದನ್ನು ತಪ್ಪಿಸುವ ಪ್ರಯತ್ನ ಮಾಡೋಣ. ಆ ಹಗ್ಗವನ್ನು ನಮ್ಮ ಯಾವುದೇ ಕೃತಿಯಿಂದ, ಮಾತಿನಿಂದ ಎಳೆಯುವಂಥಾದ್ದು ಆಗದಿರಲಿ. ಎನ್ನುವ ಆಶಯವನ್ನು ವ್ಯಕ್ತಪಡಿಸುತ್ತಾ ಸರ್ಕಾರ ಈ ಎಲ್ಲಾ ವಿಷಯಗಳ ಬಗ್ಗೆ ಗಂಭೀರವಾಗಿ ಚರ್ಚಿಸಿ ತನ್ನ ಉತ್ತರವನ್ನು ನೀಡಬೇಕೆಂದು ಹೇಳುತ್ತಾ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ಪ್ರಥಮವಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಾ, ಇವತ್ತು ಈ ಸದನದಲ್ಲಿ ನಿಲುವಳಿ ಸೂಚನೆ ಮುಖಾಂತರ ಬರದ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನೀಡಿದ್ದೀರಿ. ಅದಕ್ಕೆ ಕೂಡ ತಮಗೆ ವಂದಿಸಿ ನಿನ್ನೆಯಿಂದ ಈ ರಾಜ್ಯದಲ್ಲಿ ಇರತಕ್ಕಂತಹ ಬರದ ಬಗ್ಗೆ ಎಲ್ಲಾ ಮುಖಂಡರುಗಳು, ಹಾಗೂ ಸದಸ್ಯರುಗಳು ಬಹಳ ಅರ್ಥಪೂರ್ಣವಾಗಿ ಸರ್ಕಾರದ ಗಮನವನ್ನು ಸೆಳೆಯುವಂತಹ ಕೆಲಸವನ್ನು ಮಾಡಿದ್ದಾರೆ. ಈಗಾಗಲೇ ಎಲ್ಲರೂ ಸಾಕಷ್ಟು ವಿಚಾರಗಳನ್ನು ಹೇಳಿರುವುದರಿಂದ ನಾನಾದರೂ ಸಹ ನನಗೆ ಕೊಟ್ಟಿರತಕ್ಕಂಥ ಅವಕಾಶವನ್ನು ಮತ್ತೆ ಮತ್ತೆ ವಿಷಯಗಳನ್ನು ರಿಪೀಟ್ ಮಾಡುವಂತಹ ಕೆಲಸಕ್ಕೆ ಹೋಗುವುದಿಲ್ಲ. ಕೆಲವು ವಿಚಾರಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡಿ ಈ ಒಂದು ಸದನದ ಮುಂದಿನ ಕಲಾಪಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆ. ನಾನು ಮೊದಲನೆಯದಾಗಿ ಮಾನ್ಯ ಸರ್ಕಾರ ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀ ಎಸ್.ಎಂ. ಕೃಷ್ಣ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಾರಣ ಬಹಳ ದಿನದ ನಮ್ಮ ಬೇಡಿಕೆ ಏನಿತ್ತು ಎಂದರೆ ಚಾಮರಾಜನಗರ ನೂತನ ಜಿಲ್ಲೆಗೆ ಒಬ್ಬ ಸಚಿವರನ್ನು ಕೊಟ್ಟಿಲ್ಲ, ನಮ್ಮ ಜಿಲ್ಲೆಗೆ ಒಬ್ಬರನ್ನು ಮಂತ್ರಿಯನ್ನಾಗಿ ಮಾಡಬೇಕೆಂದು ಬೇಡಿಕೆಯನ್ನು ಇಟ್ಟಿದ್ದೆವು. ಅದನ್ನು ಮಾನ್ಯ ಮುಖ್ಯಮಂತ್ರಿಗಳು ನೆರವೇರಿಸಿ ಕೊಟ್ಟಿದ್ದಾರೆ. ಹಾಗೂ ಮಾನ್ಯ ರಾಜುಗೌಡರನ್ನು ಮಂತ್ರಿಯನ್ನಾಗಿ ಮಾಡಿ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರನ್ನಾಗಿ ಮಾಡಿರುವುದಕ್ಕೆ ನನ್ನ ಜಿಲ್ಲೆಯ ಎಲ್ಲಾ ಜನತೆಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಉಪಾಧ್ಯಕ್ಷರೆ ಈ ಒಂದು ಸಮಸ್ಯೆಯ ವಿಚಾರದಲ್ಲಿ ಹೇಳುವುದಾದರೆ ನಾವು ವಿಧಾನ ಸೌಧದಲ್ಲಿ ಕಲಾಪಗಳಲ್ಲಿ ಭಾಗವಹಿಸಲು ಗ್ರಾಮಾಂತರ ಬೆಂಗಳೂರಿಗೆ ಬಂದಾಗ ಶಾಸಕರ ಭವನದಲ್ಲಿ ಒಂದು ವಾರ ಇರಬಹುದು, 15 ದಿವಸಗಳು ಇರಬಹುದು, ಒಂದು ತಿಂಗಳು ಇರಬಹುದು, ಅಲ್ಲಿ ಇದ್ದಾಗ ನಮಗೆ ಏನು ಅನಿಸುವುದಿಲ್ಲ. ಇಲ್ಲಿ ನಮಗೆ ನೀರಿನ ಕೊರತೆ ಕಾಣುವುದಿಲ್ಲ ಆಹಾರದ ಕೊರತೆ ಕಾಣುವುದಿಲ್ಲ, ಸಮಸ್ಯೆಗಳು ಕಾಣುವುದಿಲ್ಲ. ನಾವು ಬಹಳ ಸಂತೃಪ್ತರಾಗಿ ಎಲ್ಲರೂ ಇರುತ್ತೇವೆ. ಅದೇ ನಮ್ಮ ಕ್ಷೇತ್ರಕ್ಕೆ ಹೋಗಿ ತಲುಪುತ್ತಿದ್ದಂತೆಯೇ

ಸಮಸ್ಯೆಗಳ ಸುರಿಮಳೆಯೇ ನಮಗೆ ಎದುರಾಗುತ್ತವೆ. ಅದು ಕುಡಿಯುವ ನೀರಿನ ಸಮಸ್ಯೆ ಇರಬಹುದು. ಅಥವಾ ರೈತರ ಸಮಸ್ಯೆ ಇರಬಹುದು ಈ ರೀತಿಯ ನಾನಾ ಸಮಸ್ಯೆಗಳನ್ನು ನಾವು ಕಾಣುತ್ತೇವೆ. ಇವತ್ತು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ಅಧಿಕಾರವನ್ನು ವಹಿಸಿಕೊಂಡು ಮೂರು ವರ್ಷಗಳ ಹತ್ತಿರವಾಗುತ್ತಿದೆ. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ತಮ್ಮ ಅಧಿಕಾರಾವಧಿಯ ಒಂದು ವರ್ಷ ಹಿಂದೆ ಇರುವಂಥಾದ್ದನ್ನು ತೆಗೆದುಕೊಂಡು ಈ ಮುರ್‍ನಾಲ್ಕು ವರ್ಷಗಳಲ್ಲಿ ಏನು ವಿಚಾರಗಳು ಇದೆ, ಅವುಗಳನ್ನು ಚಿಂತನೆ ಮಾಡುವಂತಹ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಬೇಕೆಂದು ಹೇಳುತ್ತೇನೆ. ಅದು ಯಾವುವು ಎಂದರೆ ಇದು ರೈತ ಬೆಳೆಯುವಂತಹ ಬೆಳೆ ತೆಂಗು ಇರಬಹುದು, ರಾಗಿ, ಜೋಳ, ಅರಿಶಿನ, ರೇಷ್ಮೆ ಇರಬಹುದು. ಈ ಎಲ್ಲಾ ಬೆಳೆಗಳಿಗೂ ಕಳೆದ ನಾಲ್ಕು ವರ್ಷಗಳಿಂದ ಬೆಲೆಯ ಪ್ರಮಾಣ ಯಾವ ರೀತಿಯಲ್ಲಿ ಇಳಿಮುಖವಾಗಿ ಇದೆ, ಇದು ಯಾವ ಮಟ್ಟದಲ್ಲಿದೆ, ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಚಿಂತನೆ ಮಾಡುವಂತಹ ಪ್ರಯತ್ನವನ್ನು ಮಾಡಬೇಕು, ಜೊತೆಗೆ ಕಳೆದ ನಾಲ್ಕು ವರ್ಷಗಳಲ್ಲಿ ಈ ರಾಜ್ಯದಲ್ಲಿ ಬಿದ್ದಂತಹ ಮಳೆಯ ಪ್ರಮಾಣ ಎಷ್ಟು ಎನ್ನುವಂಥಾದ್ದನ್ನು ತಾವು ಇಲಾಖೆಯ ವತಿಯಿಂದ ತರಿಸಿಕೊಂಡು ತುಲನೆ ಮಾಡಿದರೆ, ಆಗ ರೈತರ ಕಷ್ಟ ಏನು? ಅವರ ಸಮಸ್ಯೆ ಏನೆಂಬುದು ತಮಗೆ ಗೊತ್ತಾಗುತ್ತದೆಂಬ ಭಾವನೆಯಿಂದ ಈ ಮಾತನ್ನು ತಮಗೆ ಹೇಳಲಿಚ್ಚಿಸುತ್ತೇನೆ. ಕಳೆದ ಮುರ್‍ನಾಲು ವರ್ಷಗಳಿಂದ ರೈತ ಏನು ಬೆಳೆಯುತ್ತಿದ್ದನು, ಆ ಉತ್ಪನ್ನದ ಕಾಲು ಭಾಗ ಮಾತ್ರ ಇವತ್ತು ಬರುತ್ತಿದೆ, ಈ ಬೆಳೆ ರೇಷ್ಮೆಯಾಗಿರಬಹುದು, ತೆಂಗು ಬೆಳೆಗಾರರಾಗಿರಬಹುದು ಜೋಳ, ರಾಗಿ, ಯಾವುದೇ ಇರಲಿ, ಈ ಉತ್ಪನ್ನಗಳು ಕಡಿಮೆಯಾಗಿದೆ. ಈ ರೀತಿ ಗಣನೀಯವಾಗಿ ಬೆಳೆ ಉತ್ಪನ್ನ ಕಡಿಮೆಯಾಗಿ, ರೈತರಿಗೆ ಹಿಂದೆ ಪೂರ್ಣ ಪ್ರಮಾಣದಲ್ಲಿ ಬೆಳೆಯಾಗುತ್ತಾ ಇತ್ತು, ಆ ಬೆಳೆಗೆ ದೊರಕುವಂತಹ ಪ್ರತಿಫಲ ಏನಿತ್ತು, ಅದರ ಬೆಲೆಯ ಪ್ರಮಾಣ ಕೂಡ ಏರಿಕೆಯಾಗಿಲ್ಲ. ಕರ್ನಾಟಕ ರಾಜ್ಯದಲ್ಲಿ ರೈತರಿಗೆ ಎಂತಹ ದುರಂತ ಪರಿಸ್ಥಿತಿಯೆಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಅರ್ಥ ಮಾಡಿಕೊಳ್ಳಬೇಕು. ನನ್ನ ರಾಜಕೀಯ ಅನುಭವದಲ್ಲಿ, ನನಗೆ ಬುದ್ಧಿ ಬಂದಾಗಿನಿಂದಲೂ ನಾನು ನೋಡಿದ ಪ್ರಕಾರ ಸಾಮಾನ್ಯವಾಗಿ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬರುತ್ತದೆ, ಇಲ್ಲದಿದ್ದರೆ ಜನತಾ ದಳ ಸರ್ಕಾರ ಆಡಳಿತಕ್ಕೆ ಬರುತ್ತದೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ನಾನು ನೋಡಿದ ಹಾಗೆ ಯಾವಾಗಲೂ ಸಂಪೂರ್ಣವಾಗಿ ರಾಜ್ಯದಲ್ಲಿ ಮಳೆಯಾಗುತ್ತಿತ್ತು, ಅದೇ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಯಾವಾಗಲೂ ಬರ ಪರಿಸ್ಥಿತಿ ಇರುತ್ತಿತ್ತು, ಇವರು ಕೇಂದ್ರ ಸರ್ಕಾರದಿಂದ, ಇತರ ಮೂಲಗಳಿಂದ ಹಣವನ್ನು ಪಡೆದುಕೊಂಡು ಈ ಕಷ್ಟ ಪರಿಸ್ಥಿತಿಯನ್ನು ಎದುರಿಸುವಂಥಾದ್ದು ಇತ್ತು. ಆದರೆ ರಾಜ್ಯದಲ್ಲಿ ಇವತ್ತಿನ ದಿವಸ ವೈಸ್‌ವರ್ಸ್ ಆಗಿದೆ, ಕಾಂಗ್ರೆಸ್ ಸರ್ಕಾರದಲ್ಲಿ ಬರ ಶುರುವಾಗಿದೆ, ಮಳೆ ಬರುತ್ತಾ ಇದದ್ದು ಈಗ ಬರ ಬಂದಿದೆ. ಒಟ್ಟಿನಲ್ಲಿ ಮುಂದೆ ಜನತಾ ದಳ ಸರ್ಕಾರ ಬರಬಹುದು, ನನಗೆ ಗೊತ್ತಿಲ್ಲ. ಈ ಸರ್ಕಾರ ಬಂದಾಗ ಮಳೆ ಬರಬಹುದೆಂಬ ಭಾವನೆ ಇದೆ. ಆದರೆ ಕಾಕತಾಳಿಯವೆನ್ನುವ ಹಾಗೆ ಆಗಿದೆ. ಇವತ್ತು ಇಷ್ಟು ಸಮಸ್ಯೆ ಇರುವಾಗ, ರೈತರ ಇಷ್ಟು ಸಂಕಷ್ಟದಲ್ಲಿರುವಾಗ, ಬೆಲೆ ಕುಸಿತವಾಗಿರುವಂತಹ ಸಂದರ್ಭದಲ್ಲಿ, ರೈತ ತನ್ನ ಬೆಳೆಯ ಉತ್ಪನ್ನಕ್ಕೆ ಖರ್ಚು ಮಾಡಿದಂತಹ

ಹಣವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಈ ರೀತಿಯಾದಾಗ ಅವನು ಏತಕ್ಕಾಗಿ ವ್ಯವಸಾಯ ಮಾಡಬೇಕು? ಏಕೆ ಬೆಳೆ ಬೆಳೆಯಬೇಕೆಂಬ ಚಿಂತನೆ ಮಾಡಬೇಕು, ರೇಷ್ಮೆಗೆ ಒಂದು ಕೆ.ಜಿ ಗೂಡಿಗೆ 100 ರೂಪಾಯಿಗಳಿಂದ 120 ರೂಪಾಯಿಗಳು ಇತ್ತು, ಆದರೆ ಈಗ ಇದು 40 ರಿಂದ 45 ರೂಪಾಯಿಗಳಿಗೆ ಬಂದಿದೆ. ಇಲ್ಲಿ ಅವನು ಏನು ಖರ್ಚು ಮಾಡುತ್ತಿದ್ದಾನೆ, ಆ ಖರ್ಚು ಕೂಡ ವಾಪಸ್ಸು ಬರುತ್ತಾ ಇಲ್ಲ. ಈ ದುರಂತವನ್ನು ನಾವು ನೋಡುತ್ತಿದ್ದೇವೆ, ಇವತ್ತು ರೈತರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆಂದರೆ ಅದಕ್ಕೆ ಏನು ಮಾಡಬೇಕೆಂದು ನಾನು ಹೇಳುತ್ತಾ ಇದ್ದೇನೆ ಎಂದು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿದೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಇಲ್ಲಿದ್ದಾರೆ. ಶೇ. 80ರಷ್ಟು ರೈತ ಸಮುದಾಯದಿಂದ ಇಂತಹ ಕಷ್ಟದ ಪರಿಸ್ಥಿತಿ ಬಂದಾಗ ತಾವು ರೈತರ ರಕ್ಷಣೆಗೆ ಬರುವುದು ನಿಮ್ಮ ಕರ್ತವ್ಯ ಏಕೆಂದರೆ, ಬಂದಿದ್ದರೆ ನಿಮ್ಮ ಸರ್ಕಾರ ಇಲ್ಲಿ ಬಂದು ಕುಳಿತುಕೊಳ್ಳಬೇಕಾದರೆ ಈ ರೈತರು ನಿಮಗೆ ಜವಾಬ್ದಾರಿಯುತವಾಗಿ ಸಹಾಯ ಮಾಡಿದ್ದಾರೆ. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಅವರ ಸಹಾಯಕ್ಕೆ ಬರದಿದ್ದರೆ ಅವರ ಶಾಪಕ್ಕೆ ನೀವು ಗುರಿಯಾಗುತ್ತೀರೆಂಬ ಮಾತನ್ನು ಹೇಳಲಿಚ್ಛಿಸುತ್ತೇನೆ. ಇದಕ್ಕೆ ಸರ್ಕಾರ ಏನು ಮಾಡಬೇಕೆಂಬುದಕ್ಕೆ ಹಲವಾರು ದಾರಿಗಳು ಇವೆ. ಅವರಿಗಾಗಿ ಹಲವಾರು ಯೋಜನೆಗಳು ಇವೆ, ಆ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುವುದೇನೆಂದರೆ ತಾವು ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗಿದೆಯಲ್ಲಾ, ಈ ಮೂರು ವರ್ಷಗಳಲ್ಲಿ ಏನು ಕೆಲಸಗಳನ್ನು ಮಾಡಿದ್ದೀರೆಂಬುದನ್ನು ಈ ಸದನಕ್ಕೆ ಹೇಳಬೇಕು. ಕರ್ನಾಟಕ ರಾಜ್ಯದಲ್ಲಿ ಈ ರೈತರಿಗೆ ಗುರುತರವಾದ, ಬಹಳ ಜವಾಬ್ದಾರಿಯುತವಾದಂತಹ ಒಂದು ಉಪಕಾರವನ್ನು ಮಾಡಿದ್ದೀರೆಂಬುದನ್ನು ಹೇಳಿದರೆ ನಾನು ಬಹಳ ಸಂತೋಷ ಪಡುತ್ತೇನೆ. ನಾನು ಹೇಳುವಂಥಾದ್ದು ನಾವು ಬೆಂಗಳೂರಿನಲ್ಲಿ ಕುಳಿತುಕೊಂಡರೆ ಅವರ ಕಷ್ಟ ಏನೆಂಬುದು ಗೊತ್ತಾಗುವುದಿಲ್ಲ. ನಾವು ಸದನದ ಕಾರ್ಯಕಲಾಪಗಳಿಗೆ ಬಂದರೆ 8 ದಿವಸಗಳು, 15 ದಿವಸಗಳು ನೆಮ್ಮದಿಯಿಂದ, ಆನಂದದಿಂದ ಇರುತ್ತೇವೆ. ಅದೇ ನಮ್ಮ ಕ್ಷೇತ್ರಕ್ಕೆ ಹಳ್ಳಿಗಳಿಗೆ ಹೋದಾಗ ಅದರ ಕಷ್ಟ ನಮಗೆ ಗೊತ್ತಾಗುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಅಲ್ಲಿ ಜನರ ಕಷ್ಟ ಏನು ಎಂಬುದು ಗೊತ್ತಾಗುತ್ತದೆ. ನಿಮ್ಮನ್ನು ನಾನು ದೂಷಣೆ ಮಾಡಬೇಕೆಂದು ಅಲ್ಲ, ಮತ್ತೊಮ್ಮೆ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ, ಇವರು 5ನೇ ದಿನಾಂಕದ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದು ಏನೆಂದರೆ ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ದುಃಸ್ತರವಾಗಿದೆ ಎಂದು ಹೇಳಿದ್ದಾರೆ. ಅವರು ಈ ರೀತಿಯಾಗಿ ಹೇಳಿರುವುದಕ್ಕೆ ಸಂತೋಷ ಪಡುತ್ತೇನೆ, ಏಕೆಂದರೆ ಮಾನ್ಯ ಮುಖ್ಯಮಂತ್ರಿಯವರು ಫ್ರಾಂಕ್ ಆಗಿ ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಕಷ್ಟದಲ್ಲಿದೆ, ಎಂಬುದನ್ನು ಒಪ್ಪಿಕೊಂಡಿದ್ದಾರೆ, ಅದಕ್ಕೆ ನಾನು ಸಂತೋಷ ಪಡುತ್ತೇನೆ, ಆದರೆ ಮತ್ತೊಂದು ದುಃಖದ ಸಂಗತಿ ಏನೆಂದರೆ ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಈ ಮಟ್ಟಕ್ಕೆ ಬಂತಲ್ಲ, ಎನ್ನತಕ್ಕಂತಹ ಸಂಗತಿ ಕೇಳಿಕೊಂಡಾಗ ನನಗೆ ನೋವಾಗುತ್ತದೆ. ಇವತ್ತು ಏನು ಮಾಡಬೇಕು? ಈ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕೆಂದರೆ ಹಲವಾರು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ತಾವು ಮೀನಾಮೇಷ ಎಣಿಸುತ್ತಾ ಕುಳಿತುಕೊಂಡರೆ ಆಗುವುದಿಲ್ಲ. ಮಾನ್ಯ ಸಿಂಧ್ಯರವರೂ ಸಹ ಹಣಕಾಸಿನ

ಪರಿಸ್ಥಿತಿಯ ಬಗ್ಗೆ ಹೇಳಿದ ಹಾಗೆ ಟ್ರೇಜರಿಯಲ್ಲೂ ಚೆಕ್ ಹಾನರ್ ಆಗುತ್ತಾ ಇಲ್ಲ ಟ್ರೇಜರಿ ಬ್ಯಾನ್ ಆಗಿರುವುದು ವಾಸ್ತವಾಂಶ ಇವೊತ್ತು ಹಣಕಾಸಿನ ಪರಿಸ್ಥಿತಿ ಹದಗೆಟ್ಟಿರುವುದು ವಾಸ್ತವಾಂಶ ಈ ರೀತಿ ಹಣಕಾಸಿನ ಪರಿಸ್ಥಿತಿಯ ವಾಸ್ತವಾಂಶವಾಗಿದೆ. ಸರ್ಕಾರ ಹಣಕಾಸನ್ನು ಕ್ರೋಢೀಕರಿಸುವ ದಿಕ್ಕಿನಲ್ಲಿ ಹೆಚ್ಚಿನ ಗಮನವರಿಸಬೇಕು. ಇವತ್ತು ಹಲವಾರು ಇಲಾಖೆಗಳಿಗೆ ಒಟ್ಟು 48 ಜನ ಮಂತ್ರಿಗಳನ್ನು ನೇಮಕ ಮಾಡಿ ಅವರಿಗೆ ಒಬ್ಬೊಬ್ಬರಿಗೂ ಕಾರ್ಯದರ್ಶಿಗಳು, ಒಂದೊಂದು ಡಿಪಾರ್ಟ್‌ಮೆಂಟ್ ಛಿದ್ರ ಮಾಡಿ ಎರಡು ಇಲಾಖೆಗಳನ್ನಾಗಿ ಮಾಡಿ ಹಂಚಿರುವಂಥಾದ್ದು ನೋಡುತ್ತಿದ್ದೇವೆ. ಇವತ್ತು ಜಿಲ್ಲಾ ಲೆವಲ್‌ನಲ್ಲಿ ಅಧಿಕಾರಿಗಳು ಬೇಕಾಗಿಲ್ಲ. ಪಿ.ಡಬ್ಲ್ಯೂ.ಡಿ ಇಲಾಖೆಗೆ ಸೂಪರಿಂಟೆಂಡ್ ಇಂಜನಿಯರಿಂಗ್ ಬೇಕಾಗಿಲ್ಲ, ಸಣ್ಣ ನೀರಾವರಿಗೆ ಒಬ್ಬರಂತೆ, ಭಾರಿ ನೀರಾವರಿಗೆ ಒಬ್ಬರಂತೆ, ಜಿಲ್ಲಾ ಪಂಚಾಯತ್‌ಗೆ ಒಬ್ಬರಂತೆ, ಇದ್ದಾರೆ. ಇಲ್ಲಿ ಎಲ್ಲಾ ಇಲಾಖೆಯನ್ನು ಒಬ್ಬರೇ ಮಾನಿಟರ್ ಮಾಡಬಹುದು, ಅವರಿಗೆ ಕೆಲಸವಿರುವುದಿಲ್ಲ, ಶೇಕಡ 50ರಿಂದ ಶೇಕಡ 60ರಷ್ಟು ಎಸ್ಟ್ಯಾಬ್ಲಿಷ್‌ಮೆಂಟ್ ಚಾರ್ಜ ಆಗುತ್ತಿದೆ, ಸಂಬಳಕ್ಕೆ ಹೋಗುತ್ತಿದೆ, ಇನ್ನು ಉಳಿದಂತಹ ಶೇಕಡ 35 ರಿಂದ 40 ರಷ್ಟು ಡೆವಲಪ್‌ಮೆಂಟ್ ವರ್ಕ್ ಮಾಡುವಂಥಾದ್ದು ಆಗಿದೆ. ಇವೊತ್ತು ಒಂದು ದುರಂತ ಅಂದರೆ, ಪ್ರತಿ ಡಿಪಾರ್ಟ್‌ಮೆಂಟ್‌ಗಳಲ್ಲೂ ಎಸಾಬ್ಲಿಷ್‌ಮೆಂಟ್‌ಗೆ ನಾವು ಹಣವನ್ನು ಅದು ಖರ್ಚು ಮಾಡುತ್ತಿದ್ದೇವೆ.

5.10 ಪಿ.ಎಂ.

That amount spent for the establishment exceeds the development amount. ಅಭಿವೃದ್ಧಿ ಕೆಲಸಕಾರ್ಯಗಳಿಗೆ ಪ್ರತಿಯೊಂದು ಇಲಾಖೆಯಲ್ಲಿ ಏನು ಖರ್ಚು ಮಾಡುತ್ತಿದ್ದೇವೆ ಅದು ಬಹಳ ಕಮ್ಮಿ ಇದೆ, ಎಸ್ಟಾಬ್ಲಿಷ್‌ಮೆಂಟ್‌ಗೆ ಹೆಚ್ಚು ಖರ್ಚು ಮಾಡಲಾಗುತ್ತಿದೆ, ಅದಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸ್ವತಂತ್ರವಾಗಿ ಕಾರ್ಯನಿರ್ವಹಣೆ ಮಾಡಲಾಗುತ್ತಿಲ್ಲ, ಅವರಿಗೂ ಕಷ್ಟವಿದೆ, ಅವರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲಾಗುತ್ತಿಲ್ಲ, ಇದು ಗೊತ್ತಿರುವ ವಿಚಾರ ಪಕ್ಷಕ್ಕೆ ಒಂದು ಹೈಕಮಾಂಡ್ ಎಂದು ಎಂದಿದೆ, ಡೈರೆಕ್ಷನ್ ಕೊಟ್ಟಂತೆ ಅವರು ಕೆಲವು ವಿಚಾರಗಳಲ್ಲಿ ನಡೆಯಬೇಕಾಗುತ್ತದೆ, ನಮಗೂ ಗೊತ್ತಿದೆ. ಆದರೂ ಕೂಡ ತಮಗಿರುವ ಇತಿಮಿತಿಯಲ್ಲಿ ನೀವು ಈ ಎಲ್ಲಾ ವೆಚ್ಚವನ್ನು ಕಡಿತಗೊಳಸದೆ ಇದ್ದರೆ ನೀವು ಹಣಕಾಸನ್ನು ಉಳಿತಾಯ ಮಾಡಲು ಸಾಧ್ಯವಿಲ್ಲ, ಹಣವಿಲ್ಲದೆ ನೀವು ಏನೂ ಮಾಡಲಾಗುವುದಿಲ್ಲವೆಂಬುದು ಗೊತ್ತಿರುವ ವಿಚಾರವಾಗಿದೆ. Money makes many things and anything ಎಂದು ಹೇಳುತ್ತಾರೆ, ಹಣವಿಲ್ಲದೆ ನೀವು ಯಾವ ಬರಪರಿಹಾರ ಮಾಡಲು ಆಗುತ್ತದೆ, ನಾವೆಷ್ಟೇ ಮಾತನಾಡಿದರೂ, ಮಾತು ಮಾತಾಗಿ ಉಳಿಯುತ್ತದೆಯೇ ಹೊರತು, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಿಮ್ಮ ಖಜಾನೆ ತುಂಬದೆ, ನಿಮ್ಮ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿದೆ ಇದ್ದರೆ ಯಾವುದೇ ಬರಪರಿಹಾರ ಕಾಮಗಾರಿಗಳನ್ನು ನೀವು ಖಂಡಿತ ಕೈಗೆತ್ತಿಕೊಳ್ಳಲಾಗುವುದಿಲ್ಲ ಎನ್ನುವ ಮಾತನ್ನು ನಾನು ನಿಸ್ಸಂಕೋಚವಾಗಿ ಈ ಸದನದ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಮಂತ್ರಿಗಳಿದ್ದಾರೆ, ಇಷ್ಟು ಕಾರ್ಯದರ್ಶಿಗಳು, ಇಷ್ಟು ಸಿಬ್ಬಂದಿಗಳಿದ್ದಾರೆ, ಈ ಸಂದರ್ಭದಲ್ಲಿ ಲೋಕಾಯುಕ್ತರಾದ ಶ್ರೀ ವೆಂಕಟಾಚಲ ಅವರನ್ನು ಅಭಿನಂದಿಸಬೇಕಾಗುತ್ತದೆ. ನಾನು ಮುಖ್ಯಮಂತ್ರಿಗಳನ್ನು ಕೇಳುತ್ತೇನೆ, ಕರ್ನಾಟಕ ಲೋಕಾಯುಕ್ತರು ಜಿಲ್ಲಾ ಆಸ್ಪತ್ರೆಗಳು

ಸೇರಿದಂತೆ ಮೊನ್ನೆ ಮೊನ್ನೆ ಬೆಂಗಳೂರು ಸುತ್ತಮುತ್ತ ಇರುವ ಬ್ಯಾಟರಾಯನಪುರ, ಕೆಆರ್‌ಪುರಂ, ಕೆಂಗೇರಿ ಸೇರಿದಂತೆ ಸುಮಾರು ಏಳೆಂಟು ಸಿಎಂಸಿಗಳು ಬರುತ್ತವೆ, ಎಲ್ಲವನ್ನೂ ಧಾಳಿ ಮಾಡಿದ್ದಾರೆ, ಸುಮಾರು 300-400 ಕೋಟಿ ರೂಪಾಯಿಗಳಷ್ಟು ಹಣ ದುರುಪಯೋಗವಾಗಿರುವುದನ್ನು ಪತ್ತೆ ಮಾಡಿದ್ದಾರೆ, ಇದನ್ನು ಮಾನ್ಯ ಮುಖ್ಯಮಂತ್ರಿಗಳು ಬಹಳ ಗಂಭೀರವಾಗಿ ಯೋಚನೆ ಮಾಡಬೇಕು, ಅಲ್ಲಿ ತಮ್ಮ ಪಕ್ಷದವರೇ ಆಡಳಿತದಲ್ಲಿದ್ದಾರೆ, ತಮ್ಮ ಸಿಬ್ಬಂದಿವರ್ಗದವರೇ ಅಲ್ಲಿನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ, ತಾವಿದ್ದೀರಿ ಮಂತ್ರಿಗಳಿದ್ದಾರೆ, ಎಂ.ಎಲ್.ಎ. ಇದ್ದಾರೆ ಇಷ್ಟು ಇದ್ದರೂ ಬೆಂಗಳೂರು ಸುತ್ತಮುತ್ತಲಿನ ಪರಿಸ್ಥಿತಿ ಹೀಗಾದರೆ ಇನ್ನು ಬೀದರ್, ಗುಲ್ಬರ್ಗಾದಲ್ಲಿನ ಪರಿಸ್ಥಿತಿ ಹೇಗಿರಬಹುದೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಬೇಕು. ಬೆಂಗಳೂರು ನಗರದ 10 ಕಿ.ಮಿ. ರೇಡಿಯಸ್‌ನಲ್ಲಿರುವ ಈ ಪಟ್ಟಣ ಪಂಚಾಯಿತಿ ನಗರಸಭೆಗಳಲ್ಲಿಯೇ 350-400 ಕೋಟಿ ರೂಪಾಯಿಗಳಷ್ಟು ಲೈಟ್ ಪರ್ಚೇಸ್ ಮಾಡುವುದರಲ್ಲಾಗಲಿ, ಕಾಮಗಾರಿ ಮಾಡುವುದಲ್ಲಾಗಲಿ, ಕಾಮಗಾರಿಗಳನ್ನು ಮಾಡದೆ ಬಿಲ್ ಮಾಡಿರುವುದಾಗಿದೆ. ಇದೆಲ್ಲವೂ ನಡೆಯುತ್ತಿರಬೇಕಾದರೆ ಲೋಕಾಯುಕ್ತರಾದ ಶ್ರೀ ವೆಂಕಟಾಚಲನವರೇ ಬಂದು ಇದಕ್ಕೆ ಮುಕ್ತಿಯನ್ನು ಕೊಡಬೇಕೇ, ಇದನ್ನು ಮಾಡುವುದಕ್ಕೆ ಸರ್ಕಾರದಲ್ಲಿ ಅಧಿಕಾರವಿಲ್ಲದೇ ಇದನ್ನು ಮಾಡಲಿಕ್ಕೇ, ತಮ್ಮ ಗಮನಕ್ಕೆ ಬರಲಿಲ್ಲವೇ, ಬಂದಿದ್ದರೂ ಸುಮ್ಮನೆ ಕುಳಿತಿದ್ದೀರಾ? ಕುಳಿತುಕೊಂಡರೆ ಜನರಲ್ಲಿ ನಿಮ್ಮ ಪಕ್ಷದ ಹಾಗೂ ಸರ್ಕಾರದ ಬಗ್ಗೆ ಏನು ಸಂದೇಶ ಹೋಗುತ್ತದೆ? ಮುಂದೆ ನಿಮಗೆ ಅನುಕೂಲವಾಗಬೇಕೋ ಬೇಡವೋ? ದಯಮಾಡಿ ಇದನ್ನು ಗಂಭೀರವಾಗಿ ಪರಿಗಣಿಸುವ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು, ಉಳಿತಾಯ ಮಾಡುವುದು ಆಗಬೇಕು. ಇನ್ನು ಟ್ಯಾಕ್ಸ್ ಯಾರಿಗೆ ಹಾಕಬೇಕೋ ಅವರಿಗೆ ನೀವು ಹಾಕುತ್ತಿಲ್ಲ, ವಿನಾಯಿತಿಯನ್ನು ಯಾರಿಗೆ ಕೊಡಬಾರದೋ ಅವರಿಗೆ ಕೊಡುತ್ತಿದ್ದೀರಿ, ಇದೆಲ್ಲಾ ತಮಗೆ ಗೊತ್ತಿರುವ ವಿಚಾರ. ದಯಮಾಡಿ ಇದನ್ನು ಗಂಭೀರವಾಗಿ ತೆಗೆದುಕೊಂಡು ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಮಾಡಿ ಕೊಂಡರೆ ಈ ಬರಗಾಲದ ಪರಿಹಾರವನ್ನು ಖಂಡಿತವಾಗಿಯು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಹಣವಿಲ್ಲದೆ ಏನೂ ಮಾಡಲಾಗುವುದಿಲ್ಲ, ಸ್ವಾಮಿ, ತಾವು ನಾಲ್ಕು ತಿಂಗಳ ಹಿಂದೆಯೇ ಸುಮಾರು 10 ಲಕ್ಷ ರೂಪಾಯಿಗಳನ್ನು ಪ್ರತಿಯೊಬ್ಬ ಶಾಸಕರ ಕ್ಷೇತ್ರಕ್ಕೆ ಈ ಬೋರ್‌ವೆಲ್ ಅನ್ನು ವೈಡನಿಂಗ್, ಡೀಪನಿಂಗ್, ಕ್ಲೀನ್ ಮಾಡಲೆಂದು ಕೊಟ್ಟಿರಿ, ನಾವು ಪತ್ರ ಕೊಟ್ಟು ಎರಡು ತಿಂಗಳಾಗಿದೆ ಸ್ವಾಮಿ, ಇನ್ನು ಕೆಲಸ ಪ್ರಾರಂಭ ಮಾಡಲಿಲ್ಲ. ಹೀಗಾದರೆ ಹೇಗೆ ಜನರ ಕಷ್ಟಕ್ಕೆ ಬರಲು ಸಾಧ್ಯವಾಗುತ್ತದೆ, ಯಾವುದನ್ನು ಪರಿಹಾರ ಮಾಡುವುದಕ್ಕಾಗುತ್ತದೆ, ಯಾವ ರೀತಿ ಅವರ ಸಮಸ್ಯೆಗೆ ಗಮನವನ್ನು ಸೆಳೆದು ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಚಿಂತನೆಯನ್ನು ಬಹುಶಃ ನಾವೆಲ್ಲಾ ಇಲ್ಲಿ ಮಾಡಬೇಕಾಗಿದೆ. ಇನ್ನು ಕಾಲ ಮಿಂಚಿಲ್ಲ, ತಾವು ಕೂಡಲೇ ಕ್ರಮವನ್ನು ತೆಗೆದುಕೊಂಡರೆ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಬಹುದು. ಮಾನ್ಯ ಸಿಂಧ್ಯಾರವರು ಹೇಳಿದಂತೆ ನಬಾರ್ಡ್‌ನಿಂದ ಹಣ ಸಾಲದ ರೂಪದಲ್ಲಿ ಬರುತ್ತದೆ, ಆ ಬಾಬ್ತಿನ ಪೇಮೆಂಟ್ ಅನ್ನು ನೀವು ಮಾಡಿಲ್ಲವಲ್ಲಿ, ಕಾರಣವೇನು? ಕಳೆದ ವರ್ಷ ನಬಾರ್ಡ್ ಯೋಜನೆಯಡಿ ಕೆಲಸ ಮಾಡಿದಂತಹ ಕಂಟ್ರಾಕ್ಟರ್ಸ್‌ಗೆ ಹಣ ಪೇಮೆಂಟ್ ಆಗಿಲ್ಲ ಸ್ವಾಮಿ; ಇದು ಸಾಲದ ರೂಪದಲ್ಲಿ ಬರುವ ಹಣವಾಗಿದೆ, ಈ ಹಣ ಏನು ಮಾಡಿದಿರಿ ಎಂಬ ಬಗ್ಗೆ ನಾವು ಈಗ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ.

ಸರ್ಕಾರದ ಗಮನ ಸೆಳೆಯುವ ದೃಷ್ಟಿಯಿಂದ ಇಲ್ಲಿ ಕೆಲವಾರು ಮಾತುಗಳನ್ನು ಇಲ್ಲಿ ಹೇಳಿದ್ದೇನೆ, ಸರ್ಕಾರದ ಎಲ್ಲಾ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಆದಷ್ಟು ಹಣಕಾಸಿನ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳದಿದ್ದರೆ, ಸುಮ್ಮನೆ ಇಲ್ಲಿ ನಮ್ಮನ್ನು ಕಾಟಚಾರಕ್ಕೆ ಕರೆಯುವುದು ಮಾತನಾಡಿಸುವುದು, ನಾವು ಹೋಗುವುದು ಜನರಿಗೆ ಕೆಲಸವಾಗಲಿಲ್ಲವೆಂದರೆ ನಮಗೆ ಕಷ್ಟವಾಗುತ್ತದೆ ಕ್ಷೇತ್ರದಲ್ಲಿ ಜನರಿಗೆ ನಾವು ಉತ್ತರ ಹೇಳಲು ಸಾಧ್ಯವಾಗುವುದಿಲ್ಲ, ಅಂತಹ ಒಂದು ಪರಿಸ್ಥಿತಿ ಇದೆ. ಮತ್ತೊಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ಉಪಾಧ್ಯಕ್ಷರಿಗೆ, ಏಪ್ರಿಲ್ ತಿಂಗಳಿನಿಂದ ಆರ್ಥಿಕ ವರ್ಷ ಆರಂಭವಾಗುತ್ತದೆ ಏಪ್ರಿಲ್, ಮೇ, ಜೂನ್, ಜುಲೈ ಅಂದರೆ ನಾವು ನಾಲ್ಕನೆ ತಿಂಗಳಲ್ಲಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಶಾಸಕರ ಪ್ರದೇಶಾಭಿವೃದ್ಧಿಗೆ 40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂಬ ಮಾತನ್ನು ತಾವು ಹೇಳಿದರು. ಕಷ್ಟಕಾಲದಲ್ಲಾದರೂ ಜನಗಳು ತೊಂದರೆಗೆ ಆಗೋಣವೆಂದರೆ ಅದರಲ್ಲಿ ಐದು ಲಕ್ಷ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಿದ್ದೀರಾ ಸ್ವಾಮಿ? ಈ ವರ್ಷದ ಬಗ್ಗೆ ಹೇಳುತ್ತಿದ್ದೇನೆ ನಾಲ್ಕು ತಿಂಗಳು ಈಗಾಗಲೇ ಕಳೆದು ಹೋಗಿದೆ, ನಾವು ಹೇಗೆ ಕ್ಷೇತ್ರದಲ್ಲಿ ಕೆಲಸ ಮಾಡೋದು? ಇವತ್ತು ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿ ಎಲ್ಲಾ ಬಂದಿದೆ, ಅವರಿಗೂ ಸಾಕಷ್ಟು ಹಣವಿಲ್ಲ, ಒಂದೊಂದು ಜಿಲ್ಲಾ ಪಂಚಾಯಿತಿಗೆ ಎರೆಡೇರಡು ಲಕ್ಷ ರೂಪಾಯಿಗಳು ಕೊಡಲಾಗಿದೆ, ಎಲ್ಲಾ ಸ್ಪಿಲ್ ಓವರ್ ತೆಗೆದುಕೊಳ್ಳಬೇಕು, ಅಷ್ಟು ಕಷ್ಟವನ್ನು ಅನುಭವಿಸುತ್ತಿದ್ದೇವೆ, ಇವಾಗ ಒಂದು ಬೋರವೆಲ್ ಅನ್ನು ಎಂಎಲ್ಎ ಅವಶ್ಯವಿರುವ ಗ್ರಾಮಕ್ಕೆ ಕೊಡಲಾಗುತ್ತಿಲ್ಲ, ಅಂತಹ ಕಷ್ಟದ ಪರಿಸ್ಥಿತಿಯಲ್ಲಿ ನಾವಿದ್ದೇವೆ, ರೈತರೂ ಕೂಡ ಇದ್ದಾರೆ ಎನ್ನುವ ಮಾತನ್ನು ಹೇಳುತ್ತೇನೆ. 40 ಲಕ್ಷ ರೂ.ನಲ್ಲಿ ತುರ್ತಾಗಿ ಅರ್ಧವನ್ನಾದರೂ ಎಲ್ಲ ಎಂಎಲ್ಎಗಳಿಗೆ ಬಿಡುಗಡೆ ಮಾಡಿದರೆ, ಸ್ವಲ್ಪ ನಮಗೂ ಕೂಡ ಮಾನಮರ್ಯಾದೆ ಉಳಿಯುತ್ತದೆ. ಉಪಾಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಉಪಾಧ್ಯಕ್ಷರೇ, ಬರ ಈ ರಾಜ್ಯದಲ್ಲಿ ಬಂದಿರತಕ್ಕಂದ್ದರ ಬಗ್ಗೆ ಅದಕ್ಕೆ ಯಾವ ರೀತಿಯಾದ ಪರಿಹಾರವನ್ನು ಸರ್ಕಾರ ಒದಗಿಸಿಕೊಡಬೇಕೆನ್ನುವ ಕುರಿತು ಚರ್ಚೆಯಾಗುತ್ತಿದೆ ನಾನು ಇಲ್ಲಿ ಕುಳಿತು ಎಲ್ಲರ ಭಾಷಣ ಹಾಗೂ ಅನಿಸಿಕೆಗಳನ್ನು ಕೇಳಿದ್ದೇನೆ. ನನಗೆ ಕಾಡುತ್ತಿರುವ ಒಂದು ಸಮಸ್ಯೆ ಎಂದರೆ ಈ ಬರ ಪ್ರತಿ ಮೂರು ತಿಂಗಳಿಗೊಮ್ಮೆ ಬರುತ್ತಲೇ ಇರುತ್ತದೆ. ನಾವು ಏಪ್ರಿಲ್ 15ನೇ ತಾರೀಖಿಗೆ ಬರ ಮುಗಿಯುತೆಂದು ತೀರ್ಮಾನ ಮಾಡಿಕೊಂಡರೆ ಮತ್ತೆ ಬರ ಕಾಲಿಟ್ಟಿದೆ. ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ ಎಂದು ಹೇಳುವಂತೆ ಬರ ಕಳೆದಂತೆ ಮತ್ತೆ ಬರ ಬರುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಇವತ್ತಿನದಿವಸ ಇದ್ದೇವೆ. ಕಳೆದ ಮೂರುವರೆ ತಿಂಗಳಿಂದ ಬರ ಪರಿಹಾರಕ್ಕೆ ಹಣವನ್ನು ಸರ್ಕಾರಕ್ಕೆ ಒತ್ತಾಯ ಮಾಡಿ ಕೇಳುತ್ತಿದ್ದೇವೆ, ಮತ್ತೆ ಒಂದು ತಿಂಗಳಿನಿಂದ ಮಳೆ ಇಲ್ಲದೆ ರೈತರಿಗೆ ತುಂಬಾ ತೊಂದರೆಯಾಗಿದೆ. ಮಳೆ ಇಲ್ಲದಿರುವ ಈ ಒಂದು ಅಭಾವ ಸ್ಥಿತಿಯಲ್ಲಿ ಸರ್ಕಾರ ಏನು ಕ್ರಮವನ್ನು ಎನ್ನುವ ಬಗ್ಗೆ ನಾವು ಚರ್ಚೆ ಮಾಡಬಹುದಾಗಿದೆ. ಕುಡಿಯುವ ನೀರಿಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಕೃಷಿ ಇಲಾಖೆಯಲ್ಲಿ ಈಗ ಏನು

ಮಾಡಿದೆ ಮುಂದೆ ಏನಾಗಬೇಕಾಗಿದೆ ಎನ್ನುವುದರ ಬಗ್ಗೆ ಇವತ್ತು ಇರುವ ಬಹಳ ಪ್ರಮುಖವಾದ ವಿಷಯ. ಮೊದಲನೆಯದಾಗಿ ಈ ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಸಂಸದೀಯ ಸಚಿವರಾದ ಬಹಳ ವ್ಯಾಪಕವಾಗಿ ಪ್ರವಾಸವನ್ನು ಮಾಡಿದರು. ಆದರೆ ಕಳೆದ ಒಂದು ತಿಂಗಳಿನಿಂದ ಕುಡಿಯುವ ನೀರಿಗೆ ಇಷ್ಟೊಂದು ತೊಂದರೆ ಕಾಣುತ್ತಿರುವ ಸಂದರ್ಭದಲ್ಲಿ ಈ ರಾಜ್ಯದ ಯಾವ ಸಚಿವರು ಯಾವ ಜಿಲ್ಲೆಗೆ ಹೋಗಿ, ಏನು ಬರ ಇದೆ, ಏನು ಕಾಮಗಾರಿ ತೆಗೆದುಕೊಂಡರೆ ಜನಗಳಿಗೆ ಅನುಕೂಲವಾಗುತ್ತದೆಂದು ಒಂದು ಸಭೆಯನ್ನು ನಡೆಸಿ ಅಂತಿಮ ತೀರ್ಮಾನಕ್ಕೆ ಬಂದಿದ್ದಾರೆಯೇ ಎನ್ನುವುದೇ ನಮಗೆ ಕಾಡುತ್ತಿರುವ ಪ್ರಶ್ನೆಯಾಗಿದೆ. ಬರ ಬಂತು ಆ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆ ಮಾಡಬೇಕು ಎಂಬುದಕ್ಕೆ ಅಷ್ಟೇ ಸೀಮಿತವಾಗಬಾರದು. ಅದನ್ನು ಎದುರಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಕೇಳಬೇಕಾಗುತ್ತದೆ. ನನಗೆ ಗೊತ್ತಿರುವ ಪ್ರಕಾರ ಕಳೆದ ಒಂದು ತಿಂಗಳಲ್ಲಿ ಇಂತಹ ತೀವ್ರ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿರುವ ಸಂದರ್ಭದಲ್ಲೂ ಸಹಿತ ಯಾವುದೇ ಸಚಿವರು, ಯಾವುದೇ ಒಂದು ಜಿಲ್ಲೆಗೆ ಹೋಗಿ, ಈ ಬರವನ್ನು ಅಥವಾ ಕೃಷಿ ಇಲಾಖೆಯಲ್ಲಿ ಮುಂದೇನು ಆಗಬೇಕೆನ್ನುವ ರೂಪರೇಷೆಗಳನ್ನು ಮಾಡದಿರುವ ವಿಷಯವನ್ನು ಇವತ್ತಿದಿವಸ ಇವತ್ತು ನಾನು ವಿಷಾದನೀಯವಾಗಿ ಇವತ್ತು ಸದನದ ಮೂಲಕ ಸರ್ಕಾರಕ್ಕೆ ಹೇಳಬೇಕಾಗಿದೆ.

ಕಳೆದ ಜನವರಿಯಿಂದ ಏಪ್ರಿಲ್ ತಿಂಗಳವರೆಗೆ ನಮ್ಮ ಜಿಲ್ಲೆಯಲ್ಲಿ ಬಹಳ ತೀವ್ರ ತರವಾಗಿರತಕ್ಕಂಥ ಬರಗಾಲವಿತ್ತು. ಒಂದು ಉದಾಹರಣೆಯನ್ನು ಹೇಳ ಬಯಸುತ್ತೇನೆ. ಸರ್ಕಾರ ಹಣವನ್ನು ಬಿಡುಗಡೆ ಮಾಡಿತು. ಆದರೆ ಜಿಲ್ಲಾಧಿಕಾರಿಗಳ ಪತ್ರ ನನ್ನ ಬಳಿ ಇದೆ. ಹಿಂದೆ ಜನವರಿಯಿಂದ ಏಪ್ರಿಲ್‌ವರೆಗೆ ಇದ್ದಂಥ ಬರದ ಅವಧಿಯಲ್ಲಿ ಕೈಗೊಂಡ ಕಮಿಟೆಡ್ ವರ್ಕ್ಸ್‌ಅನ್ನು ಮುಗಿಸಲು 95 ಲಕ್ಷ ರೂಪಾಯಿಗಳು ಬೇಕು. ಆ ಹಣ ಇನ್ನೂ ಬಿಡುಗಡೆಯಾಗಿಲ್ಲ. ಮತ್ತೇ ಅನುದಾನ ಇಲ್ಲದೇ ಒಂದು ಕೋಟಿ 72 ಲಕ್ಷ ರೂಪಾಯಿಗಳ ಕಾಮಗಾರಿಗಳಿಗೆ ಅನುಮೋದನೆಯನ್ನು ಈಗಾಗಲೇ ಮಾಡಿಕೊಟ್ಟಿದ್ದಾರೆ. ಅಂದರೆ ಅನುದಾನ ಇಲ್ಲದೇ, ಅನುಮೋದನೆಯಾಗಿರತಕ್ಕಂಥ ಅಂದಾಜು ಪಟ್ಟಿಗಳನ್ನು ಮಾಡಿಕೊಟ್ಟಿದ್ದಾರೆ. ಎರಡೂ ಸೇರಿದಂತೆ ಒಟ್ಟು ಸುಮಾರು ಎರಡೂಮುಕ್ಕಾಲು ಕೋಟಿ ರೂಪಾಯಿಗಳ ಹಣವನ್ನು ಚಿಕ್ಕಮಗಳೂರು ಜಿಲ್ಲೆಯೊಂದಕ್ಕೇ ಬರಕ್ಕಾಗಿ ಹಣವನ್ನು ಬಿಡುಗಡೆ ಮಾಡಬೇಕಾಗಿದೆ. ಇನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದನ್ನು ಸಹ ನಾವು ಯೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವುದನ್ನು ಹೇಳಬೇಕು. ಬೆಳಿಗ್ಗೆ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಕೊಳವೆ ಬಾವಿಗಳ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಒಂದು ಕಡೆ ಸರ್ಕಾರ ಸಿ.ಆರ್.ಎಫ್ ಫಂಡ್‌ನಲ್ಲಿ ಕೊಳವೆ ಬಾವಿಗಳನ್ನು ಕೊರೆಸಬೇಡಿ ಎಂದು ಆದೇಶ ಕೊಡುತ್ತದೆ. ಇನ್ನೊಂದು ಕಡೆ ಇದಕ್ಕಾಗಿ ಜಿಲ್ಲಾ ಪರಿಷತ್ತಿನವರಿಗೆ ಅಲ್ಪಸ್ವಲ್ಪ ಹಣವನ್ನು ಬಿಡುಗಡೆ ಮಾಡಿ ಅದಕ್ಕೂ ಒಂದಷ್ಟು ರಿಸ್ಟ್ರಿಕ್ಷನ್ ಹಾಕುತ್ತೀರಿ. ಇವತ್ತು ರಾಜ್ಯದಲ್ಲಿರುವ ಎಷ್ಟು ಕೊಳವೆ ಬಾವಿಗಳು ನೀರನ್ನು ಒದಗಿಸಲು ಅನುಕೂಲವಿದೆ ಎನ್ನುವ ಒಂದು ಪಟ್ಟಿಯೂ ಸಹ ಇಲ್ಲ, ಎಷ್ಟು ಕೊಳವೆ ಬಾವಿಗಳಲ್ಲಿ ಹಿಂದಿನ ದಿನಗಳಲ್ಲಿ ನೀರಿದ್ದು ಇವತ್ತು ನೀರಿಲ್ಲ ಎನ್ನುವ ಮಾಹಿತಿ ನಮ್ಮಲ್ಲಿ ಇಲ್ಲ. ಆದ್ದರಿಂದ, ಮುಂದೆ ಏನು ಮಾಡಬೇಕು ಎನ್ನುವ ಬಗ್ಗೆಯೂ ಸಹ ಚರ್ಚೆಯಾಗಬೇಕು. ನಮ್ಮ ಜಿಲ್ಲೆಯೊಂದಕ್ಕೇ

ಕುಡಿಯುವ ನೀರಿನ ಯೋಜನೆಗಳಿಗೆ ಸುಮಾರು ಎರಡೂಮುಕ್ಕಾಲು ಕೋಟಿ ರೂಪಾಯಿಗಳನ್ನು ಬಾಕಿ ಇಟ್ಟುಕೊಂಡಿರುವ ಸರ್ಕಾರ ತೀವ್ರತರವಾಗಿರತಕ್ಕಂಥ ಬರಗಾಲವನ್ನು ಎದುರಿಸಲು ಏನೇನು ರೂಪುರೇಷೆಗಳನ್ನು ಹಮ್ಮಿಕ್ಕೊಂಡಿದೆ ಎಂಬುದನ್ನು ಹೇಳಬೇಕಾಗುತ್ತದೆ. ತಕ್ಷಣವೇ ಯಾವುದಾದರೂ ರೂಪದಲ್ಲಿ ಹಣವನ್ನು ಒದಗಿಸಿ, ಕೊಳವೆ ಬಾವಿಗಳನ್ನು ಕೊರೆಸತಕ್ಕಂಥ ಕೆಲಸವನ್ನು ಮಾಡಬೇಕು ಎನ್ನುವುದು ನನ್ನ ಮೊದಲನೇ ಒತ್ತಾಯ.

ಇನ್ನು ಕೃಷಿ ಇಲಾಖೆಯ ಬಗ್ಗೆ ಹೇಳುವುದಾದರೆ, ಕಳೆದ ಏಪ್ರಿಲ್ ತಿಂಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಮತ್ತು ರಾಜ್ಯಾದ್ಯಂತ ಸ್ವಲ್ಪ ಮಳೆ ಆಯಿತು. ಜನಗಳು ತಮ್ಮಲ್ಲಿದ್ದಂತ ಅಲ್ಪಸ್ವಲ್ಪ ಹಣವನ್ನು ಈಗಾಗಲೇ ಬೀಜ ಮತ್ತು ಗೊಬ್ಬರಕ್ಕೆ ಹಾಕಿ ಬಿತ್ತನೆಯನ್ನು ಮಾಡಿದ್ದು, ಇವತ್ತಿನ ದಿವಸ ಅವರ ಕೈಯಲ್ಲಿ ಹಣ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಅಧ್ಯಕ್ಷರು ಮತ್ತು ಕೆಲವು ಸದಸ್ಯರು ಹೇಳಿದ ಪ್ರಕಾರ ಮುಂದಿನ ವಾರ ಮಳೆ ಬರುತ್ತದೆ ಎನ್ನುವ ಆಶಾಭಾವನೆಯಲ್ಲಿ ನಾವಿದ್ದೇವೆ. ಆದರೆ ರೈತರಲ್ಲಿ ಇವತ್ತು ಹಣ ಇಲ್ಲ. ಅವರು ಬೇಸಾಯ ಮಾಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಬೀಜ, ಗೊಬ್ಬರಗಳನ್ನು ತರತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಇದಕ್ಕೆ ಸರ್ಕಾರ, ಮುಂದಿನ ವಾರದೊಳಗೆ ಏನು ಕ್ರಮ ಕೈಗೊಳ್ಳುತ್ತದೆ ಎನ್ನುವುದನ್ನು ಹೇಳಬೇಕು. ಶಾರ್ಟ್ ಟರ್ಮ್‌ನಲ್ಲಿ ಅಂದರೆ ಬೇಗ ಪೈರು ಬರತಕ್ಕಂಥ ಬೀಜವನ್ನೇನಾದರೂ ಕಂಡು ಹಿಡಿಯದ್ದಾರೆಯೇ? ಅದನ್ನು ಸಾರ್ವಜನಿಕರಿಗೆ ಕೊಡಲು ತಯಾರಿದ್ದಾರೆಯೇ ಎನ್ನುವುದನ್ನು ಹೇಳಬೇಕು. ಹೀಗೆ ಯಾವುದಾದರೂ ಒಂದು ಕಾರ್ಯಕ್ರಮವನ್ನು ರೂಪಿಸಬೇಕಲ್ಲವೇ? ಬರ ಬಂತು ಎನ್ನುವ ಬಗ್ಗೆ ಚರ್ಚೆಯಾದ ತಕ್ಷಣ ಬರ ಪರಿಹಾರ ಆಗುವುದಿಲ್ಲ. ಇದರಿಂದ ನಾವು ರೈತರಿಗೆ ಯಾವುದೇ ರೀತಿಯ ರಿಲೀಫ್‌ನ್ನು ಕೊಡಲು ಆಗುವುದಿಲ್ಲ. ಹಾಗಾಗಿ ಕೃಷಿ ಇಲಾಖೆಯವರು ಇವತ್ತಿನ ದಿವಸ ವಿಫಲರಾಗಿದ್ದಾರೆ ಎಂದು ಹೇಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಅವರು ಯೋಚನೆಯನ್ನೂ ಸಹಿತ ಸಹ ಮಾಡುತ್ತಿಲ್ಲ. ಯಾವುದೇ ರೀತಿಯಾಗಿರತಕ್ಕ ಕಾರ್ಯಕ್ರಮಗಳನ್ನು ರೂಪಿಸಿಲ್ಲ. ಕೃಷಿ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಮೌನವಾಗಿರುವುದನ್ನು ಬಿಟ್ಟರೆ ಬೇರೇನನ್ನೂ ಮಾಡುತ್ತಿಲ್ಲ. ನಮ್ಮ ಸ್ನೇಹಿತರಾದ ವಿಶ್ವೇಶ್ವರ ಹೆಗಡೆಯವರು ಈಗಾಗಲೇ ಹೇಳಿದ ಹಾಗೆ, ರೈತ ಸಂಪರ್ಕ ಕೇಂದ್ರಗಳಲ್ಲಿ ಫ್ಯಾನಿನಡಿಯಲ್ಲಿ ಕುಳಿತು ಕೃಷಿ ಇಲಾಖೆಯ ಕೃಷಿ ಸಹಾಯಕರು ಜೀವನವನ್ನು ನಡೆಸುತ್ತಿದ್ದಾರೆ. ಇದಕ್ಕೆ ಅಂತಿಮವಾಗಿ ನಾವು ಕೃಷಿಕರಿಗೆ ಯಾವ ರೀತಿಯಲ್ಲಿ ಪರಿಹಾರವನ್ನು ಕೊಡಬೇಕು ಎನ್ನುವ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಆದ್ದರಿಂದ, ಮುಂದಿನ ದಿನಗಳಲ್ಲಿ ಕಡಿಮೆ ಅವಧಿಯಲ್ಲಿ ಬೆಳೆ ಬರತಕ್ಕಂಥ ರಾಗಿಯ ಬೀಜವನ್ನು ಅಥವಾ ಆ ರೀತಿಯ ಜೋಳವನ್ನು ಅಥವಾ ಭತ್ತವನ್ನು ರೈತರಿಗೆ ಕೊಡಲು ಸಾಧ್ಯವಿದೆಯೂ ಎನ್ನುವ ಬಗ್ಗೆ ಚಿಂತನೆ ಮಾಡಲು ಸರ್ಕಾರ ಯೋಚನೆ ಮಾಡಬೇಕು. ಆದ್ದರಿಂದ, ಮೊದಲನೆಯದಾಗಿ, ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತದೆ ಎನ್ನುವುದನ್ನು ಹೇಳಬೇಕು. ಮತ್ತು ಈಗಾಗಲೇ ಮಳೆ ಒಗ್ಗುವುದರ ಬಗ್ಗೆ ಚಿಂತೆ ಮಾಡಲು ನಾವು ತಯಾರಿಲ್ಲ. ಮುಂದೆ ಮಳೆ ಬಂದಾಗ, ಕೃಷಿ ಇಲಾಖೆ ಯಾವ ರೀತಿ ಕಾರ್ಯಕ್ರಮವನ್ನು ರೂಪಿಸಿ ಕೊಳ್ಳುತ್ತದೆ ಎನ್ನುವ ಬಗ್ಗೆ ಸ್ಪಷ್ಟವಾಗಿರತಕ್ಕಂಥ ಆದೇಶವನ್ನು ಹೊರಡಿಸಬೇಕು; ಅದು ಪ್ರತಿಯೊಬ್ಬ ರೈತರಿಗೂ ಮುಟ್ಟಿ, ಮುಂದಿನ ದಿನಗಳಲ್ಲಿ ಆಗತಕ್ಕಂಥ ಅನಾಹುತವನ್ನು ತಪ್ಪಿಸತಕ್ಕಂಥ ಕೆಲಸವನ್ನು ಕೃಷಿ ಇಲಾಖೆ ಮಾಡಬೇಕಾಗಿದೆ.

ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ಇಲಾಖೆ ಕೆಲಸವನ್ನು ನಿರ್ವಹಣೆ ಮಾಡುತ್ತಿಲ್ಲ. ನುಸಿರೋಗ ಎಂದರೆ ಒಂದು ರೀತಿಯಾಗಿರತಕ್ಕಂಥ ಅಲರ್ಜಿ ಅವರಿಗೆ ಶುರುವಾಗಿ ಬಿಟ್ಟಿದೆ. ಇವತ್ತಿನ ದಿವಸ ಈ ಇಲಾಖೆಯನ್ನೇ ಮುಚ್ಚತಕ್ಕಂಥ ಪರಿಸ್ಥಿತಿ ಬಂದಿದೆ. ಯಾವ ರೀತಿಯಲ್ಲಿ ಈ ನುಸಿರೋಗವನ್ನು ತಡೆಗಟ್ಟುತ್ತಾರೆ ಎನ್ನುವುದನ್ನು ಹೇಳಬೇಕು. ನುಸಿರೋಗಕ್ಕೆ ನಾವು ಮಾನೋಕ್ರೋಟೋಫಸ್ ಕೊಡುತ್ತೇವೆ, ಆ ಔಷಧಿ ಕೊಡುತ್ತೇವೆ, ಈ ಔಷಧಿ ಕೊಡುತ್ತೇವೆ ಎಂದು ಒಬ್ಬ ಸಚಿವರು ಹೇಳಿದರು. ಸರ್ಕಾರದ ಆದೇಶದ ಮೇರೆಗೆ ಎಲ್ಲಾ ರೈತರು ಆ ಔಷಧಿಯನ್ನು ತೆಂಗಿನ ಮರಗಳಿಗೆ ಕೊಟ್ಟರು. ಹೀಗೆ ಔಷಧ ಕೊಟ್ಟಂಥ ಎಲ್ಲಾ ತೆಂಗಿನ ಮರಗಳು ಬಿದ್ದುಹೋಗತಕ್ಕಂಥ ಪರಿಸ್ಥಿತಿಗೆ ಬಂದಿವೆ. ಆದ್ದರಿಂದ, ಈ ನುಸಿರೋಗದ ಬಗ್ಗೆ ಸರ್ಕಾರ ಸ್ಪಷ್ಟವಾಗಿರತಕ್ಕಂಥ ಒಂದು ಹೇಳಿಕೆಯನ್ನು ಕೊಡಬೇಕು. ಇದಕ್ಕೆ ಸುಮಾರು 14-15 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಎಲ್ಲಿ ಹೋಯಿತು ಎಂದು ಸರ್ಕಾರ ಸಾರ್ವಜನಿಕರಿಗೆ ಹೇಳಬೇಕಾಗುತ್ತದೆ. ನುಸಿರೋಗಕ್ಕೆ ಔಷಧಿಯನ್ನು ಕೊಟ್ಟರು. ಆದರಿಂದ ನುಸಿರೋಗದ ಹೋಗಲಿಲ್ಲ, ಅದರ ಬದಲು ತೆಂಗಿನ ಮರಗಳು ಒಣಗಿ ಹೋಗತಕ್ಕಂಥ ಪರಿಸ್ಥಿತಿ ಇವತ್ತು ಬಂದಿದೆ. ಪತ್ರಿಕೆಗಳಲ್ಲಿ ಓದಿದೆವು. ಮಾನ್ಯ ಸಚಿವರುಗಳು ಮತ್ತು ಮುಖ್ಯಮಂತ್ರಿಗಳು ಅವರ ತೆಂಗಿನ ತೋಟಕ್ಕೆ ನುಸಿರೋಗದ ಈ ಔಷಧಿಯನ್ನು ಸಿಂಪಡಿಸಲಿಲ್ಲ, ಮತ್ತು ಇಂಜೆಕ್ಟ್ ಮಾಡಲಿಲ್ಲ. ಬಡಪಾಯಿ ರೈತರಿಗೆ ಆ ಔಷಧಿಯನ್ನು ಕೊಟ್ಟು ಅವರ ಮೇಲೆ ಪ್ರಯೋಗ ಮಾಡಿದರು. ಇವರಾರು ಪ್ರಯೋಗ ಮಾಡಲಿಲ್ಲ. ಹೆಗ್ಗಳಿಕೆಯಿಂದ ಆಗಿನ ಕೃಷಿ ಸಚಿವರು ಕೊಟ್ಟಂಥ ಹೇಳಿಕೆ ಪತ್ರಿಕೆಗಳಲ್ಲಿ ಬಂತು. ನಾನು ಮತ್ತು ನಮ್ಮ ಮುಖ್ಯಮಂತ್ರಿಗಳು ಯಾವುದೇ ರೀತಿಯಾಗಿರತಕ್ಕಂಥ ಔಷಧಿಯನ್ನು ನಾನು ಪಿಂಪಡಿಸಿಲ್ಲ. ನುಸಿ ರೋಗ ನಮ್ಮ ತೋಟಗಳಿಗೆ ಬಂದಿಲ್ಲ ಎನ್ನುವ ಮಾತನ್ನು ಹೇಳಿದರು. ಆದರೆ, ಅದೇ ಸಚಿವರು ಈ ಔಷಧಿಯನ್ನು ಹಾಕಬೇಕು ಎಂದು ರೈತರಿಗೆ ಆದೇಶ ಕೊಟ್ಟಿರುವುದನ್ನೂ ಹೇಳಿದರು. ಕಂಡವರ ಮಕ್ಕಳು ಸಾಯಬಹುದು; ಇವರ ಮಕ್ಕಳು ಮಾತ್ರ ಬದುಕಿರಬೇಕು ಎನ್ನುವಂತೆ ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡಿದಿರಲ್ಲಾ, ಇದು ಸರ್ಕಾರದ ನೀತಿಯೇ? ಇದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ಸರ್ಕಾರದವರು ಹೇಳಬೇಕಾಗುತ್ತದೆ. ಆದರೆ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ನುಸಿರೋಗದ ಬಗ್ಗೆ ಬಹಳ ಕಾಳಜಿ ವಹಿಸಿದರು. ಇದು ಏಕೋ ಸರಿ ಕಾಣುತ್ತಿಲ್ಲ, ನೀವು ಔಷಧಿ ಹಾಕಬೇಡಿ ಎಂದು ಅವರು ಮೊದಲೇ ಹೇಳಿಬಿಟ್ಟರು. ಹೀಗಾಗಿ ನಾವು ಔಷಧಿ ಹಾಕದೇ ಚಿಕ್ಕಮಗಳೂರು ಜಿಲ್ಲೆಯವರು ಬದುಕಿದ್ದೇವೆ. ರಾಜ್ಯಾದ್ಯಂತ ದೊಡ್ಡ ಭ್ರಷ್ಟಾಚಾರ ನಡೆದಿದೆ. 14-15 ಕೋಟಿ ರೂಪಾಯಿಗಳಲ್ಲಿ ಕೆಲಸಕ್ಕೆ ಬಾರದೇ ಇರತಕ್ಕಂಥ ಔಷಧಿಯನ್ನು ಕೊಟ್ಟು ರೈತರ ಮನೆಗಳು ಹಾಳಾಗಿ ಹೋಗಿವೆ. ಇದರ ಬಗ್ಗೆ ತನಿಖೆಯಾಗಬೇಕು. ಇದರಿಂದ ನಮಗೆ ಆಗುತ್ತಿರುವಂಥ ಹಾನಿಯನ್ನು ಸರ್ಕಾರ ಯಾವ ರೀತಿ ಭರಿಸಿಕೊಡುತ್ತದೆ ಎಂದು ಹೇಳಬೇಕು. ಅಧಿಕ ಮಾಸದಲ್ಲಿ ಬರಗಾಲ ಬಂತು ಎಂದು ನಮ್ಮಲ್ಲಿ ಒಂದು ಗಾದೆ ಇದೆ. ಹಾಗೆ, ಬರಗಾಲ ಬಂದು ನಾವು ತತ್ತರಿಸುತ್ತಿರುವಾಗ ತೆಂಗಿನಕಾಯಿಗೆ ಬೆಲೆಯೂ ಇಲ್ಲ, ಜೊತೆಗೆ ತೆಂಗಿನ ಗಿಡಗಳೂ ಬಿದ್ದುಹೋಗುತ್ತಿವೆ. ಈ ರೀತಿಯಾದರೆ ರೈತರು ಯಾವ ರೀತಿ ಬದುಕಬೇಕು ಎಂದು ಯೋಚನೆ ಮಾಡಬೇಕಾದ ಪರಿಸ್ಥಿತಿ ಇದೆ ಹಾಗಾಗಿ ತೋಟಗಾರಿಕೆ ಇಲಾಖೆಯಲ್ಲಿ ನುಸಿರೋಗದ ಬಗ್ಗೆ

ಸರ್ಕಾರದ ಸ್ಪಷ್ಟ ನಿಲುವು ಏನು? ಔಷಧಿಯನ್ನು ಸಿಂಪಡಿಸಬೇಕೋ, ಬೇಡವೋ? ನುಸಿರೋಗ ತಡೆಯಲು ಯಾವ ರೀತಿಯಾದ ಕ್ರಮವನ್ನು ಕೈಗೊಳ್ಳಬೇಕು ಎನ್ನುವುದನ್ನು ಈ ಸದನದ ಮೂಲಕ ಜನತೆಗೆ ತಿಳಿಸಬೇಕು. ಅಲ್ಲದೆ, ಕುಡಿಯುವ ನೀರಿಗೆ ಕಂದಾಯ ಇಲಾಖೆಯಿಂದ ಯಾವ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆ ಎನ್ನುವುದನ್ನೂ ಹೇಳಬೇಕಾಗುತ್ತದೆ. ಬೋರ್‌ವೆಲ್ ತೆಗೆಯಬೇಡಿ ಎಂದು ಒಂದು ಆದೇಶ ಬರುತ್ತದೆ. ಜಿಲ್ಲಾ ಪರಿಷತ್ತಿಗೆ ಹಣ ಕೊಟ್ಟಿದ್ದೇವೆ, ಮಾಡಿಕೊಳ್ಳಿ ಎಂದು ಇನ್ನೊಂದು ಆದೇಶ ಬರುತ್ತದೆ. ಇವುಗಳಲ್ಲಿ ಯಾವ ಆದೇಶನ್ನು ಪಾಲಿಸಬೇಕು ಎಂದು ಸರ್ಕಾರದಿಂದ ಕ್ಲಾರಿಫಿಕೇಷನ್ ಕೇಳಲು ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಮೂರು ತಿಂಗಳು ಸಮಯ ತೆಗೆದುಕೊಂಡರು. ಆದಾದಮೇಲೆ, ನಮ್ಮ ಒತ್ತಾಯದ ಮೇರೆಗೆ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಈ ವಿಷಯದಲ್ಲಿ ಜಿಲ್ಲಾ ಪರಿಷತ್ತಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಸರ್ಕಾರದ ಹಣ ಯಾವತ್ತಾದರೂ ಬರಲಿ, ಜಿಲ್ಲಯಲ್ಲೆರತಕ್ಕಂಥ ಕುಡಿಯುವ ನೀರಿನ ಬರವನ್ನು ನೀಗಿಸಬೇಕು ಎಂದು ಆದೇಶವನ್ನು ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯ ಕುಡಿಯುವ ನೀರಿನ ಯೋಜನೆಗೆ ಎರಡೂಮುಕ್ಕಾಲು ಕೋಟಿ ರೂಪಾಯಿಗಳು ಬಾಕಿ ಇದೆ ಎಂದು ಜಿಲ್ಲಾಧಿಕಾರಿಗಳು ವರದಿ ಕೊಟ್ಟಿದ್ದಾರೆ. ಇದನ್ನು ಯಾವ ರೀತಿ ಭರಿಸುತ್ತೀರಿ ಮತ್ತು ಮುಂದಿನ ದಿನಗಳಲ್ಲಿ ಯಾವ ರೀತಿ ಹಣವನ್ನು ಬಿಡುಗಡೆ ಮಾಡಿ ಕುಡಿಯುವ ನೀರಿನ ತೊಂದರೆಯನ್ನು ನಿವಾರಣೆ ಮಾಡುತ್ತೀರಿ ಎನ್ನುವುದನ್ನು ನೀವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಕುಡಿಯುವ ನೀರಿನ ಅಭಾವದ ಬಗ್ಗೆ ಇಂದು ಬೆಳಿಗ್ಗೆ ಚರ್ಚೆಯಾಯಿತು. ಅಭಾವ ಎಂದ ತಕ್ಷಣ ರೀಜಿನುವೇಟ್ ಮಾಡಿ ಎಂದು ಹೇಳುತ್ತಾರೆ. ಇದು ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡಲು ಹೋದ ಹಾಗೆ ಹಾಗುತ್ತದೆ. ರೀಜ್‌ನ್ನುವೇಷನ್ ಎಲ್ಲಾ ಲಾಂಗ್ ಟರ್ಮ್ ಪ್ರೋಗ್ರಾಂ. ಅದನ್ನು ಮಾಡತಕ್ಕಂಥಾದ್ದರ ಬಗ್ಗೆ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ತತ್‌ಕ್ಷಣ ಏನು ಕಾರ್ಯಕ್ರಮವನ್ನು ರೂಪಿಸುತ್ತಾರೆ ಎನ್ನುವುದನ್ನು ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ನೀರಿಲ್ಲ ಎಂದು ಎಲ್ಲರೂ ಮಾತನಾಡುತ್ತಿದ್ದೇವೆ. ನಾವು ಮಲೆನಾಡಿನಿಂದ ಬಂದಂಥ ಜನರು. ಬೆಳಿಗ್ಗೆ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಕರಾರುವಕ್ಕಾಗಿ ಜೂನ್ 7ನೇ ತಾರೀಖು ಮಳೆ ಪ್ರಾರಂಭವಾಗಬೇಕು. ಆದರೆ ಇವತ್ತು ಜುಲೈ 10ನೇ ತಾರೀಖು ಆಗಿದೆ. ಇವತ್ತಿನವರೆಗೆ ಮಲೆನಾಡಿನಲ್ಲಿ ಮಳೆ ಬಂದಿಲ್ಲ. ಇದಕ್ಕೆ ಏನು ಪರಿಹಾರ ಎನ್ನುವುದು ತಮ್ಮಿಂದ ಸಲಹೆಯ ಮೂಲಕ ಬಂದರೆ ನಾವು ಅದನ್ನು ಪರಿಶೀಲಿಸಬಹುದು. ಏನು ಮಾಡಬೇಕು, ಹೇಗೆ ಮಾಡಬೇಕು ಎಂಬುದನ್ನು ತಿಳಿಸಿ. ನಾನು ಈಗ ಕಾವೇರಿ ಒಳಹರಿವಿನ ವಿವರಗಳನ್ನು ತರಿಸುತ್ತಿದ್ದೆ. ಹೋದವರ್ಷಕ್ಕೂ ಈ ವರ್ಷಕ್ಕೂ ಹೋಲಿಸಿದರೆ ಹೇಮಾವತಿ ಒಂದರಲ್ಲೇ 24 ಸಾವಿರ ಕ್ಯೂಸೆಕ್ಸ್ ನೀರು ಕಡಿಮೆ ಬರುತ್ತಾ ಇದೆ. ಹಾಗಾದರೆ, ಪ್ರಾಜೆಕ್ಟ್‌ಗಳು ತುಂಬಬಹುದೇ? ನೀರು ಮೇಲಕ್ಕೆ ಬರುತ್ತದೆಯೇ ಎಂದು ಯೋಚನೆ ಮಾಡಬೇಕು. ಆದ್ದರಿಂದ ನೀರಿನ ಅಭಾವದ ಬಗ್ಗೆ ತಮ್ಮ ಸಲಹೆ ಏನು ಎಂದು ಹೇಳಬೇಕು.

ಶ್ರೀ ಎಸ್.ಎಸ್. ಪಾಟೀಲ್ : ನಿನ್ನೆ ಆರೋಗ್ಯ ಸಚಿವರು ಹೇಳಿದಾಗಲೇ ಹೇಳಬೇಕೆಂದು ಮಾಡಿದ್ದೆ. ಒಂದು ಯೋಜನೆಯನ್ನು ಇವತ್ತು ಪ್ರಾರಂಭ ಮಾಡಿದರೆ ಅದು 60 ವರ್ಷದಲ್ಲಿ

ಮುಗಿಯುತ್ತದೆ. ಅಷ್ಟು ಹಾಳು ಮಾಡಿದ್ದೇವೆ. ಒಂದು ಗಿಡವನ್ನು ನೆಟ್ಟು ಬೆಳೆಸಬೇಕೆಂದರೆ 60 ರಿಂದ 70 ವರ್ಷ ಬೇಕು. ಆ ಕಾರಣದಿಂದ ಅದನ್ನು ಮಾಡಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದರೆ ಆ ಯೋಜನೆಯನ್ನು ಇವತ್ತಿನಿಂದ ನಾವು ಹಾಕಿಕೊಳ್ಳಬೇಕು. ಆದರೆ ಈ ಅರಣ್ಯೀಕರಣಕ್ಕೆ ನೀವು ಏನೂ ದುಡ್ಡು ಇಟ್ಟಿಲ್ಲ. ಮಾನ್ಯ ಅರಣ್ಯ ಸಚಿವರು ಸದನದಲ್ಲಿ ಈಗ ಇಲ್ಲ. ವರ್ಷ ವರ್ಷ ಅರಣ್ಯ ಬೆಳೆಸುವುದಕ್ಕೆ ದುಡ್ಡು ಕಡಿಮೆ ಮಾಡಿದ್ದೀರಿ. ಅರಣ್ಯವನ್ನು ಬೆಳೆಸುವಂಥ ಕಡೆಗೆ ಗಮನಿಸಿಲ್ಲ. ಇವತ್ತು ನೀವು ಗಿಡ ನೆಡುವುದಕ್ಕೆ ಪ್ರಾರಂಭ ಮಾಡಿದರೆ ಅಂದರೆ ಈ ಯೋಜನೆಯನ್ನು ಪ್ರಾರಂಭಿಸಿದರೆ ಇನ್ನು 60 ವರ್ಷಗಳಿಗೆ ಮರ ಬೆಳೆಯುತ್ತದೆ. ಇದರಿಂದ ನಮ್ಮ ಮಕ್ಕಳು ಮೊಮ್ಮಕ್ಕಳು ಸುಖವಾಗಿರುತ್ತಾರೆ. ಕಳೆದ 50-60 ವರ್ಷದಿಂದ ಪರಿಸರವನ್ನು ಹಾಳು ಮಾಡಿದ್ದೇವೆ. ಮರ ಕಡಿದು ಅರಣ್ಯವನ್ನು ಹಾಳು ಮಾಡಿದ್ದೇವೆ. ಆದರೆ ಕಾಡಿನಲ್ಲಿ ಮರಗಳನ್ನು ಬೆಳೆಸತಕ್ಕಂಥ ಪ್ರಶ್ನೆಯೇ ಇಲ್ಲ. ಆದರೂ ಇವತ್ತಿನಿಂದ ಆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಹಾಗಾದರೆ ಮಾತ್ರ ನಮ್ಮ ಮಕ್ಕಳು ಮೊಮ್ಮಕ್ಕಳು ಸುಖವಾಗಿರುತ್ತಾರೆ ಎನ್ನುವ, ದೃಷ್ಟಿಯಿಂದ ಇಂತಹ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಉಪಾಧ್ಯಕ್ಷರೇ, ಕುಡಿಯುವ ನೀರಿನ ಬಗ್ಗೆ ಈಗ ಏನು ಪರಿಹಾರ, ಅದಕ್ಕೆ ಸಲಹೆ ಕೊಡಿ ಎಂದು ಮಾನ್ಯ ಸಚಿವರು ಕೇಳಿದರು. ಎಲ್ಲ ಹಳ್ಳಿಗಳಿಗೂ ಬಿಸ್ಲೇರಿ ವಾಟರ್ ಸಪ್ಲೈ ಮಾಡಿ ಎಂದು ನಾನು ಹೈಟೆಕ್ ಸರ್ಕಾರಕ್ಕೆ ಹೇಳುವುದಿಲ್ಲ. ಆ ಚಿಂತನೆ ನಮ್ಮಲ್ಲಿ ಇಲ್ಲ. ಇವತ್ತು ಅಗತ್ಯ ಇರತಕ್ಕಂಥದ್ದಕ್ಕೆ ನಾನು ಸರ್ಕಾರದವರಿಗೆ ಒತ್ತಾಯ ಮಾಡುವುದೇನೆಂದರೆ 825 ಅಡಿ ದೂರದಲ್ಲಿರತಕ್ಕಂಥ ಎಲ್ಲಾ ಕೊಳವೆ ಬಾವಿಗಳನ್ನು ಸಹಿತ ಸ್ಥಗಿತಗೊಳಿಸಬೇಕು. ಅದನ್ನು ಮಾಡಿದರೆ ಅಲ್ಪಸ್ವಲ್ಪ ಕುಡಿಯುವ ನೀರಿನ ವ್ಯವಸ್ಥೆಯನ್ನಾದರೂ ನಾವು ಮಾಡಬಹುದು. ಇದರ ಸಲುವಾಗಿ ಈ ಸದನದಲ್ಲಿ ಒಂದು ಮಸೂದೆಯನ್ನು ಸಹಿತ ನಾವು ಅಂಗೀಕಾರ ಮಾಡಿಕೊಟ್ಟಿದ್ದೇವೆ. ಬೆಳವಾಡಿ ಎನ್ನುವ ಗ್ರಾಮ ಇದೆ. ಇದರ ಬಗ್ಗೆ ಮಾನ್ಯ ಚಂದ್ರೇಗೌಡರಿಗೆ ಸಹ ಗೊತ್ತಿದೆ. ಎಲ್ಲಿ ಕುಡಿಯು ನೀರಿನ ಬಾವಿಯನ್ನು ತೋಡುತ್ತಾರೋ ಅದರಿಂದ 100 ಅಡಿ ಒಳಗೆ ಇನ್ನೊಬ್ಬರು ಬಾವಿಯನ್ನು ತೋಡಿ ಸರ್ವೀಸ್ ತೆಗೆದುಕೊಳ್ಳತಕ್ಕಂಥ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ನಾವು ಏನು ಮಸೂದೆಯನ್ನು ಅಂಗೀಕಾರ ಮಾಡಿಕೊಟ್ಟಿದ್ದೇವೆ ಅದನ್ನು ತತ್‌ಕ್ಷಣದಿಂದಲೇ ಜಾರಿಗೊಳಿಸಬೇಕಾಗುತ್ತದೆ. ಜಾರಿಗೊಳಿಸಿದ ಸಂದರ್ಭದಲ್ಲಿ ಮಾತ್ರ ನಾವು ಅಲ್ಪಸ್ವಲ್ಪ ಕುಡಿಯುವ ನೀರನ್ನಾದರೂ ಎಲ್ಲರಿಗೂ ಕೊಡಬಹುದು ಎನ್ನತಕ್ಕಂಥದ್ದು ನನ್ನ ಒಂದನೆಯ ಸಲಹೆಯಾಗಿದೆ. ಇದನ್ನು ಮಾಡಬೇಕು. ಯಾವ ಊರಿನಲ್ಲಿ ಕುಡಿಯುವ ನೀರಿನ ಅಭಾವ ಇದೆ, ಯಾವ ಊರಿನಲ್ಲಿ ಫ್ಲೋರೈಡ್ ವಾಟರ್ ಬರುತ್ತದೆ, ಅಲ್ಪಸ್ವಲ್ಪ ದೂರದಲ್ಲಿ ಆದರೂ ಚಿಂತೆ ಇಲ್ಲ, ಅಲ್ಲಿ ಕೊಳವೆ ಬಾವಿ ಕೊರೆಸಿ ನೀರು ಸಪ್ಲೈ ಮಾಡಬೇಕು. ಇದಕ್ಕೆ ಮೈನ್ಸ್ ಅಂಡ್ ಜಯಾಲಜಿ ಡಿಪಾರ್ಟ್‌ಮೆಂಟ್‌ನ್ನು ತಾವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ವಿಫಲರಕಾಗಿರತಕ್ಕಂಥವರೇ ಜಿಯಾಲಜಿ ಡಿಪಾರ್ಟ್‌ಮೆಂಟ್. ಸರಿಯಾಗಿ ಸರ್ವೆಗಳನ್ನು ಮಾಡುತ್ತಿಲ್ಲ. ಎಲ್ಲಿ ಬೇಕೋ ಅಲ್ಲಿ ಕೊಳವೆ ಬಾವಿಗಳನ್ನು ಕೊರೆಸಲಿಕ್ಕೆ ಜಾಗವನ್ನು ತೋರಿಸುತ್ತಿದ್ದಾರೆ. ಅಲ್ಪಸ್ವಲ್ಪ ದೂರದಲ್ಲಿ ಯಾವ ಕೊಳವೆ ಬಾವಿ ಕೊರೆಸಿದಾಗ 4 ಇಂಚು ಅಥವಾ 3 ಇಂಚು ನೀರು ಬರುವುದಿಲ್ಲ, 2000-2500 ಗ್ಯಾಲನ್

ನೀರು ಬರುವುದಿಲ್ಲ ಎಂದು ಹೇಳತಕ್ಕಂಥ ಲಾಯಾಲಜಿಸ್ಟ್ ಯಾರು ಇದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕಂಥದ್ದನ್ನು ಮಾಡಿ, ಹಳ್ಳಿಯಿಂದ ದೂರ ಅದರೂ ಚಿಂತೆ ಇಲ್ಲ, ಆ ದೂರದಿಂದ ನೀರನ್ನು ಸಪ್ಲೈ ಮಾಡಬೇಕು. ಈ ಎರಡಕ್ಕೂ ಸಹ ಹಣವನ್ನು ಬಿಡುಗಡೆ ಮಾಡಿದರೆ ಅಲ್ಪಸ್ವಲ್ಪ ಕುಡಿಯುವ ನೀರಿನ ಸಮಸ್ಯೆಯನ್ನು ನಾವು ಬಗೆಹರಿಸಬಹುದೆಂದು ಹೇಳಬಯಸುತ್ತೇನೆ. ಇನ್ನು ಸುಮಾರು 150 ಕೋಟಿ ರೂಪಾಯಿಗಳ ಒಂದು ದೊಡ್ಡ ಕೆಲಸವನ್ನು ಅಂದರೆ ವಾಟರ್ ರಿಜುನವೇಷನ್ ಬಗ್ಗೆ ಕೂಡ ಮಾಡುತ್ತಿದ್ದೀರಿ, ಅದನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸುವಂಥ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ ಎನ್ನುವ ಮಾತನ್ನು ಹೇಳಿ, ಈಗ ಅತೀ ತುರ್ತಾಗಿ ಮುಂದಿನ ವಾರ ಬೇಕಾಗಿರತಕ್ಕಂಥ ಶಾರ್ಟ್‌ಟರ್ಮ್ ಸೀಡ್ಸ್ ಅದನ್ನು ನೀವು ಕೊಡಲಿಕ್ಕೆ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಕೊಡದಿದ್ದರೆ ನಮ್ಮ ರೈತರು ಹಾಳಾಗಿ ಹೋಗುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿ, ಈ ಮೂರು ಸಲಹೆಗಳ ಮೇಲೆ ಚಿಂತನೆ ಮಾಡಿ ಸ್ಪಷ್ಟವಾಗಿರತಕ್ಕಂಥ ಆದೇಶಗಳನ್ನು ಜಿಲ್ಲಾಧಿಕಾರಿಗಳಿಗೆ, ಕೃಷಿ ಇಲಾಖೆಯವರಿಗೆ, ಮತ್ತು ತೋಟಗಾರಿಕೆ ಇಲಾಖೆಯವರಿಗೆ ಹಾಗೂ ಕುಡಿಯುವ ನೀರಿನ ಬಗ್ಗೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರಿಗೆ ಆದೇಶಗಳನ್ನು ಕಳುಹಿಸಿದರೆ ಅನುಕೂಲವಾಗುತ್ತದೆ; ಇದರಿಂದ ಸದ್ಯದ ಬರ ಪ್ರದೇಶಗಳಿಗೆ ತಲುಪಬಹುದು ಎನ್ನತಕ್ಕಂಥ ಮಾತನ್ನು ಹೇಳಿ, ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸುಭಾಷ್ ಕಲ್ಲೂರ್ (ಹುಮ್ನಾಬಾದ್) : ಮಾನ್ಯ ಉಪಾಧ್ಯಕ್ಷರೆ, ಈ ಬರಗಾಲ ವಿಷಯದ ಮೇಲೆ ಕಳೆದ ಮೂರು ದಿವಸಗಳಿಂದ ಚರ್ಚೆ ನಡೆಯುತ್ತಿದೆ. ನಾನು ಕೆಲವು ವಿಷಯಗಳ ಮೇಲೆ ನೇರವಾಗಿ ಮಾತನಾಡಿ ಈ ಸದನದ ಗಮನ ಸೆಳೆಯಬೇಕೆನ್ನುವ ಉದ್ದೇಶದಿಂದ ನಾನು ಮಾತನಾಡಲಿಕ್ಕೆ ನಿಂತಿದ್ದೇನೆ. ಈಗಾಗಲೇ ಬಹಳಷ್ಟು ವಿಷಯಗಳನ್ನು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ ಮತ್ತು ನಮ್ಮ ಎಲ್ಲಾ ಹಿರಿಯ ಸದಸ್ಯರು ಈ ಸದನದ ಮಾಹಿತಿಗಾಗಿ ಬಹಳಷ್ಟು ವಿಷಯಗಳನ್ನು ಮಾತನಾಡಿದ್ದಾರೆ. ನಾವೆಲ್ಲರೂ ರೈತರ ಕಳಕಳಿ ಬಗ್ಗೆ, ಗ್ರಾಮದ ಬಗ್ಗೆ ಭಾಷಣ ಮಾಡುತ್ತೇವೆ. ನಾವೆಲ್ಲಾ ರೂಢಿಯಲ್ಲಿ ಮಾತನಾಡತಕ್ಕಂಥ ಒಂದು ಗಾದೆ ಮಾತು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತಿದೆ. "ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು" ಎಂದು ಸಧ್ಯಕ್ಕೆ ನಾವೆಲ್ಲರೂ ಗ್ರಾಮೀಣ ಭಾಗದಿಂದ ಬಂದಿರತಕ್ಕಂಥ ಶಾಸಕರು. ಎಲ್ಲರು ಗ್ರಾಮದಲ್ಲಿ ವಾಸ ಮಾಡತಕ್ಕಂಥವರು, ಗ್ರಾಮೀಣ ಭಾಗದಲ್ಲಿ ಹಳ್ಳಿಗಳಲ್ಲಿ ಜೀವನ ನಡೆಸತಕ್ಕಂಥವರು. ಆದರೂ ಕೂಡ ಆ ರೈತರ ನೆರವಿಗಾಗಿ ನಾವು ಬರತಕ್ಕಂಥ ಕೆಲಸ ಏನೆಂದರೆ ಕೇಳಿದರೆ ಅದು ಸೊನ್ನೆ ಎಂದು ನನಗನ್ನಿಸುತ್ತದೆ. ಹಳ್ಳಿಗಳಲ್ಲಿರತಕ್ಕಂಥ ಹಲವಾರು ಸಮಸ್ಯೆಗಳ ಬಗ್ಗೆ ನಮ್ಮ ಎಲ್ಲ ಶಾಸಕ ಮಿತ್ರರು ಮಾತನಾಡಿದ್ದಾರೆ. ಯಾವ ಗ್ರಾಮದಲ್ಲೂ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಗ್ರಾಮದಲ್ಲಿ ದನಕರುಗಳಿಗೆ ಮೇವಿನ ವ್ಯವಸ್ಥೆ ಸರಿಯಾಗಿಲ್ಲ. ಅಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ. ಅಲ್ಲಿರತಕ್ಕಂಥ ಶಾಲೆಯಲ್ಲಿ ಬಿಸಿ ಊಟದ ವ್ಯವಸ್ಥೆ ಸರಿಯಾಗಿಲ್ಲ. ಕೊಡಲಿಲ್ಲ ಎನ್ನತಕ್ಕಂಥದ್ದನ್ನು ಶಾಲೆಯಲ್ಲಿ ಬಿಸಿ ಊಟದ ವ್ಯವಸ್ಥೆ ಸರಿಯಾಗಿಲ್ಲ, ಕೊಡಲಿಲ್ಲ ಎನ್ನತಕ್ಕಂಥದ್ದನ್ನು ಎಲ್ಲರು ಈ ಸದನದ ಗಮನಕ್ಕೆ ತಂದಿದ್ದಾರೆ. ನಾನು ಹೇಳತಕ್ಕಂಥ ವಿಷಯ ಇಷ್ಟೆ. ರೈತರು ಗ್ರಾಮಗಳಲ್ಲಿ

ಇಷ್ಟೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಒಂದು ವೇಳೆ ಇನ್ನು 2-3 ದಿವಸದಲ್ಲಿ ಮಳೆ ಬರದಿದ್ದರೆ ನಾವು ಊರಿಗೆ ಹೋಗುವುದು ಬಹಳ ಕಷ್ಟ ಇದೆ. ಊರಿಗೆ ಹೋಗಿ ಜನಗಳಿಗೆ ಏನು ಹೇಳಬೇಕೆನ್ನುವಂಥ ಒಂದು ಆತಂಕದ ಪರಿಸ್ಥಿತಿಯಲ್ಲಿ ನಾವೆಲ್ಲ ಶಾಸಕರು ಇದ್ದೇವೆ. ನಮ್ಮ ಭಾಗದಲ್ಲಿ, ನನ್ನ ಕ್ಷೇತ್ರವಾದ ಹುಮ್ನಾಬಾದ್‌ನಲ್ಲಿ, ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ ರೈತರು 80 ಪರ್ಸಂಟ್ ಬಿತ್ತನೆ ಮಾಡಿದ್ದಾರೆ. ನಮ್ಮಲ್ಲಿ ತೆಂಗು, ರಾಗಿ ಇಂಥ ಬೆಳೆಯನ್ನು ಬೆಳೆಯುವುದಿಲ್ಲ. ನಮ್ಮಲ್ಲಿ ಉದ್ದು, ಎಳ್ಳು, ಹೆಸರು, ಶೇಂಗಾ, ಕಬ್ಬು ಇಂಥ ಬೆಳೆಗಳ ಬಿತ್ತನೆಯನ್ನು ಮಾಡುತ್ತೇವೆ. ನಮ್ಮ ಸದನದಲ್ಲಿ ಮಾತನಾಡುವಾಗ ಎಷ್ಟೊಂದು ಸದಸ್ಯರು ಬೀದರ್ ಜಿಲ್ಲೆಯ ಹೆಸರನ್ನೇ ಪ್ರಸ್ತಾಪ ಮಾಡುವುದಿಲ್ಲ. ಹುಬ್ಬಳ್ಳಿ-ಧಾರವಾಡ ಎಂದ ತಕ್ಷಣ ಗುಲ್ಬರ್ಗಾ ಎಂದು ಹೇಳುತ್ತಾರೆಯೇ ವಿನಃ ಬೀದರ್ ಜಿಲ್ಲೆಯ ನೆನಪೇ ಬಹಳ ಜನರಿಗೆ ಬರುವುದಿಲ್ಲ. ಬೀದರ್ ಜಿಲ್ಲೆಗೆ ವಿಶೇಷ ಕಾಳಜಿ ವಹಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಇಷ್ಟು ಹೊತ್ತು ಸದನದಲ್ಲಿ ಇದ್ದರು. ಈಗ ಅವರು ಇಲ್ಲಿ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ಬೀದರ್‌ಗೆ ಬಂದಿದ್ದಾಗ ನಾನು ಬೀದರ್ ಜಿಲ್ಲೆಗೆ 100 ಕೋಟಿ ರೂಪಾಯಿಗಳ ಪ್ಯಾಕೇಜ್ ಕೊಡುತ್ತೇನೆ ಎಂದು ಹೇಳಿದ್ದರು. ನಾನು ಕಳೆದ ಸಾರಿ ಬಜೆಟ್ ಅಧಿವೇಶನದಲ್ಲಿ ಮಾತನಾಡುವಾಗ ನೀವು 100 ಕೋಟಿ ರೂಪಾಯಿಗಳ ಪ್ಯಾಕೇಜ್ ಮಾಡುತ್ತೇನೆಂದು ಹೇಳಿದಿರಿ. ಆದರೆ ತಾವು ಮಂಡ್ಯ ಜಿಲ್ಲೆಗೆ 300 ಕೋಟಿ ರೂಪಾಯಿಗಳ ಪ್ರಸ್ತಾಪ ಮಾಡಿದಿರಿ, ತಾವು ಅದರಲ್ಲಿ ಡಿಡಕ್ಟ್ ಮಾಡಿ 100 ಕೋಟಿ ರೂಪಾಯಿಗಳನ್ನು ನಮ್ಮ ಜಿಲ್ಲೆಗೆ ಕೊಡಿ ಎಂದು ಹೇಳಿದ್ದೆ. ಆದರೆ ಅದಕ್ಕೆ ಅವರು ಉತ್ತರ ಕೊಡಲಿಲ್ಲ. ನಾನು ಹೇಳತಕ್ಕಂಥ ಉದ್ದೇಶ ಇಷ್ಟೆ, ನಮ್ಮ ಹೈದರಬಾದ್ ಕರ್ನಾಟಕವನ್ನು ನೆಗ್ಲೆಕ್ಟ್ ಮಾಡುವ ವಿಷಯದ ಬಗ್ಗೆ ನಾನು ಪ್ರಾಸ್ತಾಪ ಮಾಡಿ ಹೇಳುತ್ತಿದ್ದೇನೆ. ರೈತರಿಗೆ ಸಂಬಂಧಪಟ್ಟ ಬಹಳಷ್ಟು ವಿಷಯಗಳು ಇವೆ. ಈ ಬೆಳೆ ವಿಮೆ ಬಗ್ಗೆ ನಮ್ಮ ನಾಯಕರು ಬಹಳಷ್ಟು ಮಾತನಾಡಿದ್ದಾರೆ. ನಮ್ಮ ಹಳ್ಳಿಗೆ ಹೋದಾಗ ಜನ ಅದೇ ಕೇಳುತ್ತಾರೆ. ಬೆಳೆ ವಿಮೆ ಯಾವಾಗ ಸಿಗುತ್ತದೆ ಸರ್ ಎಂದು ಕೇಳುತ್ತಾರೆ. ಈಗ ಕೃಷಿ ಇಲಾಖೆಯವರು ಏನು ಮಾಡಿದ್ದಾರೆಂದರೆ ಪುನಃ ಬೆಳೆ ವಿಮೆ ಮಾಡಿರಿ ಎಂದು ತುಂಬಾ ಓಡಾಡುತ್ತಿದ್ದಾರೆ. ಮೊದಲು ಬೆಳೆ ವಿಮೆ ಮಾಡಿಸಿದ ದುಡ್ಡನ್ನು ನೀವು ಕೊಟ್ಟಿಲ್ಲ. ಈಗ ಏಕೆ ಮಾಡಬೇಕು ಸರ್ ಎಂದು ಜನಗಳು ಕೇಳುತ್ತಿದ್ದಾರೆ. ಆದರಿಂದ ಕಳೆದ ಸಾಲಿನಲ್ಲಿ ಮಾಡಿಸಿದಂಥ ಬೆಳೆ ವಿಮೆಯನ್ನು ಬೇಗನೆ ಬಿಡುಗಡೆ ಮಾಡಬೇಕು. ಅದು ಹಳ್ಳಿಗಳಿಗೆ 2-3 ದಿವಸದಲ್ಲಿ ಹೋಗಬೇಕು. ಬಹುತೇಕ ನಮ್ಮ ಕಡೆ ಮೊಳಕೆಯೊಡೆದು ಸರಿಯಾಗಿ ಬೆಳೆಗಳು ಬಂದಿವೆ. ಬಿತ್ತನೆ ಸಲುವಾಗಿ ಮಾತ್ರ ಮಳೆ ಬಂದಿದೆ. ಎಲ್ಲಾ ಬೆಳೆಗಳಿಗೆ ಗುಂಡಿ ಹೊಡೆಯಬೇಕು, ಕಸ ತೆಗೆಯತಕ್ಕಂಥದ್ದು ಇದೆ. ಮೊಳಕೆಯೊಡೆದು ಬಹಳಷ್ಟು ಸುಂದರವಾಗಿ ಕಾಣುತ್ತಿದ್ದು ರೈತರು ಬಹಳ ಸಂತೋಷದಲ್ಲಿದ್ದಾರೆ.

5.40 ಪಿ.ಎಂ.

ಆದರೆ ಇನ್ನು ಎರಡು ದಿವಸದಲ್ಲಿ ಮಳೆ ಬರದಿದ್ದರೆ ಪುನಃ ಪೈರು ಒಣಗಿ ರೈತರು ಸಂಕಷ್ಟ ಪರಿಸ್ಥಿತಿಗೆ ಬರತಕ್ಕಂಥ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ನಮ್ಮ ಜಿಲ್ಲೆಯಲ್ಲಿ ಎಲ್ಲಾ ಕಡೆ ಬೋರ್‌ವೆಲ್‌ಗಳು ಇಲ್ಲ. ನೀರಿನ ಆಸರೆಯಾಗಿ ನಮ್ಮ ಜಿಲ್ಲೆಯಲ್ಲಿ ಇರತಕ್ಕಂಥ ಏಕೈಕ ಡ್ಯಾಂ ಅದು ಕಾರಂಜಾ ಡ್ಯಾಮ್. ಸುಮಾರು 30 ವರ್ಷಗಳಿಂದ ಈ

ಡ್ಯಾಮ್‌ನ ಕೆಲಸ ನಡೆಯುತ್ತಿದೆ. ಇನ್ನೂ ಮುಗಿದಿಲ್ಲ. ಸುಮಾರು 10 ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನಿಂದ ಪ್ರಾರಂಭವಾಗಿದ್ದು ಈಗ 300 ಕೋಟಿ ರೂಪಾಯಿಗಳು ಖರ್ಚು ಆದರೂ ಇನ್ನೂ ಮುಗಿದಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಇದೇ ಸಮಯದಲ್ಲಿ ನಮ್ಮ ಜಿಲ್ಲಾ ಮಂತ್ರಿಗಳಾಗಿರುವ ಶ್ರೀ ಬಸವರಾಜ ಪಾಟೀಲ್ ಅವರು ಸದನದಲ್ಲಿ ಇದ್ದಾರೆ. ಮೊನ್ನೆ ಅವರು ಪ್ರೆಸ್ ಮೀಟ್ ಮಾಡುವಾಗ ಒಂದು ಸಂತೋಷದ ವಿಷಯವನ್ನು ಹೇಳಿದರು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಕಾರಂಜಾ ಯೋಜನೆಯನ್ನು ಇನ್ನು 6 ತಿಂಗಳುಗಳಲ್ಲಿ ಕಂಪ್ಲೀಟ್ ಮಾಡುತ್ತೇವೆ ಎನ್ನತಕ್ಕಂಥ ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದರು. 6 ತಿಂಗಳು ಅಲ್ಲ 10 ತಿಂಗಳಾದರೂ ಪರವಾಗಿಲ್ಲ, ಬೀದರ್ ಜಿಲ್ಲೆಯ ಎಲ್ಲಾ ಶಾಸಕರು ಇದನ್ನು ಸ್ವಾಗತ ಮಾಡುತ್ತೇವೆ. ಬೀದರ್ ಜಿಲ್ಲೆಯ ಜನಗಳಿಗೆ ಈ ಒಂದು ಕೊಡುಗೆಯನ್ನು ಸರ್ಕಾರ ಕೊಡಲಿ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಮತ್ತೊಮ್ಮೆ ಅವರ ಗಮನಕ್ಕೆ ತರುತ್ತಿದ್ದೇನೆ ತಾವು ಈ ರೀತಿಯ ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಕೊಡಬಾರದಿತ್ತೆಂದು ನನಗನ್ನಿಸುತ್ತದೆ. ಅದು 6 ತಿಂಗಳಲ್ಲಿ ಆಗುವಂಥ ಕೆಲಸ ಅಲ್ಲ. ಒಂದು 6 ತಿಂಗಳಲ್ಲಿ ಅಥವಾ 10 ತಿಂಗಳಲ್ಲಿ ಮಾಡಿದರೆ ನಾವು ಸ್ವಾಗತ ಮಾಡುತ್ತೇವೆ. ಇದು ಆಗಬೇಕೆಂದು ನಮ್ಮ ಜಿಲ್ಲೆಯ ರೈತರ, ನಮ್ಮೆಲ್ಲರ ಬಹು ದೊಡ್ಡ ಕೋರಿಕೆಯಾಗಿದೆ. ಈ ಡ್ಯಾಮ್‌ನ್ನು ಕಂಪ್ಲೀಟ್ ಮಾಡಿದರೆ ನಮ್ಮ ಜಿಲ್ಲೆಗೆ ಏಕೈಕ ಕೊಡುಗೆಯಾಗುತ್ತದೆ. ನಾನು ಹೇಳತಕ್ಕಂಥ ಉದ್ದೇಶ ಇಷ್ಟೆ, ನಮ್ಮ ರಾಜ್ಯದ ಕೊನೆಯ ಜಿಲ್ಲೆ ನಮ್ಮ ಬೀದರ್ ಜಿಲ್ಲೆ.

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಮಾನ್ಯ ಶಾಸಕರು ಯೀಲ್ಡ್ ಆಗಬೇಕು. ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಎನ್ನುವ ಶಬ್ಧ ಬಂದಿದ್ದಕ್ಕಾಗಿ ಸ್ಪಷ್ಟೀಕರಣ ಕೊಡುತ್ತೇನೆ. ನಾನು ಹೇಳಿಕೆಯನ್ನು ಕೊಡಬಾರದೆಂದು ಮಾನ್ಯ ಶಾಸಕರು ಹೇಳುತ್ತಾ ಇದ್ದರು ನಾನೇ ಹೇಳಿದ್ದೆ ಇದು ಆರು ತಿಂಗಳುಗಳಲ್ಲಿ ಆಗುತ್ತದೆಂದು ಆ ಶಾಸಕರು ಕಾರಂಜಾ ಪ್ರಾಜೆಕ್ಟ್ ಬಗ್ಗೆ ಏನು ಇದೆ ಎಂದು ಅವರು ಇನ್ನೂ ತಿಳಿದುಕೊಂಡಿಲ್ಲ. ನಾನು ಏಕೆ ಹೇಳಿದ್ದೇನೆಂದು ಆ ವಿಷಯವನ್ನು ಎರಡು ನಿಮಿಷದಲ್ಲಿ ಹೇಳಿಬಿಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಮತ್ತು ಶಾಸಕರು ಪೊಲಿಟಿಕಲ್ ರೈವಲ್ಸ್. ನಿಮ್ಮನ್ನು ಹುಮ್ನಾಬಾದ್‌ನಲ್ಲಿ ಅವರು ಸೋಲಿಸಿ ಗೆದ್ದುಬಂದಿರುವುದು. ಅವರು ಅದರ ಬಗ್ಗೆ ಅಲ್ಲ ಆ ಶಬ್ದವನ್ನು ಅವರು ಬಳಸಿದ್ದು ನೋಡಿ, 48 ಜನ ಮಂತ್ರಿಗಳ ಪೈಕಿ ಸದನದಲ್ಲಿ ಎಷ್ಟು ಜನ ಜವಾಬ್ದಾರಿಯಿಂದ ಕುಳಿತು ಕೊಂಡಿದ್ದಾರೆಂದು ತಾವು ದಯವಿಟ್ಟು ನೋಡಿ. ಇವರಿಗೆಲ್ಲಾ ನಾಚಿಕೆ ಆಗಬೇಕು. ಈಗ ಸಮಯ 5 ಗಂಟೆ 40 ನಿಮಿಷ. ಸರ್ಕಾರ ಆಡಳಿತಕ್ಕೆ ಬಂದು ಈಗತಾನೆ ಮೂರು ವರ್ಷ ಆಗುತ್ತಿದೆ. ತಾವು ಹೇಳಿ ಮಾನ್ಯ ಕೌಜಲಗಿಯವರೆ, ತಾವು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದವರು. ಈ ಗತಿ ನಿಮಗೆ ಬರಬಹುದಾಗಿತ್ತಾ. ದಯವಿಟ್ಟು ಯೋಚನೆ ಮಾಡಿ. ಈ ರೀತಿಯಲ್ಲಿ ಸದನ ನಡೆಸುವುದರಲ್ಲಿ ಅರ್ಥ ಏನಿದೆ? ಇದು ನನಗೆ ಅರ್ಥವಾಗುತ್ತಿಲ್ಲ. ಇವರಿಗೆಲ್ಲಾ ಏನಾಗಿದೆ? ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಕುಳಿತಿದ್ದರೆ ಅವರ ಭಯಕ್ಕೋಸ್ಕರ ಎಂದು ಹೇಳಿಬಿಟ್ಟು ಇಲ್ಲಿ ಬಾಕಿದ್ದ ಮಂತ್ರಿಗಳು

ಕುಳಿತಿರುತ್ತಾರೆ. ಇವರೆಲ್ಲಾ ಎಲ್ಲಿ ಹೋಗುತ್ತಾರೆ, ಏನು ಮಾಡುತ್ತಾರೆ? ವಯಲಾರ್ ರವಿ ಬರುವುದು ತಾತ್ಕಾಲಿಕವಾಗಿ ಕ್ಯಾನ್ಸಲ್ ಆಯಿತಂತೆ. ಕಳೆದ ಮೂರು ದಿನದಿಂದ ಶ್ರೀ ಹೆಚ್.ಕೆ. ಪಾಟೀಲರು ಮುಖವನ್ನೇ ತೋರಿಸಿಲ್ಲ. ನಮಗೆ ಏನು ಎನ್ನುವುದೇ ಅರ್ಥವಾಗುತ್ತಿಲ್ಲ. ಮಾನ್ಯ ಉಪಾಧ್ಯಕ್ಷರೆ, ಕೆಲವು ಸಂಸದೀಯ ನಡವಳಿಕೆಗಳನ್ನು ಮಿನಿಮಮ್ ಆದರೂ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಈಗ ನೋಡಿ, ನಮ್ಮ ವಿರೋಧ ಪಕ್ಷದ ಸದಸ್ಯರ ಪೈಕಿ ಬಿ.ಜೆ.ಪಿ. ಯವರು, ಜನತಾದಳ 'ಯು' ನವರು, ಫ್ರಂಟ್ ಬೆಂಚ್‌ನಲ್ಲಿ ನಮ್ಮ ಹನುಮೇಗೌಡರು, ಅವರ ಹಿಂದುಗಡೆ ಇರತಕ್ಕಂಥ ಕೃಷ್ಣಪ್ಪನವರು, ಶ್ರೀ ಗುಂಡಪ್ಪ ವಕೀಲರು, ಶ್ರೀ ಚೌಡರೆಡ್ಡಿಯವರು ಹೇಗೆ ಕುಳಿತಿದ್ದೇವೆ ನೋಡಿ ನೀವು ಏನಾದರೂ ಸೂಚನೆ ಕೊಡಿ ಸ್ವಾಮಿ. ಸ್ವಲ್ಪ ಸೀರಿಯಸ್‌ನೆಸ್ ಬರಬೇಕಾಗುತ್ತದೆ.

ಉಪಾಧ್ಯಕ್ಷರು : ನೀವು ಹೇಳುವುದನ್ನು ಕೇಳುವುದಕ್ಕೆ ಸಾಕಷ್ಟು ಜನ ಮಂತ್ರಿಗಳು ಇಲ್ಲಿ ಇದ್ದಾರೆ. ಮತ್ತೆ ನಿಮಗೆ ಯಾರು ಬೇಕೋ ಅವರಿಗೆ ಹೇಳಿ ಕಳುಹಿಸುತ್ತೇವೆ.

ಶ್ರೀಮತಿ ನಫೀಸಾ ಫಜಲ್ : ಮಾನ್ಯ ಉಪಾಧ್ಯಕ್ಷರೆ, ನಾವು ಇಲ್ಲಿ....

ಶ್ರೀ ಪಿ.ಜಿ.ಆರ್. ಸಿಂಧ್ಯ: ನಿಮ್ಮ ಸೀಟ್‌ನಲ್ಲಿ ಕುಳಿತು ಮಾತನಾಡಿಯಮ್ಮ ಮಾನ್ಯ ಉಪಾಧ್ಯಕ್ಷರೆ, ಅವರಿಗೆ ಮಿನಿಮಮ್ ಪ್ರೊಸೀಜರ್ ಆದರೂ ಹೇಳಿಕೊಡಿ. ಅವರ ಸೀಟ್‌ನಲ್ಲಿ ನಿಂತು-ಕೊಂಡು ಮಾತನಾಡುವುದಕ್ಕೆ ಹೇಳಿ.

ಗೊಂದಲ

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಉಪಾಧ್ಯಕ್ಷರೆ, ಮಂತ್ರಿಗಳಾಗಿ ಅವರು ಅವರ ಸೀಟ್‌ನ್ನು ಬಿಟ್ಟು ಬೇರೆ ಸೀಟ್‌ನಲ್ಲಿ ಮಾತನಾಡುತ್ತಿದ್ದಾರೆ. ಇದರಿಂದ ಆ ಮಂತ್ರಿಗಳಿಗೆ ಎಷ್ಟು ಸೌಜನ್ಯ ಇದೆ ಎನ್ನತಕ್ಕಂಥದ್ದು ಅರ್ಥವಾಗುತ್ತದೆ. ಇವರು ಬಾಕಿಯವರಿಗೆ ಮಾರ್ಗದರ್ಶನ ಮಾಡುವವರು. ಇವರು ಹೇಳುತ್ತಿದ್ದಾರಲ್ಲಾ ಬಾಕಿ ಸಂಗತಿಗಳನ್ನು ಬಾಕಿಯವರಿಗೆ. ನಾವು ಕೇಳುವುದು ಇಷ್ಟೆ. ಅವರಿಗೆ ಏನು ಕೇಳಿದರೂ ಮಾಡುವುದಿಲ್ಲ ಅದು ಗೊತ್ತಿದೆ. ಏನು ಹೇಳುತ್ತಿದ್ದಾರೆ ಎನ್ನುವುದನ್ನು ಕೇಳುವ ತಾಳ್ಮೆ ಇಲ್ಲದಂಥ ಪರಿಸ್ಥಿತಿ ಬಂದರೆ ಈ ಸರ್ಕಾರಕ್ಕೆ ನಾವು ಏನು ಹೇಳಬೇಕು, ತಾವೇ ಆಲೋಚನೆ ಮಾಡಿ. ಬರ ಎಂದು ಹೇಳಿದರೆ ಅದು ಅತ್ಯಂತ ಗಂಭೀರವಾದ ವಿಚಾರ. ಈ ಸರ್ಕಾರದವರಿಗೆ ಚೇರ್‌ನಲ್ಲಿ ಕುಳಿತುಕೊಳ್ಳುವುದಕ್ಕೆ ಬರ ಬಂದಿದೆಯೇ? ಇವರು ಬಂದು ಕುಳಿತುಕೊಳ್ಳಬಹುದಲ್ಲಾ. ಇಡೀ ರಾಜ್ಯದ ಮೂಲಭೂತ ಸಮಸ್ಯೆಗಳ ಬಗ್ಗೆ ಇಲ್ಲಿ ಪ್ರಸ್ತಾಪವಾಗುತ್ತಿದೆ. ರಾಜ್ಯದ ಮೂಲೆ ಮಾಲೆಯಲ್ಲಿರುವ ಸಮಸ್ಯೆಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ ಇವರಿಗೆ ಕೇಳುವಷ್ಟು ಸೌಜನ್ಯವಿಲ್ಲ. ಈ ಸರ್ಕಾರ ಏನೂ ಕೆಲಸ ಮಾಡಲಿಲ್ಲವೆನ್ನುವುದು ಈಗ ಜನರಿಗೆ ಗೊತ್ತಾಗಿದೆ. ಅದನ್ನು ಮುಂದೆ ನೋಡೋಣ. ಆದರೆ ಒಂದು ಸೌಜನ್ಯಕ್ಕಾದರೂ ಮಂತ್ರಿಗಳಾದರು ಬಂದು ಸದನದಲ್ಲಿ ಕುಳಿತುಕೊಳ್ಳಬೇಕಲ್ಲವೇ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಬರದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಕೊಡಬೇಕೆಂದು ನಿನ್ನೆಯಿಂದ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಬೆಳಿಗ್ಗೆಯಿಂದ ರೆವಿನ್ಯೂ ಮಿನಿಸ್ಟರ್ ಸದನದಲ್ಲಿ ಕಾಣಿಸಲಿಲ್ಲ. ಅಗ್ರಿಕಲ್ಚರಲ್ ಮಿನಿಸ್ಟರ್, ಫೈನಾನ್ಸ್ ಮಿನಿಸ್ಟರ್,

ಹೋಂ ಮಿನಿಸ್ಟರ್ ಇವರೆಲ್ಲಾ ಮುಂದುಗಡೆ ಕುಳಿತುಕೊಂಡು ಕೇಳಿ ನೋಟ್ಸ್ ತೆಗೆದುಕೊಂಡು ಇವೆಲ್ಲಾ ಮಿನಿಮಮ್ ನಡವಳಿಕೆ ಆಗಬೇಕು. ಈ ರೀತಿ ಮಾಡದಿರುವುದರಿಂದ ಆಫೀಸರ್ಸ್‌ಗೆ ಏನು ಸಿಗ್ನಲ್ ಹೋಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಸದನದಲ್ಲಿ ರೆವಿನ್ಯೂ ಸೆಕ್ರೆಟರಿ ಇರುವುದಿಲ್ಲ, ಆರ್‌ಡಿಪಿಆರ್ ಸೆಕ್ರೆಟರಿ ಇಲ್ಲಿ ಇರುವುದಿಲ್ಲ, ಬೇಸಿಗೆಯಲ್ಲಿ ಡ್ರಿಂಕಿಂಗ್ ವಾಟರ್ ಸಮಸ್ಯೆ ಬಗ್ಗೆ ಚರ್ಚೆಯಾಗುತ್ತಿದೆ. ಯಾರೋ ಡೆಪ್ಯೂಟಿ ಸೆಕ್ರೆಟರಿಯವರನ್ನು ಇಲ್ಲಿಗೆ ಕಳುಹಿಸಿರುತ್ತಾರೆ. ಎಂ.ಎಲ್.ಎ.ಗಳಿಗೆ ಏನು ಗೌರವ ಇರುತ್ತದೆ? ದಯವಿಟ್ಟು ಹೇಳಿ. ಮಂತ್ರಿಗಳಿಗೇ ಕೇರ್ ಮಾಡುವುದಿಲ್ಲ. ಮಂತ್ರಿಗಳು ಆರ್ಡರ್ ಮಾಡಿದರೆ ಒಂದು ಸೆಕ್ಷನ್ ಹಾಕಿಬಿಟ್ಟು ಕಾನೂನು ಪ್ರಕಾರ ಆಗುವುದಿಲ್ಲ, ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿರಿ ಎಂದು ಹೇಳುತ್ತಾರೆ. ರೆಡಿಮೇಡ್ ಆನ್ಸರ್ ಲಾ ಡಿಪಾರ್ಟ್‌ಮೆಂಟ್‌ನಿಂದ ಬರುತ್ತದೆ. ಶ್ರೀ ರಮಾನಾಥ ರೈ ಶ್ರೀ ಚಂದ್ರೇಗೌಡರು ಇವರೆಲ್ಲಾ ನಮ್ಮ ಸೀನಿಯರ್ ಲೀಡರ್‌ಗಳು. ನಾನು ಇವರಿಗೆಲ್ಲಾ ಕೇಳಿಕೊಳ್ಳುವುದೇನೆಂದರೆ ಸೀರಿಯಸ್ ಡಿಬೇಟ್ ಆಗತಕ್ಕಂಥ ವಿಚಾರದಲ್ಲಿ ರೂಲಿಂಗ್ ಪಾರ್ಟಿ ಸೈಡ್‌ನಿಂದ ಈ ತರಹ ಆಬ್‌ಸೆನ್ಸ್ ಇದ್ದರೆ ಹೇಗೆ? ನೋಡಿ, ನಾವೆಲ್ಲಾ ಮೆಂಬರ್ಸ್ ಸದನದಲ್ಲಿರಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಮಾನ್ಯ ಖರ್ಗೆಯವರು ಇದನ್ನು ರೈಸ್ ಮಾಡಿದರು. ಇದನ್ನು ನಾನು ರೈಸ್ ಮಾಡಲಿಲ್ಲ. ಮಧ್ಯಾಹ್ನ ಊಟ ಆದಮೇಲೆ ಮೂರೂವರೆ ಗಂಟೆ ಆದಮೇಲೆ ಸ್ವಲ್ಪ ಹೊತ್ತು ನಿದ್ರೆ ಮಾಡಬಹುದೆಂದು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಇಷ್ಟು ಹೊತ್ತು ಆದರೂ ಬಂದು ಪಾರ್ಟಿಸಿಪೇಟ್ ಮಾಡುವುದಿಲ್ಲವೆಂದು ಹೇಳಿದರೆ ಸರ್ಕಾರಕ್ಕೆ ಯಾವ ಭಾಷೆಯಲ್ಲಿ ಹೇಳಬೇಕೆಂದು ನಮಗೂ ಸಹಿತ ಅರ್ಥವಾಗುತ್ತಿಲ್ಲ. ಇನ್ನು ಬೇರೆ ಸಂಸದೀಯ ಪದಗಳನ್ನು ಹೇಳಬೇಕೆನ್ನುವುದಾದರೆ ಈಗ ನಾನು ಹೊಸ ಡಿಕ್ಷನರಿಯನ್ನು ಹುಡುಕಬೇಕಾಗುತ್ತದೆ. ತಮ್ಮ ಅಧ್ಯಕ್ಷರ ಪೀಠದಿಂದ ಸೂಚನೆ ಹೋದಾಗ ಅದು ಪತ್ರಿಕೆಗಳಲ್ಲಿ ಬರುತ್ತದೆ. ಆಗ ಏನಾಗುತ್ತದೆಂದು ಹೇಳಿದರೆ ಸ್ವಲ್ಪ ಸೆನ್ಸ್ ಆಫ್ ಶೇಮ್ ಆಗುತ್ತದೆ. ಆ ಸೆನ್ಸ್ ಆಫ್ ಶೇಮ್ ಇರತಕ್ಕಂಥವರು ಅಟ್‌ಲೀಸ್ಟ್ ಬಂದು ಕುಳಿತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಉಪಾಧ್ಯಕ್ಷರೆ, ನನ್ನ ಒಂದು ವಿನಂತಿ ಏನೆಂದರೆ, ಈಗ ಪ್ರತಿ ಮಾತು ಮಾತಿಗೂ ಸರ್ಕಾರದ ಕಡೆಯಿಂದ ಏನು ಬರುತ್ತದೆ ಎಂದರೆ, ಮಂತ್ರಿಗಳು ಮೇಲ್ಮನೆಯಲ್ಲಿ ಇದ್ದಾರೆಂದು ಹೇಳುತ್ತಾರೆ. ಇಷ್ಟೆಲ್ಲಾ ಪತ್ರಗಳು ನಮಗೆ ಬರುತ್ತದೆ. ದಯವಿಟ್ಟು ನಾಳೆಯಿಂದ ಮೇಲ್ಮನೆಗೆ ಯಾವ ಯಾವ ಮಂತ್ರಿಗಳನ್ನು ಅಲಾಟ್ ಮಾಡಲಾಗಿದೆ, ವಿಧಾನಸಭೆಗೆ ಯಾವ ಮಂತ್ರಿಗಳನ್ನು ಅಲಾಟ್ ಮಾಡಲಾಗಿದೆ ಎನ್ನುವಂಥದ್ದರ ಮಾಹಿತಿಯನ್ನು ಸೌಜನ್ಯಕ್ಕಾದರೂ ಕಳುಹಿಸಿಕೊಟ್ಟರೆ, ಅವರು ಬರಲಿ ಅಥವಾ ಬಿಡಲಿ ಅದು ಬೇರೆ ಪ್ರಶ್ನೆ. ಮೇಲ್ಮನೆಯಲ್ಲಿ ಯಾರು ಇರುತ್ತಾರೆ ಇಲ್ಲಿ ಯಾರು ಇರುತ್ತಾರೆಂದು ನಮಗಾದರೂ ಗಮನದಲ್ಲಿರುತ್ತದೆ. ಇಲ್ಲಿ ಬಂದ ತಕ್ಷಣ ಸರ್ಕಾರದ ಕಡೆಯಿಂದ ಕೆಳಗಿನ ಮನೆಯಲ್ಲಿ ಇದ್ದಾರೆಂದು ಹೇಳುತ್ತಾರೆ. ಇನ್ನು ಯಾವ ಮನೆಯಲ್ಲಿದ್ದಾರೆಂದು ಹುಡುಕುವುದು ಬಹಳ ಕಷ್ಟ ಸರ್.

ಉಪಾಧ್ಯಕ್ಷರು : ಎರಡು ಸದನದಲ್ಲಿ ಸಚಿವರುಗಳು ಇರಬೇಕಾಗುತ್ತದಲ್ಲಾ ನಾಳೆಯಿಂದ ಸರಿಯಾಗಿ ಸಚಿವರುಗಳು ಸದನಕ್ಕೆ ಬರುವುದಕ್ಕೆ ಈ ಮುಖಾಂತರ ನಾನು ಸೂಚನೆಯನ್ನು ಕೊಡುತ್ತಿದ್ದೇನೆ. ಮತ್ತೇ ಯಾರ್‍ಯಾರು ಮಂತ್ರಿಗಳು ಎಲ್ಲಿ ಇರುತ್ತಾರೆ ಎನ್ನುವುದನ್ನು ಬೇಕಾದರೆ

ಹೇಳಬಹುದು. ಅದೇನೂ ತೊಂದರೆ ಇಲ್ಲ.

ಶ್ರೀಮತಿ ನಫೀಸಾ ಫಜಲ್ : ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಮಂತ್ರಿಗಳು ರೋಸ್ಟರ್ ಪ್ರಕಾರ ಸರಿಯಾಗಿ ಸದನಕ್ಕೆ ಬರುತ್ತಿದ್ದಾರೆ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಬರಗಾಲದ ಬಗ್ಗೆ ಚರ್ಚೆಯಾಗುತ್ತಿದೆ. ಬರಗಾಲದ ಸಬ್ಜೆಕ್ಟ್ ಇರತಕ್ಕಂಥದ್ದೇ ರೆವಿನ್ಯೂ ಮಿನಿಸ್ಟರ್‌ರವರಿಗೆ ನಾವೆಲ್ಲಾ ಇದನ್ನು ಇಲ್ಲಿ ಎರಡು ವರ್ಷದಲ್ಲಿ ಫೇಸ್ ಮಾಡಿದ್ದೇವೆ. ಪ್ರಕೃತಿ ವಿಕೋಪದ ಸಂದರ್ಭ ಬಂದಾಗ ಜವಾಬ್ದಾರಿ ಇರತಕ್ಕಂಥ ಮಂತ್ರಿಗಳೇ ರೆವಿನ್ಯೂ ಮಂತ್ರಿಗಳು. ನಿನ್ನೆಯಿಂದ ನೋಡುತ್ತಿದ್ದೇನೆ. ರೂಲ್-69 ಅಡಿಯಲ್ಲಿ ಈ ಚರ್ಚೆ ಪ್ರಾರಂಭವಾಗಿದೆ. ಶ್ರೀ ಮಲ್ಲಿಕಾರ್ಜುನ ನಾಗಪ್ಪನವರಿಗೆ ಸ್ವತಂತ್ರ ನಿರ್ವಹಣೆ ಕೊಟ್ಟಿಲ್ಲ. ಸುಮ್ಮನೆ ಕಂದಾಯ ಇಲಾಖೆಯ ಇನ್‌ಚಾರ್ಜ್ ಕೊಟ್ಟಿದ್ದಾರೆ.

ಉಪಾಧ್ಯಕ್ಷರು : ತಾವು ಮಾತನಾಡಿದನ್ನೆಲ್ಲಾ ಕ್ರೋಢೀಕರಿಸಿ ಅವರು ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಕಂದಾಯ ಮಂತ್ರಿಗಳು ಮೇಲ್ಮನೆಯಲ್ಲಿ ಇದ್ದಾರೆ. ಅಲ್ಲಿ ಚರ್ಚೆ ನಡೆಯುತ್ತಿದೆ.

ಶ್ರೀ ಬಿ. ಸೋಮಶೇಖರ್ : ಮೇಲ್ಮನೆಯಲ್ಲಿ ಕುಳಿತಿದ್ದಾರೆಂದರೆ ಈ ಜನಪ್ರತಿನಿಧಿಗಳು ಇರತಕ್ಕಂಥ ಈ ಮನೆಗೆ ಎಷ್ಟು ಗೌರವವಿದೆ ಎನ್ನತಕ್ಕಂಥದ್ದನ್ನು ಹೇಳಿ. ಅಲ್ಲಿ ಬೇಕಾದರೆ ಸ್ಟೇಟ್‌ಮಿನಿಸ್ಟರ್ ಇರಲಿ. ಆದರೆ ಈ ಸದನದಲ್ಲಿ ಜನ ಪ್ರತಿನಿಧಿಗಳು ಚರ್ಚೆ ಮಾಡುವಾಗ ಇಷ್ಟೊಂದು ಗಂಭೀರವಾಗಿ ವಿಚಾರ ಚರ್ಚೆ ಮಾಡುವಾಗ ನಿನ್ನೆಯಿಂದಲೇ ಮಂತ್ರಿಗಳು ಇಲ್ಲ ಎಂದರೆ ಬಹಳ ಹಗುರವಾಗಿ ತೆಗೆದುಕೊಳ್ಳುತ್ತಿದ್ದೀರಿ. ಇದರಲ್ಲಿ ಕೃಷಿ ಮಂತ್ರಿಗಳಿಗೂ ಜವಾಬ್ದಾರಿ ಇದೆ. ಆದರೆ ಎಲ್ಲ ಕೋ ಆರ್ಡಿನೇಟ್ ಮಾಡತಕ್ಕಂಥದ್ದು, ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸತಕ್ಕಂಥದ್ದು, ಸಿಆರ್‌ಎಫ್ ಹೆಡ್ ಏನು ಇದೆ ಅದು ರೆವಿನ್ಯೂ ಮಂತ್ರಿಗಳಿಗೆ ಬರುತ್ತದೆ. ಕಂದಾಯ ಮಂತ್ರಿಗಳೇ ಸದನದಲ್ಲಿ ಇಲ್ಲ. ಸ್ಟೇಟ್ ಮಿನಿಸ್ಟರ್ ಇದ್ದಾರೆಂದು ಹೇಳಿದರು. ರಾಜ್ಯ ಸಚಿವರಿಗೆ ಸ್ವತಂತ್ರ ನಿರ್ವಹಣೆ ಕೊಟ್ಟಿಲ್ಲ. ಅವರಿಗೆ ಸ್ವತಂತ್ರ ನಿರ್ವಹಣೆ ಅಧಿಕಾರ ಕೊಟ್ಟಿದ್ದರೆ ಅವರು ಜವಾಬ್ದಾರರಾಗುತ್ತಿದ್ದರು. ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ಗೆ ಸ್ವತಂತ್ರ ನಿರ್ವಹಣೆ ಅಧಿಕಾರ ಕೊಟ್ಟಿದ್ದರೆ ಅವರು ಜವಾಬ್ದಾರರಾಗುತ್ತಿದ್ದರು. ಯಾವುದೋ ರಾಜಕೀಯ ಒತ್ತಡಕ್ಕೆ ಕೊಟ್ಟಿದ್ದನ್ನು ವಾಪಾಸ್ಸು ಕಸಿದುಕೊಂಡರು.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಶ್ರೀ ವಿ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು.)

ಶ್ರೀ ಬಸವರಾಜ ಪಾಟೀಲ್ (ಇಂಧನ ಸಚಿವರು) : ದಯವಿಟ್ಟು ಮಾನ್ಯ ಶಾಸಕರು ಯೀಲ್ಡ್ ಆಗಬೇಕು. ಮಾನ್ಯ ಅಧ್ಯಕ್ಷರೆ, ಶ್ರೀ ಕಲ್ಲೂರು ಅವರು ಆ ಪದವನ್ನು, ನನ್ನ ಮೇಲೆ ನೇರವಾಗಿ ಉಪಯೋಗ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಟ್ಟಿಗೆ ಮಾತನಾಡುವಾಗ ರೆಕಾರ್ಡ್ ಮಾಡಿಕೊಳ್ಳಬೇಡಿ.

ಗೊಂದಲ

ಶ್ರೀ ಬಸವರಾಜ್ ಪಾಟೀಲ್ : ನಾನು ಏಕೆ ಹೇಳುತ್ತಿದ್ದೇನೆಂದರೆ, ಇಡೀ ರಾಜ್ಯದ ಜನರಿಗೆ ಮಂತ್ರಿಗಳು ಸುಳ್ಳು ಹೇಳಿದ್ದಾರೆ ಎನ್ನುವ ಭಾವನೆ ಬರಬಾರದು, ಕೇಂದ್ರ ಸರ್ಕಾರದವರು ಒಂದು ಹೊಸ ಯೋಜನೆಯನ್ನು ರೂಪಿಸಿದ್ದಾರೆ.

ಗೊಂದಲ

ಅಧ್ಯಕ್ಷರು : ಈ ರೀತಿ ನಾವು ಮಾತನಾಡುವುದನ್ನು ಟಿವಿಯಲ್ಲಿ ನೋಡಿದ ಮತದಾರರು ಏನೆಂದು ಕೊಳ್ಳುತ್ತಾರೆ?

ಶ್ರೀ ಅಪ್ಪಾಜಿ ಎಸ್ ನಾಡಗೌಡ : ರೆಕಾರ್ಡ್‌ನಿಂದ ಅದು ತೆಗೆಯಬೇಕು.

ಅಧ್ಯಕ್ಷರು : ನಾನು ರೆಕಾರ್ಡ್ಸ್ ತೆಗೆಸಿ ನೋಡಿ ಅದು ಅನ್‌ಪಾರ್ಲಿಮೆಂಟರಿ ಇದ್ದರೆ ಅದನ್ನು ರಿಮೂವ್ ಮಾಡಿಸುತ್ತೇನೆ. ಮಾನ್ಯ ಕಲ್ಲೂರ್‌ರವರೇ, ತಾವು ಮುಂದುವರೆಸಿ.

ಶ್ರೀ ಬಸವರಾಜ್ ಹೆಚ್ ಪಾಟೀಲ್ : ನೇರವಾಗಿ ನನ್ನ ಮೇಲೆ ಅಪಾದನೆ ಮಾಡಿರುವಾಗ.

ಅಧ್ಯಕ್ಷರು : ಆಯಿತು ಬಿಡಿ ಈಗಾಲೇ ಕಡತ ತೆಗಿಸಿಕೊಂಡು ಇಲ್ಲಿಯೇ ಜಡ್ಜ್‌ಮೆಂಟ್ ಕೊಟ್ಟು ಅದು ಅನ್‌ಪಾರ್ಲಿಮೆಂಟರಿ ಇದ್ದರೆ ಇಲ್ಲಿಯೇ ರಿಮೂವ್ ಮಾಡಿಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ : ನನ್ನ ಎದುರಿನಲ್ಲಿ ಆಪಾದನೆ ಮಾಡಿದಾಗ ನಾನು ಅದರ ಬಗ್ಗೆ ಕ್ಲಾರಿಫಿಕೇಷನ್ ಮಾಡುವುದಕ್ಕೆ ಅವಕಾಶ ಇದೆಯೋ ಇಲ್ಲವೋ ಹೇಳಿ. ಎರಡು ನಿಮಿಷ ಅವಕಾಶ ಕೊಟ್ಟರೆ ನಾನು ಹೇಳಿಬಿಡುತ್ತೇನೆ.

ಗೊಂದಲ

ಅಧ್ಯಕ್ಷರು : ಒಟ್ಟಿಗೆ 6-7 ಜನ ಮಾತನಾಡುತ್ತಾರೆ ಯಾರದನ್ನೂ ಬರೆದುಕೊಳ್ಳಬೇಡಿ, ನಾನು ಯಾರಿಗೆ ಪರ್ಮಿಷನ್ ಕೊಡುತ್ತೇನೆ ಅವರದ್ದು ಮಾತ್ರ ಬರೆದುಕೊಳ್ಳಿ ಇಲ್ಲದಿದ್ದರೆ ಬರೆದುಕೊಳ್ಳಬೇಡಿ. ಕಲ್ಲೂರು ಅವರೇ, ತಾವು ಮುಂದುವರೆಸಿ.

ಶ್ರೀ ಕರಿಯಣ್ಣ : ಮಂತ್ರಿಯವರಿಗೆ ನೇರವಾಗಿ ಹೇಳಿದಾಗ ಇದು ಹೌದು ಅಲ್ಲವೊ ಎಂದು ಹೇಳುವುದಕ್ಕೆ ಅವಕಾಶ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು : ಆ ಟೈಪ್ ಮಾತನಾಡಬಾರದು I am going to remove those things ಈಗ ನಾವು ಇಲ್ಲಿ ಒಂದು ಸಲ ಹೇಳಿದ ಮೇಲೆ ಪೇಪರ್‌ನಲ್ಲಿ ಬರುವುದಕ್ಕೆ ಆಗುವುದಿಲ್ಲ. ನಾನು ಆ ಪದವನ್ನು ಕಡತದಿಂದ ತೆಗೆದು ಹಾಕಿದ್ದೇನೆ.

ಶ್ರೀ ಬಸವರಾಜ್ ಪಾಟೀಲ್ : ತಾವು ನನಗೆ ಒಂದೆರಡು ನಿಮಿಷ ಅವಕಾಶ ಕೊಟ್ಟರೆ ನಾನು ಏನು ಹೇಳಿದ್ದೇನೆ ಎಂಬುದನ್ನು ಈ ಸದನದ ಮೂಲಕ ಕರ್ನಾಟಕದ ಜನತೆಗೆ ತಿಳಿಸಲು ಬಯಸುತ್ತೇನೆ. ನಾನು ಬೇರೆ ಏನೂ ಹೇಳುವುದಿಲ್ಲ ಯಾರ ಮೇಲೆ ಅಪವಾದ ಇಲ್ಲ,

ಗೊಂದಲ

ಅಧ್ಯಕ್ಷರು : ಮಾನ್ಯ ಮಂತ್ರಿಗಳ ಮೇಲೆ ನೇರವಾದ ಆಪಾದನೆ ಮಾಡಿದಾಗ ವಿವರಣೆ ಕೊಡುವುದು ಅವರ ಕರ್ತವ್ಯ. ಒಂದು ನಿಮಿಷ ಮಾತನಾಡುತ್ತಾರೆ.

ಗೊಂದಲ

ಶ್ರೀ ಕರಿಯಣ್ಣ : ಎಲ್ಲವನ್ನೂ ಕಡತ ನೋಡಿ ಹೇಳುವುದಕ್ಕಾಗುತ್ತದೆಯೇ? ಈಗ ಅವರಿಗೆ ಗೊತ್ತಿರುವುದನ್ನು ಹೇಳುವುದಕ್ಕೆ ಅವಕಾಶ ಕೊಡಿ.

ಗೊಂದಲ

ಶ್ರೀ ಬಸವರಾಜ್ ಪಾಟೀಲ್ : ನಮ್ಮ ಮಾನ್ಯ ಸದಸ್ಯರು 30 ವರ್ಷಗಳಿಂದ ನೆನಗುದಿಗೆ ಬಿದ್ದಂಥ ಕಾರಂಜ ಪ್ರಾಜೆಕ್ಟ್ 6 ತಿಂಗಳಲ್ಲಿ ಪೂರ್ತಿಗೊಳಿಸತ್ತೇವೆ ಎನ್ನುವ ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಸ್ಟೇಟ್‌ಮೆಂಟ್ ಅನ್ನು ಬೀದರ್ ಜಿಲ್ಲಾ ಜನರಿಗೆ ಮಾಡಿದ್ದಾರೆಂದು ಹೇಳಿದರು.

ಶ್ರೀ ಸುಭಾಷ್ ಕಲ್ಲೂರ್ : ವೈಯುಕ್ತಿಕವಾಗಿ ನಾನು ಮಾತನಾಡಿಲ್ಲ.

ಶ್ರೀ ಬಸವರಾಜ್ ಹೆಚ್ ಪಾಟೀಲ್ : ನಾನು ಏಕೆ ಆ ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ, ಅಂದರೆ ಕೇಂದ್ರ ಸರ್ಕಾರ ಹೊಸದಾದ ಯೋಜನೆ ರೂಪಿಸಿದ್ದು, ಯಾವ ಪ್ರಾಜೆಕ್ಟ್‌ಗಳು ನೀರಾವರಿ ಯೋಜನೆಗಳು ಮುಗಿಯುವ ಹಂತದಲ್ಲಿವೆ ಅಂಥವುಗಳಿಗೆ ಕೇಂದ್ರ ಸರ್ಕಾರ ಸಂಪೂರ್ಣವಾದ ಸಾಲ ಸಹಾಯ ಮಾಡುತ್ತದೆ. ಮೂರು ಕೋಟಿ ರೂಪಾಯಿ ಈಗಾಗಲೇ ಆ ಯೋಜನೆಗೆ ವೆಚ್ಚವಾಗಿದೆ. ಇನ್ನು ಒಂದು ನೂರು ಕೋಟಿ ರೂಪಾಯಿ ಬೇಕಾಗಿದೆ. ರಾಜ್ಯ ಸರ್ಕಾರದಿಂದ ನೀರಾವರಿ ಇಲಾಖೆಯಿಂದ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪ್ರಪೋಸಲ್ ಹೋಗಿದೆ. ಒಂದು ವಾರ ಅಥವಾ ಒಂದು ತಿಂಗಳಲ್ಲಿ ಆ ದುಡ್ಡು ಬಂದ ಮೇಲೆ ನಾನು ಅಧಿಕಾರಿಗಳ ಜೊತೆಗೆ ಚರ್ಚಿಸುತ್ತೇನೆ. ಅವರು ನನಗೆ ಹೇಳಿದ ಪ್ರಕಾರ 15 ಕಿಲೋ ಮೀಟರ್ ರೈಟ್ ಬ್ಯಾಂಕ್ ಕೆನಾಲ್‌ನಷ್ಟು ಉಳಿದಿದ್ದು, ಉಳಿದ ಎಲ್ಲಾ ಕಾರಂಜಿ ಪ್ರಾಜೆಕ್ಟ್ ಕೆಲಸ ಪೂರ್ತಿಯಾಗಿದೆ, ಕೇಂದ್ರ ಸರ್ಕಾರದ ದುಡ್ಡು ನಾವು ಯಾವ ರೀತಿಯಿಂದ ಕೆಲಸ ಮಾಡುತ್ತೇವೆಯೋ ಆ ರೀತಿಯಾಗಿ ದುಡ್ಡು ರಿಲೀಸ್ ಆಗುತ್ತದೆ. ಅದಕ್ಕಾಗಿ ನಾವು ಆರು ತಿಂಗಳಲ್ಲಿ ಪೂರ್ತಿಗೊಳಿಸುತ್ತೇವೆಂದು ನಾನು ಆಶ್ವಾಸನೆ ಕೊಟ್ಟಿದ್ದೇನೆ, ಮಾನ್ಯ ಶಾಸಕರು ಇದನ್ನು ತಿಳಿದುಕೊಳ್ಳಬೇಕು, ಈ ಸದನ ಮೂಲಕ ಈ ಮಾತನ್ನು ಹೇಳುತ್ತಾ, ಇಡೀ ಕರ್ನಾಟಕದ ಜನತೆಗೆ ಈ ವಿಷಯ ತಿಳಿಸಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಕಲ್ಲೂರ್‌ರವರೇ ತಾವು ಮಾತನಾಡಿ.

ಶ್ರೀ ಸುಭಾಷ್ ಕಲ್ಲೂರ್ : ಆರು ತಿಂಗಳಲ್ಲಿ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದರು ಇದಕ್ಕಾಗಿ ನಾನು ಅವರನ್ನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಇಂಥ ಒಂದು ದೊಡ್ಡ ಪ್ರಾಜೆಕ್ಟ್‌ನ್ನು ನಮ್ಮ ಬೀದರ್ ಜಿಲ್ಲೆಯ ರೈತರಿಗೆ ಕೊಡುವಾಗ ನಾನು ಸ್ವಾಗತ ಮಾಡಲೇಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ನಾನು ಯಾವ ಉದ್ದೇಶವನ್ನಿಟ್ಟುಕೊಂಡು ಮಾತನಾಡುತ್ತಿಲ್ಲ, ಸದನಕ್ಕೂ ಕೂಡ ನಾನು ತಪ್ಪು ಮಾಹಿತಿ ಕೊಡುತ್ತಿಲ್ಲ, ಬಹಳಷ್ಟು ಹಿಂದಿನ ಕಾಲದಿಂದ ಅಂದರೆ ಸರಿ ಸುಮಾರು 30 ವರ್ಷಗಳಿಂದ ಈ ಡ್ಯಾಂ ಆಗಿರುವುದಿಲ್ಲ, ಆರು ತಿಂಗಳಲ್ಲಿ ಆಗುವುದಕ್ಕೆ ನನಗೆ ಆಶ್ಚರ್ಯವಾಗುತ್ತದೆ ಅದರೂ ನಾನು ಸ್ವಾಗತಿಸುತ್ತೇನೆ ನಾನು ಬೇಜವಾಬ್ದಾರಿ ಎನ್ನುವ ಮಾತನ್ನು ವೈಯುಕ್ತಿಕವಾಗಿ ಹೇಳಿಲ್ಲ, ಸರ್ಕಾರ ಈ ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ. ಸ್ಟೇಟ್‌ಮೆಂಟ್ ಕೊಡಬಾರದು ಎನ್ನುವುದಕ್ಕಾಗಿ ನಾನು ಆ ರೀತಿ ಹೇಳಿದ್ದೇನೆಯೇ ವಿನಾಃ ವೈಯುಕ್ತಿಕವಾಗಿ ನಾನು ಏನೂ ಮಾತನಾಡಿಲ್ಲ. ಆ ರೀತಿ ಮಾತನಾಡುವಂಥ ವ್ಯಕ್ತಿಯೂ ನಾನಲ್ಲ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಮ್ಮ ಜಿಲ್ಲಾ ಇನ್‌ಚಾರ್ಜ್ ಮಂತ್ರಿಗಳೂ ಕೂಡ ಈ ಸಂದರ್ಭದಲ್ಲಿ ಇಲ್ಲಿಯೇ ಇದ್ದಾರೆ. ಈ ಒಂದು ಕಷ್ಟಕಾಲದಲ್ಲಿ ರೈತರಿಗೆ ಸಹಾಯ ಮಾಡತಕ್ಕಂಥದ್ದು ಬಹಳ ಅವಶ್ಯವಿದೆ, ಒಂದು ವೇಳೆ ನಾವು ಅವರ ಕಷ್ಟದಲ್ಲಿ ಸಹಾಯಕ್ಕೆ ಹೋಗದೇ ಇದ್ದರೆ ರೈತರು ನಮ್ಮನ್ನು ಯಾರೂ ಕ್ಷಮಿಸುವುದಿಲ್ಲ. ಬೀದರ್‌ನಲ್ಲಿ (ಬಿಎಸ್‌ಎಸ್) ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಇದೆ. ಇದೊಂದೇ ಕಾರ್ಖಾನೆ ನಮ್ಮ ಜಿಲ್ಲೆಯಲ್ಲಿದೆ. ಇದರ ಒಂದು ಸಣ್ಣ ದೃಷ್ಟಾಂತವನ್ನು ತಮ್ಮ ಮುಂದಿಡಲು ನಾನೀಗ ಬಯಸುತ್ತೇನೆ. ಅಲ್ಲಿ ಏನಾಗಿದೆ ಎಂದರೆ ಸರಿ ಸುಮಾರು ನಮ್ಮ ರೈತರಿಗೆ ಒಂಬತ್ತು ಕೋಟಿ ರೂಪಾಯಿ ಬಾಕಿ ಬಿಎಸ್‌ಎಸ್ ಕೊಡಬೇಕಾಗಿದೆ. ನಮ್ಮ ಹೊಲದಲ್ಲಿ ನಾವು 12 ತಿಂಗಳು ಕಬ್ಬು ಬೆಳೆದು ಅದಕ್ಕೆ ನೀರು ಹಾಕಿ, ಗೊಬ್ಬರ ಹಾಕಿ ಎಲ್ಲಾ ಮಾಡಿ ಆ ಕಬ್ಬನ್ನು ಫ್ಯಾಕ್ಟರಿಗೆ ಹಾಕಿದರೆ ಅವರು ಅದನ್ನು ಕ್ರಷಿಂಗ್ ಮಾಡಿ ಸಕ್ಕರೆ ಮಾಡಿ ಅದನ್ನು ಮಾರಿಕೊಂಡರೂ ಇನ್ನು ರೈತರಿಗೆ ದುಡ್ಡು ಕೊಟ್ಟಿಲ್ಲ. ಸಾರ್ ನಾನು ತಮಗೆ ಒಂದು ಅಂಕಿಅಂಶವನ್ನು ಕೊಡುವುದಾದರೆ, 2000 ದಿಂದ 2001 ನೇ ಸಾಲಿನಲ್ಲಿ 5 ಲಕ್ಷ ಟನ್ ಕಬ್ಬು ಕ್ರಷಿಂಗ್ ಆಗಿದೆ, ಇದಕ್ಕೆ 650 ರೂಪಾಯಿ ರೇಟ್‌ನಲ್ಲಿ 600 ರೂಪಾಯಿ ಕೊಟ್ಟು ಇನ್ನೂ 50 ರೂಪಾಯಿ ಕೊಡಬೇಕಾಗಿದೆ, ಇದು ಸುಮಾರು ಒಟ್ಟಾರೆಯಾಗಿ ರೈತರಿಗೆ ಎರಡೂವರೆ ಕೋಟಿ ರೂಪಾಯಿ ಬಾಕಿ ಬರಬೇಕಾಗಿದೆ. 2001 ದಿಂದ 2002 ನೇ ಸಾಲಿನಲ್ಲಿ 4 ಲಕ್ಷ 25 ಸಾವಿರ ಟನ್ ಕಬ್ಬಿಗೆ 50 ರೂಪಾಯಿಯಂತೆ ಸುಮಾರು 2 ಕೋಟಿ 12 ಲಕ್ಷ ರೂಪಾಯಿ ಬಾಕಿ ಇದೆ. 2000 ದಿಂದ 2002 ರವರೆಗೆ ನಮ್ಮ ರೈತರಿಗೆ ಕೊಡಬೇಕಾಗಿರುವ ಬಾಕಿ ಎಷ್ಟು ಇದೆ ಎಂದರೆ, ಸುಮಾರು ಐದು ಕೋಟಿ ರೂಪಾಯಿ ಬಾಕಿ ಹಣವನ್ನು ಈ ಬಿಎಸ್‌ಎಸ್ ರವರು ರೈತರಿಗೆ ಕೊಡಬೇಕಾಗಿದೆ. ಇವತ್ತಿನವರೆಗೆ ಕೊಟ್ಟಿಲ್ಲ. ಇದರ ಹಿಂದೆ ತಮಗೆ ಹೇಳಬೇಕೆಂದರೆ, ಎಕ್ಸಪ್ಯಾನ್‌ಷನ್ ಡಿಪಾಸಿಟ್ ಎಂದು ಅವರು ತೆಗೆದುಕೊಂಡಿದ್ದರು, ಆದರೆ ಇಂಟ್ರೆಸ್ಟ್ ಕೊಟ್ಟಿದ್ದಾರೆ ಕ್ಯಾಪಿಟಲ್ ಕೊಟ್ಟಿಲ್ಲ. 1991-92 ರಲ್ಲಿ 40 ರೂಪಾಯಿ ಪ್ರಕಾರ ಕೊಡಬೇಕು, 1992-93 ರಲ್ಲಿ 10 ರೂಪಾಯಿ ಕೊಡಬೇಕು, 1993-94ರಲ್ಲಿ 10 ರೂಪಾಯಿನಂತೆ ಒಟ್ಟು ಸುಮಾರು ಎರಡು ಕೋಟಿ ರೂಪಾಯಿ ಹಣವನ್ನು ಎಕ್ಸಪ್ಯಾನ್‌ಷನ್ ಡಿಪಾಸಿಟ್ ಹಣವನ್ನು ಕೊಡಬೇಕು. ಇದರ ಜೊತೆಗೆ 1994-95 ರಲ್ಲಿ ಹಳೆಯ ಪೇಮೆಂಟ್, ಆಗ ಫ್ಯಾಕ್ಟರಿ ಲಾಸ್ ಆಗಿದೆ ಎಂದು ತಿಳಿದುಕೊಂಡು ರೇಟ್ 650 ರಿಂದ 700 ಎಂದು ಮಾತನಾಡಿ 490 ರೂಪಾಯಿ ಕೆಲವು ರೈತರಿಗೆ ಕೊಟ್ಟರು,

ಇನ್ನು 110 ರೂಪಾಯಿ ಬಾಕಿ ಬರಬೇಕಾಗಿದೆ. ಇದೆನ್ನೆಲ್ಲಾ ಲೆಕ್ಕ ಮಾಡಿದರೆ ಸರಿ ಸುಮಾರು 8 ಕೋಟಿ 62 ಲಕ್ಷ ರೂಪಾಯಿಗಳನ್ನು ಬಿಎಸ್‌ಎಸ್ ರೈತರಿಗೆ ಬಾಕಿ ಕೊಡಬೇಕಾಗಿದೆ. ಇವತ್ತಿನದಿವಸ ನಮ್ಮ ರಾಜ್ಯದ ರೈತರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಈ ನಾಡಿಗೆ ಅನ್ನ ಕೊಡತಕ್ಕಂಥ ರೈತನ ಪರಿಸ್ಥಿತಿ ಸುಧಾರಿಸಬೇಕಾದರೆ ಮತ್ತು ಬೀದರ್ ಜಿಲ್ಲೆಯ ರೈತರ ಸಹಾಯಕ್ಕೆ ನಾವು ಹೋಗಬೇಕೆಂದು ಈ ಸದನದಲ್ಲಿರತಕ್ಕಂಥ ಮಾನ್ಯ ಮುಖ್ಯಮಂತ್ರಿಯವರಿಗೂ ಮತ್ತು ನಮ್ಮ ಜಿಲ್ಲೆಯ ಜಿಲ್ಲಾಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತಿನದಿವಸ ರೈತರಿಗೆ ಕೊಡಬೇಕಾಗಿರತಕ್ಕಂಥ ಸುಮಾರು 8 ಕೋಟಿ 62 ಲಕ್ಷ ರೂಪಾಯಿಗಳನ್ನು ತಾವು ಒಂದು ವೇಳೆ ಕೊಟ್ಟರೆ ಬೀದರ್ ಜಿಲ್ಲೆಯ ರೈತರು ತಮಗೆ ಆಶೀರ್ವಾದ ಮಾಡುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಬೀದರ್ ಜಿಲ್ಲೆಯ ರೈತರ ಪರಿಸ್ಥಿತಿ ಕೂಡ ಸುಧಾರಣೆಯಾಗುತ್ತದೆ. ಮತ್ತೆ ಈಗ ಬರಗಾಲ ಇದ್ದರೂ ಕೂಡ ಸ್ವಲ್ಪಮಟ್ಟಿಗೆ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಂದು ವೇಳೆ ಈ ಸಮಯದಲ್ಲಿ ರೈತನಿಗೆ ಪೇಮೆಂಟ್ ಕೊಡದೇ ಇದ್ದರೆ ಅಥವಾ ರೈತನ ಕಷ್ಟಕ್ಕೆ ತಾವು ಬರದೇ ಹೋದರೆ ಬಹಳ ಕೆಟ್ಟ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ನಿರ್ಮಾಣವಾಗಿ ಅಲ್ಲೋಲಕಲ್ಲೋಲ ವಾತಾವರಣ ಉಂಟಾಗುತ್ತದೆ. ಹಾಗೆಯೇ, ರೈತರು ಬೀದಿಗೆ ಇಳಿದು ಹೋರಾಟ ಮಾಡತಕ್ಕಂಥ ಪರಿಸ್ಥಿತಿ ಬರಬಹುದು. ಆದ್ದರಿಂದ, ಮುನ್ನೆಚ್ಚರಿಕೆಯ ಕ್ರಮವಾಗಿ ಬರಗಾಲದ ಛಾಯೆಯನ್ನು ತಿಳಿದಿಕೊಂಡು ರೈತರಿಗೆ ಸಹಾಯ ಮಾಡಬೇಕು. ನಾನು ಈಗಾಗಲೇ ಹೇಳಿದ ಹಾಗೆ ನಮ್ಮ ರೈತರಿಗೆ ಕೊಡಬೇಕಾಗಿರತಕ್ಕಂಥ ಹಣದ ವ್ಯವಸ್ಥೆಯನ್ನು ಮಾಡುವುದಕ್ಕೆ ಆಗುತ್ತದೆ. ಏಕೆಂದರೆ, ಇವತ್ತಿನದಿವಸ ನಮ್ಮಲ್ಲಿರತಕ್ಕಂಥ ಡಿ.ಸಿ.ಸಿ ಬ್ಯಾಂಕ್ ಮತ್ತು ಬಿ.ಎಸ್.ಎಸ್. ಕಾರ್ಖಾನೆಯಲ್ಲಿಯೂ ಕೂಡ ನಿಮ್ಮವರೇ ಅಧ್ಯಕ್ಷರಾಗಿದ್ದಾರೆ. ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ಕೂಡ ರೈತರಿಗೆ ಹಣವನ್ನು ಏಕೆ ಕೊಡುತ್ತಿಲ್ಲ ಎನ್ನತಕ್ಕಂಥದು ಗೊತ್ತಾಗುತ್ತಿಲ್ಲ. ಬಿ.ಎಸ್.ಎಸ್ ನವರು ಡಿ.ಸಿ.ಸಿ ಬ್ಯಾಂಕ್‌ನವರಿಗೆ ವರ್ಷಕ್ಕೆ ಸುಮಾರು 7 ಕೋಟಿ ರೂಪಾಯಿಗಳಷ್ಟು ಬಡ್ಡಿ ಕಟ್ಟುತ್ತಾರೆ. ಹಾಗೆಯೇ, ಬ್ಯಾಂಕಿನವರು ಕೊಟ್ಟಿರತಕ್ಕಂಥ ಸುಮಾರು 32 ಕೋಟಿ ರೂಪಾಯಿ ಸಾಲವನ್ನು ಬಿಎಸ್‌ಎಸ್ ಕಾರ್ಖಾನೆಯವರೇ ವಸೂಲಿ ಮಾಡಿ ಕೊಡುತ್ತಿದ್ದಾರೆ. ಇವತ್ತಿನ ದಿವಸ ಬಿಎಸ್‌ಎಸ್ ಕೈಗಾರಿಕೆಯಿಂದಲೇ ಡಿಸಿಸಿ ಬ್ಯಾಂಕ್ ನಡೆಯುತ್ತಿದೆ. ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ಸಹ ಡಿ.ಸಿ.ಸಿ. ಬ್ಯಾಂಕ್‌ನವರು ರೈತರಿಗೆ ಕೊಡಬೇಕಾಗಿರತಕ್ಕಂಥ ಹಣವನ್ನು ಏಕೆ ಕೊಡುತ್ತಿಲ್ಲ? ಇಂಥ ಸಂದರ್ಭದಲ್ಲಿ ದುಡ್ಡು ಕೊಡದೇ ಇದ್ದರೆ ಇನ್ನು ಯಾವಾಗ ಕೊಡುತ್ತಾರೆ? ರೈತರಿಗೆ ಕೊಡಬೇಕಾಗಿರತಕ್ಕಂಥ ಸುಮಾರು 8 ಕೋಟಿ ರೂಪಾಯಿಗಳನ್ನು ಕೊಟ್ಟರೆ ರೈತರಿಗೆ ಸಹಾಯವಾಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಹಳೆಯ ಬಾಕಿ ಇರತಕ್ಕಂಥ ಸುಮಾರು 2 ಕೋಟಿ ರೂಪಾಯಿಗಳನ್ನು ಬಿಟ್ಟರೂ ಸಹ 2001-2002ನೇ ಸಾಲಿನಲ್ಲಿ ಕೊಡಬೇಕಾಗಿರತಕ್ಕಂಥ 5 ಕೋಟಿ ರೂಪಾಯಿಗಳನಾದರು ಕೊಟ್ಟರೆ ರೈತರಿಗೆ ಬಹಳಷ್ಟು ಸಂತೋಷವಾಗುತ್ತದೆ. ಆದ್ದರಿಂದ ತಾವು ದಯಮಾಡಿ ಬಿಎಸ್‌ಎಸ್ ಕೈಗಾರಿಕೆಗೆ ಕಬ್ಬು ಕೊಟ್ಟಂಥ ರೈತರಿಗೆ ಹಣ ಕೊಡಿಸಬೇಕು. ಅವರು ಈಗಾಗಲೇ ಕಬ್ಬು ತೆಗೆದುಕೊಂಡು ಸಕ್ಕರೆ ಮಾಡಿ, ಅದನ್ನು ಈಗಾಗಲೇ ಮಾರಾಟ ಮಾಡಿ ಹಣವನ್ನು ತೆಗೆದುಕೊಂಡಿದ್ದಾರೆ. ಆದರೆ, ರೈತರಿಗೆ ಮಾತ್ರ ಕೊಡಬೇಕಾಗಿರತಕ್ಕಂಥ ಹಣವನ್ನು ಇನ್ನು ಕೊಟ್ಟಿಲ್ಲ. ಕೈಗಾರಿಕೆಯಿಂದ ಸುಮಾರು 9 ರಿಂದ 10 ಕೋಟಿ ರೂಪಾಯಿ ರೈತರಿಗೆ

ಬರಬೇಕಾಗಿದ್ದರೂ ಸಹ ರೈತರು ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಂಡಿದ್ದಾರೆ. ಹಾಗೆಯೇ ಬೆಳೆ ವಿಮೆ ಮಾಡಿರತಕ್ಕಂಥ ರೈತರಿಗೆ ಇನ್ನು ವಿಮಾ ಹಣವನ್ನು ಸಹ ಕೊಟ್ಟಿಲ್ಲ. ಕಬ್ಬನ್ನು ತೆಗೆದುಕೊಂಡು ಹೋಗಿ ಸಕ್ಕರೆ ಕಾರ್ಖಾನೆಗೆ ಕೊಟ್ಟಿದ್ದರೂ ಸಹ ನಮಗೆ ಕಾರ್ಖಾನೆಯಿಂದ ಹಣ ಬಂದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಮತ್ತು ಈ ಭಾಗದ ಶಾಸಕರಾದ ನೀವು ಏನು ಮಾಡುತ್ತಿದ್ದೀರಿ ಎಂದು ಅಲ್ಲಿನ ಜನರು ನಮ್ಮ ಕೇಳಿದಾಗ, ನಮಗೆ ಯಾವುದೇ ರೀತಿಯ ಉತ್ತರ ಹೇಳುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಸಕ್ಕರೆ ಇಲಾಖೆಯ ಮಂತ್ರಿಗಳು ಇವತ್ತಿನ ಸಭೆಯಲ್ಲಿ ಇಲ್ಲ. ಆದರೂ ಸಹ ಸದರಿ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಹಾಗೂ ಈ ಸದನದ ಗಮನಕ್ಕೆ ತಂದಿದ್ದೇನೆ. ಅದಕ್ಕಾಗಿ ಬೀದರ್ ಜಿಲ್ಲೆಯ ರೈತರ ಹಿತದೃಷ್ಟಿಯಿಂದ 9 ಕೋಟಿ ರೂಪಾಯಿಗಳನ್ನು ಆದಷ್ಟು ಬೇಗನೆ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಸನ್ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮುಂಗಾರು ಮಳೆ ಸರಿಯಾಗಿ ಆಗದೇ ಇರತಕ್ಕಂಥ ವಿಚಾರದ ಬಗ್ಗೆ ಈಗಾಗಲೇ ಸಾಕಷ್ಟು ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಾನು ಪ್ರತಿನಿಧಿಸತಕ್ಕಂಥ ಕ್ಷೇತ್ರವಾದ ಗುಂಡ್ಲುಪೇಟೆಯಲ್ಲಿ ಶಾಶ್ವತವಾದ ಬರಗಾಲವನ್ನು ಎದುರಿಸತಕ್ಕಂಥ ಒಂದು ಕ್ಷೇತ್ರವಾಗಿದೆ. ಇದರಿಂದ, ಬರಗಾಲ ಎನ್ನತಕ್ಕಂಥ ಭೀತಿ ನಮ್ಮ ಕ್ಷೇತ್ರದಲ್ಲಿ ಬಹಳ ಖಾಯಂ ಆಗಿದೆ. ಇದರ ಜೊತೆಗೆ ಆಗಾಗ ತೀವ್ರವಾದ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಬಹುಶಃ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರಥಮವಾಗಿ ಮುಂಗಾರು ಮಳೆ ನಮ್ಮ ಕ್ಷೇತ್ರದಿಂದ ಪ್ರಾರಂಭವಾಗುತ್ತದೆ. ನಮ್ಮಲ್ಲಿ ಮಾರ್ಚ್ ತಿಂಗಳಲ್ಲಿಯೇ ಮುಂಗಾರು ಮಳೆ ಪ್ರಾರಂಭವಾದಾಗ ಸುಮಾರು 40 ಸಾವಿರ ಹೆಕ್ಟೇರ್ ಭೂ ಪ್ರದೇಶಗಳಲ್ಲಿ ಬಿತ್ತನೆ ಕಾರ್ಯ ಪ್ರಾರಂಭ ಆಗಬೇಕಾಗಿತ್ತು. ಆದರೆ, ಕೇವಲ 30 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ನಡೆದಿದೆ. ಆದಾದ ನಂತರ ಇಲ್ಲಿಯವರೆಗೆ ಮಳೆ ಬಾರದೇ ಇರುವುದರಿಂದ ಈಗಾಗಲೇ ಬಿತ್ತನೆ ಕಾರ್ಯ ಮಾಡಿರತಕ್ಕಂಥವರ ಬಿತ್ತನೆ ಸಂಪೂರ್ಣವಾಗಿ ನಾಶವಾಗಿರುವುದರಿಂದ ಇಲ್ಲಿನ ರೈತರು ಕಂಗಾಲಾಗಿರತಕ್ಕಂಥ ಪರಿಸ್ಥಿತಿ ನಮ್ಮ ಕ್ಷೇತ್ರದಲ್ಲಿ ನಿರ್ಮಾಣವಾಗಿದೆ. ಇದೇ ರೀತಿಯಾಗಿ ಚಾಮರಾಜನಗರ ಜಿಲ್ಲೆಯಲ್ಲಿಯೂ ಕೂಡ ಆಗಿದೆ. ಇಲ್ಲಿ ಸುಮಾರು 1 ಲಕ್ಷ 31 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಪ್ರಾರಂಭವಾಗಬೇಕಾಗಿತ್ತು. ಆದರೆ, ಕೇವಲ 48 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಆಗಿದೆ. ಒಟ್ಟಿನಲ್ಲಿ ಶೇಕಡ 80 ಭಾಗದಷ್ಟು ಬಿತ್ತನೆ ನಮ್ಮ ಕ್ಷೇತ್ರದಲ್ಲಿ ಆಗಿದೆ. ಉಳಿದ ಮೂರು ತಾಲ್ಲೂಕುಗಳಲ್ಲಿ ಬಿತ್ತನೆ ಕಾರ್ಯ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ರೈತರ ನೆರವಿಗೆ ಹೋಗತಕ್ಕಂಥದ್ದು ಅವಶ್ಯಕತೆ ಇದೆ. ಇವತ್ತಿನದಿವಸ ಬಿತ್ತನೆ ಆಗದೇ ಇರತಕ್ಕಂಥ ಪ್ರದೇಶದಲ್ಲಿ ಸ್ವಲ್ಪ ಸುಧಾರಣೆ ಇರುತ್ತದೆ. ಆದರೆ, ಬಿತ್ತನೆ ಮಾಡಿ ವಿಫಲವಾಗಿರತಕ್ಕಂಥ ಕಡೆ ರೈತರು ಹಿಂದಿನ ಸಾಲಿನಲ್ಲಿ ಉಳಿಸಿಕೊಂಡಿದ್ದಂಥ ಅಲ್ಪಸ್ವಲ್ಪ ಆದಾಯವನ್ನೂ ಕೂಡ ಈ ಒಂದು ಬಿತ್ತನೆ ಕಾರ್ಯಕ್ಕೆ ತೊಡಗಿಸಿಕೊಂಡು ಬರೀ ಕೈಯಲ್ಲಿ ಆಕಾಶ ನೋಡತಕ್ಕಂಥ ಪರಿಸ್ಥಿತಿಯಲ್ಲಿ ರೈತರು ಇದ್ದಾರೆ. ರೈತನಿಗೆ ನೆರವು ಆಗಲೆಂದು ಇವತ್ತಿನದಿವಸ ಬೆಳೆ ವಿಮಾ ಯೋಜನೆ ಜಾರಿಯಲ್ಲಿದೆ.

1987ರಲ್ಲಿಯೇ ಕ್ರಾಪ್ ಇನ್‌ಶ್ಯೂರೆನ್ಸ್ ಇದ್ದರೂ ಕೂಡ ಕಳೆದ ವರ್ಷದಿಂದ ಸದರಿ ಯೋಜನೆ ಹೆಚ್ಚಾಗಿ ಚಾಲನೆಗೆ ಬಂದು ಸುಮಾರು ಜನ ರೈತರು ವಿವಿಧ ಬ್ಯಾಂಕ್‌ಗಳ ಮುಖಾಂತರ ತಾವು ಬೆಳೆದಿರತಕ್ಕಂಥ ಬೆಳೆಗೆ ವಿಮೆಯನ್ನು ಮಾಡಿಸುವುದಕ್ಕೆ ಮುಂದಾಗಿದ್ದಾರೆ. ಬೆಳೆ ವಿಮೆ ಯೋಜನೆಗೆ ಸಂಬಂಧಪಟ್ಟಂತೆ ಸುಮಾರು 130 ಕೋಟಿ ರೂಪಾಯಿ ಜೂನ್ 5ನೇ ತಾರೀಖು ಸರ್ಕಾರಕ್ಕೆ ಬಂದಿದ್ದು, ಸದರಿ ಹಣವನ್ನು ವಿವಿಧ ಬ್ಯಾಂಕ್‌ಗಳಿಗೆ ಒಂದು ತಿಂಗಳ ಹಿಂದೆಯೇ ತಲುಪಿಸಿದ್ದರೂ ಕೂಡ, ರೈತರಿಗೆ ಈ ಹಣವನ್ನು ತಲುಪಿಸತಕ್ಕಂಥ ವ್ಯವಸ್ಥೆ ಇನ್ನು ಆಗಿಲ್ಲ. ಸುಮಾರು ಒಂದುವರೆ ತಿಂಗಳಿಂದ ಸದರಿ ಹಣ ಬ್ಯಾಂಕ್‌ಗಳಲ್ಲಿಯೇ ಉಳಿದುಕೊಂಡಿದೆ. ಇದು, ಇನ್ನು ರೈತರ ಕೈಗೆ ತಲುಪಿಲ್ಲ. ಮತ್ತೆ ಈ ವರ್ಷ ವಿಮೆ ಬೆಳೆ ವಿಮೆಗೆ ಅಪ್ಲೈ ಮಾಡಿ ಎಂದು ಕೃಷಿ ಇಲಾಖೆಯವರು ರೈತರಿಗೆ ಕರೆ ಕೊಟ್ಟಿದ್ದಾರೆ. ಹೋದ ವರ್ಷ ಮಾಡಿಸಿರತಕ್ಕಂಥ ಬೆಳೆ ವಿಮೆಯ ಹಣ ಬರುತ್ತದೆಯೋ ಅಥವಾ ಇಲ್ಲವೋ ಎನ್ನತಕ್ಕಂಥ ಅಂತಕದಲ್ಲಿ ರೈತರು ಇರತಕ್ಕಂಥ ಸಂದರ್ಭದಲ್ಲಿ ಹಣ ಬಿಡುಗಡೆಯಾಗಿದ ಒಂದು ತಿಂಗಳು ಆಗಿದ್ದರೂ ಕೂಡ ರೈತರಿಗೆ ತಲುಪಿಸದೇ ಇರುವುದಕ್ಕೆ ಕಾರಣ ಏನು ಎಂಬುದನ್ನು ಸರ್ಕಾರ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಬೆಳೆ ವಿಮೆ ಯೋಜನೆ ಹೆಚ್ಚಾಗಿ ಅಪ್ಲೈ ಆಗುತ್ತದೆ. ವಿಮಾ ಹಣ ಬಂದಿದ್ದರೂ ಕೂಡ ರೈತರಿಗೆ ತಲುಪಿಸತಕ್ಕಂಥ ಮಾಹಿತಿ ಕೆಲಸ ಇನ್ನು ಪ್ರಾರಂಭವಾಗಿಲ್ಲ. ಹಾಗೆಯೇ ಬ್ಯಾಂಕಿನವರು ಕೂಡ ಈ ವಿಷಯವನ್ನು ರೈತರಿಗೆ ತಿಳಿಸುವುದಕ್ಕೆ ಹೋಗಿಲ್ಲ. ಹಾಗೆಯೇ ವಿಮಾ ಹಣ ಬಂದಿದೆ, ರೈತರು ಬ್ಯಾಂಕ್‌ಗಳಿಗೆ ಹೋಗಿ ಪಡೆದುಕೊಳ್ಳಬೇಕು ಎನ್ನತಕ್ಕಂಥ ಮನವರಿಕೆಯನ್ನು ಕೃಷಿ ಇಲಾಖೆಯವರು ಮಾಡಬೇಕು. ಆದರೆ, ಈ ವಿಷಯವರನ್ನು ಕೃಷಿ ಇಲಾಖೆಯವರು ಹೇಳದೇ ಇರುವುದರಿಂದ ವಿಮಾ ಹಣ ಬಂದಿದೆಯೋ ಅಥವಾ ಇಲ್ಲವೊ ಎನ್ನತಕ್ಕಂಥ ಗೊಂದಲ ರೈತರಲ್ಲಿ ಇದೆ. ಇವತ್ತಿನ ದಿವಸ ಬ್ಯಾಂಕ್‌ನಲ್ಲಿ ಏನಾಗಿದೆ ಎಂದರೆ, ಪ್ರತಿಯೊಬ್ಬರೂ ಕೂಡ ಬ್ಯಾಂಕ್‌ನಲ್ಲಿ ಅಕೌಂಟ್ ಓಪನ್ ಮಾಡಿ ಬೆಳೆ ವಿಮೆಯ ಹಣವನ್ನು ಪಡೆದುಕೊಳ್ಳಬೇಕಾಗುತ್ತದೆ. ಆದರೆ ಪ್ರತಿಯೊಬ್ಬರು ಬ್ಯಾಂಕ್‌ನಲ್ಲಿ ಅಕೌಂಟ್ ಓಪನ್ ಮಾಡತಕ್ಕಂಥದು ಬ್ಯಾಂಕಿನವರಿಗೆ ಬೇಡವಾದ ವಿಚಾರವಾಗಿದೆ. ಏಕೆಂದರೆ, ವಿಮಾ ಹಣವನ್ನು ಪಡೆದುಕೊಂಡು ಮೇಲೆ ಬ್ಯಾಂಕಿನಲ್ಲಿ ಯಾವುದೇ ರೀತಿಯ ವ್ಯವಹಾರವನ್ನು ರೈತರು ಇಟ್ಟುಕೊಳ್ಳುವುದಿಲ್ಲ ಎನ್ನತಕ್ಕಂಥ ಭಾವನೆ ಅವರಲ್ಲಿದೆ. ಹಾಗೆಯೇ ಇವತ್ತಿನದಿವಸ ಬ್ಯಾಂಕ್‌ನಲ್ಲಿ ಸಾಕಷ್ಟು ಜನ ನೌಕರರು ವಿಆರ್‌ಎಸ್ ಅಪ್ಲೈ ಮಾಡಿಕೊಂಡಿರುವುದರಿಂದ, ಸ್ಟಾಫ್ ಕಡಿಮೆ ಆಗಿರುವುದರಿಂದ, ಬೆಳೆ ವಿಮೆಯ ಹಣವನ್ನು ರೈತರಿಗೆ ವಿತರಣೆ ಮಾಡುವುದಕ್ಕೆ ಆಸಕ್ತಿ ತೋರಿಸುತ್ತಿಲ್ಲ. ಇದರಿಂದ ವಿಮಾ ಹಣ ಬಂದಿದ್ದರೂ ಕೂಡ ಸುಮಾರು ಒಂದುವರೆ ತಿಂಗಳಿಂದ ಡಿಸಿಸಿ ಮತ್ತು ಇತರೇ ಬ್ಯಾಂಕ್‌ಗಳಲ್ಲಿ ವಿಮಾ ಹಣ ಸ್ಟಕ್ ಆಗಿದೆ. ಇದನ್ನು ವಿತರಣೆ ಮಾಡಿಸತಕ್ಕಂಥ ಕೆಲಸವನ್ನು ಸರ್ಕಾರ ತುರ್ತಾಗಿ ಮಾಡಿಸಿದರೆ ಅಲ್ಪಸ್ವಲ್ಪ ಆದಾಯ ಬಂದು ರೈತ ಮುಂದಿನ ಜೀವನ ಮಾಡುವುದಕ್ಕೆ ದಾರಿಯಾಗುತ್ತದೆ. ಈ ಒಂದು ಕೆಲಸವನ್ನು ಸರ್ಕಾರ ಕೂಡಲೇ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನದಿವಸ ಒಂದೊಂದು ತಾಲ್ಲೂಕಿನಲ್ಲಿ ಇಂಥಿಂಥ ಕ್ರಾಫ್‌ಗಳಿಗೆ ಮಾತ್ರ ವಿಮೆ ಮಾಡಲಾಗುವುದೆಂದು ಘೋಷಣೆ ಮಾಡಿದ್ದಾರೆ. ಆದರೆ, ಇವತ್ತಿನ ದಿವಸ ಕೆಲವೊಬ್ಬರು ರೈತರು ಸ್ವಂತ ಆಸಕ್ತಿಯಿಂದ ಕೆಲವೊಂದು ಕಮರ್ಷಿಯಲ್ ಕೃಷಿ ಉತ್ಪನ್ನಗಳನ್ನು ಬೆಳೆಯುತ್ತಾರೆ. ಆದ್ದರಿಂದ ಇಂಥ ಬೆಳೆಗಳಿಗೂ ಕೂಡ ಇನ್‌ಶ್ಯೂರೆನ್ಸ್ ಅಪ್ಲೈ ಅಗತಕ್ಕಂಥ ವ್ಯವಸ್ಥೆ ಸರ್ಕಾರ

ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ಕ್ರಾಪ್ ಇನ್‌ಶ್ಯೂರೆನ್ಸ್‌ನಲ್ಲಿ ಕೆಲವೊಂದು ನ್ಯೂನ್ಯತೆಗಳಿವೆ. ಅದೇನೆಂದರೆ ಈ ಅವರೇಜ್ ಲೆಕ್ಕ ಹಾಕುವಾಗ ಕಳೆದ 5 ವರ್ಷದಲ್ಲಿ ಕ್ರಾಪ್ ಕ್ಯಾಟ್ರರನ್, ಎಷ್ಟು ಯೀಲ್ಡ್ ಬಂದಿದೆ ಎನ್ನತಕ್ಕಂಥ ಅವರೇಜ್ ತೆಗೆದುಕೊಂಡು ಲೆಕ್ಕ ಹಾಕುತ್ತಾರೆ. ಕಳೆದ ನಾಲ್ಕು-ಐದು ವರ್ಷಗಳಿಂದ ಮಳೆ ಸರಿಯಾಗಿ ಬರದೇ ಇರುವುದರಿಂದ ಬರಗಾಲದ ಪರಿಸ್ಥಿತಿಯನ್ನು ನಾವೆಲ್ಲರೂ ಗಮನಿಸಿದ್ದೇವೆ. ಆದ್ದರಿಂದ, ಐದು ವರ್ಷದ ಅವಧಿಯಲ್ಲಿ ಸರಿಯಾಗಿ ಬೆಳೆ ಸಮರ್ಪಕವಾಗಿ ಬರದೇ ಇರುವುದರಿಂದ ಈ ಒಂದು ಅವರೇಜ್‌ನ್ನು ತೆಗೆದುಕೊಂಡು ಅಪ್ಲೈ ಮಾಡಿದರೆ ಈ ವರ್ಷ ರೈತರಿಗೆ ವಿಮೆ ಹಣ ಸಿಗದೇ ಇರತಕ್ಕಂಥ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ, ರೈತನಿಗೆ ಅನುಕೂಲವಾಗುವ ರೀತಿಯಲ್ಲಿ ಇನ್‌ಶ್ಯೂರೆನ್ಸ್ ಪಾಲಿಸಿಯನ್ನು ಮಾಡಬೇಕು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಒಂದು ಹೆಕ್ಟೇರ್ ಪ್ರದೇಶದಲ್ಲಿ ಜೋಳ ಬೆಳೆದರೆ ಕನಿಷ್ಟ 10 ಸಾವಿರ ರೂಪಾಯಿ ವಿಮೆ ಹಣ ಬರುತ್ತದೆ ಎಂದು ನಿರೀಕ್ಷೆ ಇಟ್ಟುಕೊಂಡಿರುತ್ತಾನೆ. ಈಗ ಕೇವಲ 500 ರಿಂದ 1000 ರೂಪಾಯಿ ವಿಮೆ ಹಣ ಬಂದರೆ, ಆತ ಈಗಾಗಲೇ ಖರ್ಚು ಮಾಡಿರತಕ್ಕಂಥ ಹಣವೂ ಕೂಡ ಸಿಗುವುದಿಲ್ಲ.

6.10 ಪಿ.ಎಂ

ಅದನ್ನು ಅಪ್ಲೈ ಮಾಡಬೇಕಾದರೆ ಆರ್‌ಟಿಸಿ ತೆಗೆದುಕೊಳ್ಳಬೇಕು ಬ್ಯಾಂಕಿಗೆ ಹೋಗಿ ಫಾರ್ಮ್ ತೆಗೆದುಕೊಳ್ಳಬೇಕು, ಅದಕ್ಕೆ ಒಂದು ಸರ್ಟಿಫೈ ಮಾಡಿಸಬೇಕು, ಅವನಿಗೆ ಈ ಎಲ್ಲಾ ಓಡಾಟದಲ್ಲಿ ಸಾಕಷ್ಟು ಹಣ ಖರ್ಚಾಗಿರುತ್ತದೆ. ಆದ್ದರಿಂದ ಈ ಬೆಳೆ ವಿಮೆ ಯೋಜನೆಯನ್ನು ಸ್ವಲ್ಪ ಸರಳೀಕರಿಸುವ ರೀತಿಯಲ್ಲಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ನಾನು ವಾಸ್ತವಾಂಶ ಇರುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ನಾನು ರಾಜಕೀಯ ಉದ್ದೇಶವನ್ನು ಇಟ್ಟುಕೊಂಡು ಮಾತನಾಡುವುದಿಲ್ಲ. ಜೂನ್ ಎಂಡ್ ಅನ್ನು ಕಟ್-ಆಫ್ ಡೇಟ್ ಮಾಡಿದ್ದಾರೆ. ಅಗಸ್ಟ್ ತಿಂಗಳಲ್ಲಿ ಮಳೆ ಬಂದು ಆಗ ಬಿತ್ತನೆ ಮಾಡುವ ಸಂದರ್ಭ ಇರುತ್ತದೆ. ಅಲ್ಲಿಗೆ ಇನ್‌ಶ್ಯೂರೆನ್ಸ್ ಸ್ಕೀಂ ಅಲ್ಲಿಗೆ ಅಪ್ಲೈ ಆಗುವುದಿಲ್ಲ. ಯಾವ್ಯಾವ ಪ್ರದೇಶದಲ್ಲಿ ಬಿತ್ತನೆ ಕೆಲಸ ಪ್ರಾರಂಭವಾಗುತ್ತದೆ 15 ದಿವಸ ಒಂದು ತಿಂಗಳಿಗೆ ಇನ್‌ಶ್ಯೂರೆನ್ಸ್ ಅಪ್ಲೈ ಮಾಡುವುದಕ್ಕೆ ಕ್ರಾಪ್ ಫೇಲ್ಯೆಗಿರುವುದರಿಂದ ಅವರಿಗೆ ಅಪ್ಲೈ ಮಾಡುವುದಕ್ಕೆ ಅವಕಾಶವಾಗುವ ರೀತಿಯಲ್ಲಿ ಪಾಲಿಸಿಯಲ್ಲಿ ಬದಲಾವಣೆ ಮಾಡುವುದಕ್ಕೆ ಸರ್ಕಾರ ಗಮನವನ್ನು ಕೊಡಬೇಕು, ಎಂದು ಹೇಳುತ್ತಾ ಮತ್ತೆ ಈ ಹಿಂದಿನ ಅಧಿವೇಶನದಲ್ಲಿ ಸಾಕಷ್ಟು ಸಲ ರೈತ ಕಾಯಕ ಕೆರೆ ಬಗ್ಗೆ ಚರ್ಚೆಯಾಗಿರುತ್ತದೆ. ಕೊನೆಗೆ ತರಾತುರಿಯಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಒಂದೊಂದು ಕೆರೆ ಕೆಲಸ ತೆಗೆದುಕೊಂಡು ಹೂಳು ತೆಗೆಯುವ ಕೆಲಸವನ್ನು ತೆಗೆದುಕೊಂಡು ನಮ್ಮ ಕ್ಷೇತ್ರದಲ್ಲಿ ಕೂಡ ಲ್ಯಾಂಡ್ ಆರ್ಮಿಯವರು ಹಾಗೂ ಮೈನರ್ ಇರಿಗೇಶ್‌ನ್‌ದವರು ರಾತ್ರೋರಾತ್ರಿ ಬಂದು ಒಂದು ಕೆರೆಯನ್ನು ಆಯ್ಕೆ ಮಾಡಿಕೊಂಡು ಕೆಲಸವನ್ನು ಪ್ರಾರಂಭ ಮಾಡಿದರು. ನಂತರ ಒಂದು ವಾರದಲ್ಲಿ ಮಳೆ ಬಂದಿದೆ ಅದಕ್ಕಾಗಿ ಈ ಕೆಲಸವನ್ನು ಸ್ಥಗಿತ ಮಾಡಿದ್ದೇವೆಂದು ಹೇಳಿದರು. ಅದಕ್ಕೆ ಯಾವುದೇ ಅಪ್ರೂವಲ್ ಬರಲಿಲ್ಲ, ಇನ್ನು ಯಾವ ಮಂಜೂರಾತಿ ದೊರಕಿಲ್ಲ ಹಣದ ಒಂದು ಲಭ್ಯತೆಯನ್ನು ಕೂಡ ಮಾಡಿರಲಿಲ್ಲ. ಟಿವಿ ಯವರನ್ನು ಕರೆದುಕೊಂಡು ಹೋಗಿ ಒಂದು ದೊಡ್ಡ ಪ್ರಚಾರವನ್ನು ನಾವು ಮಾಡಿಸಿದೆವು. ನಾಲ್ಕನೆಯ ದಿವಸಕ್ಕೆ ಕೆಲಸ ನಿಂತು ಹೋಯಿತು. ಸುಮಾರು 10-15 ಲಕ್ಷ ರೂಪಾಯಿಗಳು ಮಂಜೂರಾಗಿದೆ

ಎಂದು ಹೇಳಿ ಒಂದು ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿ ಆ ಕೆಲಸವನ್ನು ಸ್ಥಗಿತಗೊಳಿಸಿದರು. ಈ ರೀತಿ ಮಾಡಿದ್ದರಿಂದ ರೈತ ಕಾಯಕ ಕೆರೆಗಳಲ್ಲಿ ಏನು ಕೆಲಸ ಆಗಬೇಕಾಗಿತ್ತು, ಆ ಕೆಲಸ ಕೂಡ ಆಗಿಲ್ಲ. ಬೇರೆ ನಮ್ಮ ಬೆಳೆಗಳಿಗೆ ಇನ್‌ಶ್ಯೂರೆನ್ಸ್ ಕ್ಲೇಮ ಮಾಡಬಹುದು, ನಮ್ಮ ತೆಂಗಿನ ಬೆಳೆಗಾರರ ಪರಿಸ್ಥಿತಿ ಏನಾಗಿದೆ ಎಂದರೆ, ಸರ್ಕಾರದ ಒಂದು ದ್ವಂದ್ವ ಧೋರಣೆಯಿಂದಾಗಿ ಔಷಧಿಗಳನ್ನು ಹೊಡೆದ ಮರಗಳಲ್ಲಿ ನುಸಿ ಹೋಗಲಿಲ್ಲ, ಕೊನೆಗೆ ನಾವು ಎಳನೀರನ್ನು ಕುಡಿಯುಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ವಿಷ ಪೂರಿತ ಮರಗಳಾಗಿವೆ. ಕಳೆದ ಐದು ವರ್ಷಗಳಿಂದ ಇದುವರೆಗೆ ಮೂರು ಸ್ಟೇಜ್‌ನಲ್ಲಿ ಔಷಧಿಗಳನ್ನು ಸಿಂಪಡಿಸುತ್ತೇವೆಂದು ಹೇಳಿ ಹಿಂದಿನ ಅಧಿವೇಶದಲ್ಲಿ ಹಿಂದಿನ ಕೃಷಿ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು. ಮೊದಲನೆಯ ಹಂತದ ಔಷಧಿಯನ್ನು ಹೊಡೆಯುವ ಹಂತದಲ್ಲಿಯೇ ಮೂರನೇ ಒಂದು ಭಾಗಕ್ಕೆ ಮಾತ್ರ ಹೊಡೆಯುವುದಕ್ಕೆ ಸಾಧ್ಯವಾಗಿ, ಎರಡನೇ ಮತ್ತು ಮೂರನೇ ಹಂತ ಔಷಧಿಯ ಸಿಂಪಡಣೆ ಮಾಡುವ ಪ್ರಶ್ನೆಯೇ ಇನ್ನೂ ಕೈಗೊಂಡಿರುವುದಿಲ್ಲ. ಇದರಿಂದ ತೆಂಗಿನ ಬೆಳೆಗಾರರಿಗೆ ಬಹಳ ತೊಂದರೆಯಾಗಿದೆ. ಆದರಿಂದ ತೆಂಗಿನ ಮರಗಳಿಗೂ ಕೂಡ ಇರುವ ನುಸಿಯನ್ನು ತಡೆಗಟ್ಟುವಲ್ಲಿ ವಿಫಲವಾಗಿದೆ. ಆ ಮರಳಿಗೆ ಒಂದು ರೀತಿಯಾದ ಪರಿಹಾರವನ್ನು ತೆಂಗು ಬೆಳೆಗಾರರಿಗೆ ಪರಿಹಾರವನ್ನು ಕೊಡುವ ಒಂದು ವ್ಯವಸ್ಥೆಯನ್ನು ಸರಕಾರ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಅಗ್ರಿಕಲ್ಚರ್ ಬಗ್ಗೆ ಪ್ರತ್ಯೇಕ ಡಿಮ್ಯಾಂಡ್ಸ್ ಬಂದಾಗ ತಾವು ಇದರ ಬಗ್ಗೆ ಮಾತನಾಡಿ. ಮಳೆ ಬರದಿರುವುದರಿಂದ ಬರಗಾಲ ಬಂದಿದೆ ಎನ್ನುವುದರ ಬಗ್ಗೆ, ಮಾತ್ರ ತಾವು ಮಾತನಾಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಅದನ್ನೇ ಹೇಳುತ್ತಿದ್ದೇನೆ. ಮಳೆ ವಿಫಲವಾಗಿರುವುದರಿಂದ, ಕೆರೆಕಟ್ಟೆಗಳಲ್ಲಿ ನೀರು ಇಲ್ಲದಿರುವುದರಿಂದ ಕುಡಿಯುವ ನೀರಿಗೆ ಬಹಳ ಸಮಸ್ಯೆ ಉದ್ಭವವಾಗಿದೆ. ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಸಬೇಡಿ ಎಂದು, ಪ್ರಕೃತಿ ವಿಕೋಪದ ಪರಿಹಾರ : ಹಣದಲ್ಲಿ ಬೋರ್‌ವೆಲ್‌ಗಳನ್ನು ಕೊರಸಬೇಡಿ ಎಂದು ಆದೇಶವನ್ನು ಮಾಡಿದೆ. ಆ ಹಣದಲ್ಲಿ ನಾವು ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಸುವುದಕ್ಕೆ ಅವಕಾಶವಿಲ್ಲ. ರೀಡ್ರಿಲ್ 350 ಫೀಟ್ ಇರುವುದನ್ನು 450 ಕ್ಕೆ ಮಾಡಿಸಬೇಕೆಂದರೂ ಕೂಡ ಕೊಳವೆಬಾವಿ ತೆಗೆಯಲು ಯಾವ ಏಜೆನ್ಸಿಗಳೂ ಮುಂದೆ ಬರುತ್ತಿಲ್ಲ. ಏಕೆಂದರೆ ಅವರಿಗೆ ಅದರಲ್ಲಿ ಅಷ್ಟೊಂದು ವರ್ಕ್-ಓಟ್ ಆಗುವುದಿಲ್ಲವೆಂದು ಹೇಳುತ್ತಾರೆ. ರೀಡ್ರಿಲ್ ಮಾಡತಕ್ಕಂಥ ಕೆಲಸಕ್ಕೆ ಯಾವ ಬೋರ್‌ವೆಲ್‌ಗಳ ಕಂಪನಿಗಳು ಬರದಿರುವುದರಿಂದ, ಹೊಸದಾಗಿ ಬೋರ್‌ವೆಲ್ ಹಾಕುವಂತಿಲ್ಲ, ಇನ್ನೊಂದು ಕಡೆ ರೀಡ್ರಿಲ್ ಮಾಡುವಂತಿಲ್ಲ ಇಂತಹ ಪರಿಸ್ಥಿತಿಯಾಗಿದೆ. ಆದರಿಂದ ರೀಡ್ರಿಲ್ ಮಾಡಿಸುವುದಕ್ಕೆ ಸರ್ಕಾರ ಒಂದು ವಿಶೇಷವಾದ ಒತ್ತನ್ನು ಕೊಟ್ಟರೆ, ಸ್ವಲ್ಪ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಕೊಳವೆ ಬಾವಿಗಳನ್ನು ಹಾಕಿಸಿ ನೀರನ್ನು ತರಿಸುವುದಕ್ಕೆ ಪ್ರಯತ್ನವನ್ನು ಮಾಡಬಹುದು. ಈ ದಿಕ್ಕಿನಲ್ಲಿ ಸರ್ಕಾರ ಸ್ವಲ್ಪ ಆಲೋಚನೆಯನ್ನು ಮಾಡಬೇಕು ಕೊನೆಯದಾಗಿ ಕುಂತೂರು ಸಕ್ಕರೆ ಕಾರ್ಖಾನೆಯಲ್ಲಿ 6 ಕೋಟಿ ರೂಪಾಯಿಗಳ ರೈತರಿಗೆ ಬಾಕಿ ಹಣ ಕಳೆದ 4-6 ವರ್ಷಗಳದ್ದು ಉಳಿದುಕೊಂಡಿದೆ. ಇದುವರೆಗೆ ಆ ಹಣವನ್ನು ವಿತರಣೆ ಮಾಡಿಸುವ ಒಂದು ವ್ಯವಸ್ಥೆಯಾಗಿರುವುದಿಲ್ಲ. ಕೋರ್ಟ್ ಕೂಡ ರೈತರಿಗೆ ಹಣವನ್ನು

ನೀಡಬೇಕೆಂದು ಆದೇಶವನ್ನು ಕೊಟ್ಟರೂ ಕೂಡ, ಅಲ್ಲಿರುವ ಸಕ್ಕರೆಯನ್ನು ಜಪ್ತಿ ಮಾಡಿ, ಅದನ್ನು ಮಾರಾಟ ಮಾಡಿ, ಕೊಡಿ ಎಂದು ಹೇಳಿದ್ದರೂ ಆದರೆ ಆ ಸಕ್ಕರೆ ಕಂಪನಿಯ ಮಾಲೀಕರು ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಸಾಲವನ್ನು ಮಾಡಿ ಕೊಂಡಿದ್ದರಿಂದ, ರೈತರಿಗೆ ಕೊಡದಿರುವ ಪರಿಸ್ಥಿತಿ ಇದೆ. ಇದರಿಂದ ಸಾವಿರಾರು ಜನ ರೈತರು ಕಂಗಾಲಾಗಿದ್ದಾರೆ, ಇದನ್ನು ಕೊಡಿಸುವ ವ್ಯವಸ್ಥೆ ಮಾಡಬೇಕೆಂದು, ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಹಿಂದೆಂದೂ ಕಾಣದಂಥ ಒಂದು ಬರಗಾಲ, ಮುಂಗಾರು ಮಳೆಯ ಅಭಾವದಿಂದ ಇವತ್ತು ನಾವು ಎದುರಿಸುವಂಥದ್ದಾಗಿದೆ. ಅದರ ಬಗ್ಗೆ ಕೂಲಂಕುಷವಾದ ಚರ್ಚೆಗೆ ಅವಕಾಶವನ್ನು ಮಾಡಿ ಕೊಟ್ಟಿದ್ದಕ್ಕೆ ತಮಗೆ ಅಭಿನಂದಿಸುತ್ತೇನೆ. ಇವತ್ತಿನ ಈ ಒಂದು ಜ್ವಲಂತ ಸಮಸ್ಯೆಯಲ್ಲಿ ಕರ್ನಾಟಕ ರಾಜ್ಯದ ರೈತರು ಕಂಗಾಲಗಾಗಿ ಹಿಂದು ಮುಂದು ನೋಡುವಂತಾಗಿದೆ. ಇಲ್ಲಿಯವರೆಗೆ ಬರುವ ಬರಗಾಲಕ್ಕೂ ಇವತ್ತು ಬಂದಿರುವ ಬರಗಾಲಕ್ಕೂ ಬಹಳ ವ್ಯತ್ಯಾಸವಿದೆ. ಮುಂಗಾರು ಮಳೆಗೆ ಮೇ, ಜೂನ್ ತಿಂಗಳಲ್ಲಿ ಮಳೆ ಒಂದೆರಡು ಬಂದು, ರೈತರು ವ್ಯವಸಾಯದ ಚಟುವಟಿಕೆಯನ್ನು ಮಾಡಿ, ಬಿತ್ತನೆಯನ್ನು ಕೂಡ ಮಾಡಿ ಬ್ಯಾಂಕ್‌ಗಳಿಂದ ಸಾಲವನ್ನು ಮಾಡಿ, ಗೊಬ್ಬರಗಳನ್ನೂ ಕೂಡ ಹಾಕಿ, ಬ್ಯಾಂಕಿನಿಂದ ಸಾಲವನ್ನು ಮಾಡಿ, ಇವತ್ತು ಸಾಲಗಾರನಾಗಿ ಮಳೆ ಇಲ್ಲದೆ ಬೆಳೆ ಇವತ್ತು ಹುಟ್ಟಿ ಸಾಯುತ್ತಿದೆ. ಕಳೆದ ಒಂದೂವರೆ ತಿಂಗಳಿಂದ ರೈತ ಮೇಲೆ ಕೆಳಗೆ ನೋಡುವ ಪರಿಸ್ಥಿತಿ ಉದ್ಭುವವಾಗಿದೆ. ಈ ಸಮಯದಲ್ಲಿ ಸರ್ಕಾರ ರೈತರ ನೆರವಿಗೆ ಬರತಕ್ಕಂಥದ್ದು ಬಹಳ ಅತ್ಯಾವಶ್ಯಕವಾಗಿದೆ. ಇದನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಬೇಕು. ಯಾವ ರೀತಿಯಾಗಿ ರೈತರ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕು. ಬಹಳ ಶರವೇಗದಲ್ಲಿ, ಸರ್ಕಾರದಲ್ಲಿ ಎಲ್ಲಿ ರಿಸೋರ್ಸ್ಸ್ ಎಲ್ಲಿದೆ, ಯಾವುದೇ ಡೆವಲೆಪ್‌ಮೆಂಟ್ ವರ್ಕ್ಸ್ ನಿಂತರೂ ಪರವಾಗಿಲ್ಲ, ಮೊದಲು ರೈತರ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವ ಒಂದು ರೀತಿಯಿಂದ, ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ನಡೆಸಿ, ಇನ್ನುಳಿದ ಅನಗತ್ಯ ವೆಚ್ಚವನ್ನು ಕಡಿತ ಮಾಡಿ, ಸಮರೋಪಾದಿಯಲ್ಲಿ ಯುದ್ಧರೀತಿಯಲ್ಲಿ ಈ ಒಂದು ಸಮಸ್ಯೆಯನ್ನು ಎದುರಿಸಬೇಕೆಂದು ಹೇಳಿ ಸರ್ಕಾರವನ್ನು ನಾನು ಮನವಿ ಮಾಡಿಕೊಳ್ಳುತ್ತೇನೆ. ಕ್ರಿಟಿಸೈಸ್ ಮಾಡುವುದರಿಂದ ಒಂದು ಸರ್ಕಾರವನ್ನು ಯಾವ ಸಮಸ್ಯೆ ಬಗೆಹರಿಯುವುದಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಬೇಕೆಂದರೆ, ವಿರೋಧ ಪಕ್ಷದವರನ್ನು ಗಣನೆಗೆ ತೆಗೆದುಕೊಂಡು, ಆಡಳಿತ ಪಕ್ಷದವರು ಕುಳಿತುಕೊಂಡು ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಇವತ್ತು ನಮ್ಮ ರೈತರು ಬೀದಿಪಾಲಾಗಿದ್ದಾರೆ, ಅದನ್ನು ಯಾವ ರೀತಿಯಾಗಿ ಸರಿಪಡಿಸಬೇಕು ಎನ್ನುವುದರ ಬಗ್ಗೆ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹೊಗೆ ಸೊಪ್ಪು ಬೆಳೆಯತಕ್ಕಂಥ ರೈತರು, ನಮ್ಮ ತಾಲ್ಲೂಕಿನಲ್ಲಿ ಒಂದು ಎಕರೆಗೆ 20 ರಿಂದ 25 ಸಾವಿರ ರೂಪಾಯಿಗಳನ್ನು ಸಾಲವನ್ನಾಗಿ ಮಾಡಿದ್ದಾರೆ. ಇದು ಕಮರ್ಷಿಯಲ್ ಕ್ರಾಪ್, ಬ್ಯಾಂಕಿನಿಂದ ಸಾಲವನ್ನು ಮಾಡಿ ಇವತ್ತು ಅವರು ನಾಟಿ ಮಾಡಿದ್ದಾರೆ. ಇವತ್ತು ಮಳೆ ಇಲ್ಲದೆ ಅದು ಒಣಗುತ್ತದೆ. ಇದಕ್ಕೆ ಏನು ಪರಿಹಾರ, ಇದಕ್ಕೆ ಬೆಳೆ ವಿಮೆ ಅನುಸರಿಸುತ್ತಿಲ್ಲ. ಕೇಂದ್ರ ಸರ್ಕಾರದ ನೀತಿ ಈ ಬೆಳೆ ವಿಮೆ ಬಗ್ಗೆ ಸರಿಯಾದ ರೀತಿಯಲ್ಲಿ ಮಾಡಿರುವುದಿಲ್ಲ. ಕೆಲವು ಬೆಳೆಗಳಿಗೆ ಕವರ್ ಮಾಡಿದ್ದಾರೆ, ಕೆಲವು

ಬೆಳೆಗಳಿಗೆ ಕವರ್ ಮಾಡಿರುವುದಿಲ್ಲ. ಭತ್ತ ಮತ್ತು ರಾಗಿಯನ್ನು ಬಿಟ್ಟರೆ, ಹೊಗೆ ಸೊಪ್ಪು ಅಥವಾ ಸುಂಟಿಯನ್ನು ಅವರು ಕವರ ಮಾಡಿಲ್ಲ. ಇದರ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆಗೆ ವ್ಯವಹರಿಸಿ ಇದನ್ನು ಸರಿಯಾದ ರೀತಿಯಲ್ಲಿ ಮಾಡಿಕೊಳ್ಳಬೇಕು. ಕಾಫಿ ಇನ್‌ಶ್ಯೂರೆನ್ಸ್ ರೈತರಿಗೆ ಒಂದು ರೂಪಾಯಿ ಕೂಡ ಇವತ್ತಿನವರೆಗೆ ಸಿಕ್ಕಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಕಾಫಿ ಇನ್‌ಶ್ಯೂರೆನ್ಸ್‌ಗೆ ರೈತ ಮಾಡಿದ್ದು ಅದಕ್ಕೆ ಪರಿಹಾರ ಸಿಕ್ಕಿಲ್ಲ. ಇದು ಬರೀ ಪೇಪರದಲ್ಲಿ ಹಾಗೂ ಬ್ಯಾಂಕಿನಲ್ಲಿದೆ, ಹಣ ಕೂಡ ಬ್ಯಾಂಕಿನಲ್ಲಿದೆ. ಹಾಗಾದರೆ ಏನು ಪ್ರಯೋಜನ, ನಾವು ಜನರಲ್ ಇನ್‌ಶ್ಯೂರೆನ್ಸ್ ಮಾಡಿಸುತ್ತೇವೆ, ಮನುಷ್ಯರಿಗೆ ಇನ್‌ಶ್ಯೂರೆನ್ಸ್ ಮಾಡಿಸುತ್ತೇವೆ, ನಮಗೆ ಕಾಯಿಲೆ ಆದರೆ ಇನ್‌ಶ್ಯೂರೆನ್ಸ್ ಅಪ್ಲೈ ಆಗುತ್ತದೆ. ಅದೇ ರೀತಿಯಾಗಿ ಇಂಡಿವಿಜುವಲ್ ಫಾರ್ಮರ್ಸ್‌ಗೆ ಕೂಡ ಎಲ್ಲಾ ಬೆಳೆಗಳಿಗೆ ಕೂಡ ಇವತ್ತು ಇನ್‌ಶ್ಯೂರೆನ್ಸ್ ಕವರ್ ಆಗಬೇಕು. ರೈತರು ಕಟ್ಟುವ ಕಂತಿನ ಹಣವನ್ನು ರಾಜ್ಯ ಸರ್ಕಾರ ಭರಿಸಬೇಕು. ಇನ್‌ಶ್ಯೂರೆನ್ಸ್ ಮಾಡಿಸುವಾಗ ಹಣ ಕಟ್ಟಬೇಕಾಗುತ್ತದೆ ಇದನ್ನು ರಾಜ್ಯ ಸರ್ಕಾರ ಕಟ್ಟಬೇಕು. ಏಕೆಂದರೆ ಇವತ್ತು ಪರಿಹಾರ ಸಿಗುವುದು ಇನ್‌ಶ್ಯೂರೆನ್ಸ್ ಕಂಪನಿಯಿಂದ, ಅದನ್ನು ಎಷ್ಟೋ ಜನರು ಮಾಡಿರುವುದಿಲ್ಲ, ಸಾಲವನ್ನು ಮಾಡಿರುವ ರೈತರು ಮಾತ್ರ ಇನ್‌ಶ್ಯೂರೆನ್ಸ್ ಮಾಡಿಸಿರುತ್ತಾರೆ. ಆದ್ದರಿಂದ ಇನ್‌ಶ್ಯೂರೆನ್ಸ್ ಕಂಪಲ್ಸರಿಯಾಗಬೇಕು. ಸಣ್ಣ ರೈತರು ಹಾಗೂ ಅತೀ ಸಣ್ಣ ರೈತರಿಗೆ ಇನ್‌ಶ್ಯೂರೆನ್ಸ್ ಕಂತಿನ ಹಣವನ್ನು ಭರಿಸಬೇಕು. ಇದರ ಬಗ್ಗೆ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಮತ್ತೆ ಬಹಳ ಮುಖ್ಯವಂಥದ್ದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಬ್ಯಾಂಕ್‌ಗಳಲ್ಲಿ ಸಾಲವನ್ನು ಮಾಡತಕ್ಕಂಥ ರೈತ, ತನ್ನ ಜಮೀನನ್ನು ರಿಜಿಸ್ಟ್ರೇಶನ್ ಮಾಡತಕ್ಕಂಥ ಸಂದರ್ಭದಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋದರೆ ಜೂನ್ 7ನೇ ತಾರೀಖಿನವರೆಗೆ ಒಂದು ಸಾವಿರ ರೂಪಾಯಿಗಳಿಗೆ ಕೇವಲ 20 ರೂಪಾಯಿಗಳನ್ನು ಮಾತ್ರ ಚಾರ್ಜ್ ಮಾಡುತ್ತಿದ್ದರು. ಜೂನ್ 7ನೇ ತಾರೀಖಿನ ಆಚೆಗೆ ಒಂದು ಸಾವಿರ ರೂಪಾಯಿಗೆ 80 ರೂಪಾಯಿಗಳ ರಿಜಿಸ್ಟ್ರೇಶನ್ ಚಾರ್ಜ್ ತೆಗೆದುಕೊಳ್ಳುತ್ತಾರೆ. ಅದಕ್ಕೆ ಅವರು ಒಂದು ಕಾರಣವನ್ನು ಹೇಳುತ್ತಾರೆ, ಪ್ರತಿವರ್ಷ ರಿನಿವಲ್ ಆಗುತ್ತಿತ್ತು, ಈ ವರ್ಷ ಬಂದಿಲ್ಲ. ಅದರ ಬಗ್ಗೆ ಕೂಡಲೇ ಕ್ರಮವನ್ನು ತೆಗೆದುಕೊಂಡು ಸಾಲವನ್ನು ಪಡೆಯತಕ್ಕಂಥ ರೈತನಿಗೆ ರಿಜಿಸ್ಟ್ರೇಶನ್ ಚಾರ್ಜ್ ಕಡಿಮೆ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ರೈತ ಪಡೆದಂಥ ಸಾಲವನ್ನು ಇಂತಹ ಒಂದು ಸಂದರ್ಭದಲ್ಲಿ, ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾಡಬೇಕು, ಮಳೆ ಏನಾದರೂ ಬಂದರೆ, ಹಿಂಗಾರು ಬೆಳೆಯನ್ನು ತೆಗೆದುಕೊಳ್ಳುವುದಕ್ಕೆ ಹೊಸದಾಗಿ ರೈತರು ಸಾಲವನ್ನು ತೆಗೆದುಕೊಳ್ಳುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಹೂಳು ತೆಗೆಯುವಂಥ ಕಾರ್ಯಕ್ರಮ ಏನಿದೆ, ಅದನ್ನು ಜಾರಿಗೆ ತರಬೇಕು. ಇದು ಲಾಂಗ್‌ಟರ್ಮ್ ಪ್ರೋಸೆಸನ್, ಇದನ್ನು ಮಾಡದಿರುವುದರಿಂದ ಕೆರೆಗಳಲ್ಲಿ ಹೂಳು ತುಂಬಿ, ಇವೊತ್ತು ನಮ್ಮ ಅಂತರ್ಜಲ ಕಡಿಮೆಯಾಗಿದೆ. ಅಂತರ್ಜಲವನ್ನು ಜಾಸ್ತಿ ಮಾಡಿಕೊಳ್ಳುವ ಒಂದು ಕೆಲಸವನ್ನು ಸರ್ಕಾರ ಮಾಡಬೇಕು. ಇದರಲ್ಲಿ ಕೇಂದ್ರ ಸರ್ಕಾರ ಭಾಗಿಯಾಗಬೇಕು, ಇದರಲ್ಲಿ ಏನಾಗಿದೆ ಎಂದರೆ, ನಾವು ಪೇಪರ್‌ನಲ್ಲಿ ಓದಿದ್ದೇವೆ. ಕರ್ನಾಟಕ ರಾಜ್ಯದಲ್ಲಿರುವ ಕೆರೆಗಳ ಹೂಳನ್ನು ತೆಗೆಯಬಾರದು ಎಂದು ತಮಿಳುನಾಡು ಸರ್ಕಾರ ಎಚ್ಚರಿಕೆಯನ್ನು ಕೊಡುತ್ತಿದೆ. ನಮಗೆ ಎಚ್ಚರಿಕೆಯನ್ನು ಕೊಡುವುದಕ್ಕೆ ಅವರಿಗೆ ಏನು ಅಧಿಕಾರ ಇದೆ? ಕೇಂದ್ರ ಸರ್ಕಾರ

ಇವೊತ್ತು ಮಲತಾಯಿ ಧೋರಣೆಯನ್ನು ಮಾಡಿ, ಕರ್ನಾಟಕದಲ್ಲಿರುವ ಕೆರೆಗಳ ಹೂಳನ್ನು ಎತ್ತಬಾರದೆಂದಾಗ ನಮ್ಮ ರೈತರು ಎಲ್ಲಿಗೆ ಹೋಗಬೇಕು. ಭಾರತದಲ್ಲಿರುವ ಎಲ್ಲಾ ರೈತರು ಯಾವ ರಾಜ್ಯದಲ್ಲಿದ್ದರು ಅವರು ರೈತರೆ. ಇವತ್ತು ತಮಿಳುನಾಡಿನವರು ನಮ್ಮ ರಾಜ್ಯದಲ್ಲಿರುವ ಕೆರೆಗಳ ಹೂಳನ್ನು ಎತ್ತುವುದು ಸರಿಯಲ್ಲವೆನ್ನುವುದನ್ನು ಈ ಸಭೆ ಖಂಡಿಸಬೇಕು. ನಾವು ಯೂನಾನಿಮೆಸ್ ಆಗಿ ಒಂದು ರೆಸ್‌ಲ್ಯೂಷನ್ ಪಾಸ್ ಮಾಡಬೇಕು. It is our right ನಮ್ಮ ಜಲ, ನಮ್ಮ ಭೂಮಿ ಆಗಿರುವುದರಿಂದ, ನಮ್ಮ ರೈತರನ್ನು ಅಭಿವೃದ್ಧಿಪಡಿಸಬೇಕು ಎನ್ನುವ ದೃಷ್ಟಿಯಿಂದ ಇದನ್ನು ಮಾಡುತ್ತೇವೆ ಎನ್ನುವ ಒಂದು ಸರ್ವಾನುಮತದ ತೀರ್ಮಾನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಶ್ರೀ ಹಾರ್‍ನಳ್ಳಿ ರಾಮಸ್ವಾಮಿಯವರ ರಿಪೋರ್ಟ್ ಬಹಳ ಚೆನ್ನಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಅದರ ಮೇಲೆ ಗೌರವನ್ನು ಇಟ್ಟು ಅದನ್ನು ಅನುಷ್ಠಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ರಿಪೋರ್ಟ್‌ನ್ನು ನಾವು ಯಥಾವತ್ತಾಗಿ ಅನುಸರಿಸಿದ್ದೇ ಆದರೆ, ಈ ಸರ್ಕಾರದಲ್ಲಿರುವ ಅನೇಕ ಸಮಸ್ಯೆಗಳು ಬಗೆಹರಿದು ಹೋಗುತ್ತವೆ. ಎಲ್ಲಾ ಸಮಸ್ಯೆಗಳಿಗೂ ಅದೊಂದು ದಾರಿದೀಪವಾಗಿದೆ. ಈ ರಿಪೋರ್ಟ್‌ನ್ನು ಯಥಾವತ್ತಾಗಿ ಜಾರಿಗೆ ತರಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಬೋರ್‌ವೆಲ್‌ಗಳನ್ನು ಹಾಕಬೇಡಿ ಎಂದು ಕೇಂದ್ರ ಸರ್ಕಾರದವರು ಹೇಳುತ್ತಾರೆ. ರಾಜ್ಯ ಸರ್ಕಾರದಲ್ಲಿ ಬರಗಾಲ ಬಂದಿದೆ, ಕುಡಿಯುವುದಕ್ಕೆ ನೀರು ಇಲ್ಲ, ಹಳ್ಳಿಗಳಲ್ಲಿರುವ ಬಾವಿಗಳು ಬತ್ತಿ ಹೋಗಿವೆ, ಇದರಲ್ಲಿ ನಾವು ಯಾವ ನೀತಿಯನ್ನು ಅನುಸರಿಸಬೇಕು. ಕೇಂದ್ರ ಸರ್ಕಾರದ ನೀತಿಯನ್ನು ಅನುಸರಿಸಬೇಕೇ? ಅಥವಾ ರಾಜ್ಯ ಸರ್ಕಾರದ ನೀತಿಯನ್ನು ನಾವು ಅನುಸರಿಸಬೇಕೇ? ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ನೀತಿಯನ್ನು ಬದಿಗೊತ್ತಿ ನಮ್ಮ ರಾಜ್ಯದ ರೈತರ ಹಾಗೂ ಕುಡಿಯುವ ನೀರಿನ ಸಮಸ್ಯೆಗೋಸ್ಕರ ಬೋರ್‌ವೆಲ್‌ಗಳನ್ನು ತುರ್ತಾಗಿ ತೆಗೆಯಬೇಕು. ಇದರ ಬಗ್ಗೆ ಹೆಚ್ಚಿನ ಒಂದು ಮಹತ್ವವನ್ನು ಕೊಡಬೇಕು. ಇವೊತ್ತು ಬಹಳ ಜನ ರೈತರು ತೊಂದರೆಯನ್ನು ಅನುಭವಿಸುತ್ತಿದ್ದಾರೆಂದು ಹೇಳುತ್ತಾ ಇದ್ದೀನಿ. ಇನ್ನು ಲೋಕಾಯುಕ್ತ ವಿಷಯದಲ್ಲಿ ಒಂದು ಮಾತು ಹೇಳಿ ನನ್ನ ಮಾತನ್ನು ನಿಲ್ಲಿಸುತ್ತೇನೆ. ಜಸ್ಟಿಸ್ ವೆಂಕಟಾಚಲಯ್ಯನವರು ಬಹಳ ಚೆನ್ನಾಗಿ ಕೆಲಸವನ್ನು ಮಾಡಿ, ಸಮಾಜದಲ್ಲಿ ಅವರು ಎಚ್ಚರಿಕೆಯ ಒಂದು ಗಂಟೆಯನ್ನು ಭಾರಿಸಿದ್ದಾರೆ. ಬರೀ ಬೆಂಗಳೂರು ಸುತ್ತಮುತ್ತಲೂ ಅಲ್ಲ, ಆಸ್ಪತ್ರೆಗಳಿಗೂ ಕೂಡ ಭೇಟಿಯನ್ನು ಕೊಟ್ಟಿದ್ದಾರೆ, ಅಲ್ಲಿರುವ ಲಂಚರುಷುವತ್ತುಗಳನ್ನು ಅವ್ಯವಹಾರಗಳನ್ನು ಬದಿಗೊತ್ತಿದ್ದಾರೆ. ಸರ್ಕಾರಕ್ಕೆ ಸಂಬಂಧಪಟ್ಟ ಪ್ರತಿಯೊಬ್ಬ ಮಂತ್ರಿ ಕೂಡ ಶ್ರೀ ವೆಂಕಟಚಲಯ್ಯವರಾಗಬೇಕು, ಮಂತ್ರಿಗಳು ಅನಿರೀಕ್ಷಿತವಾಗಿ ಭೇಟಿ ಕೊಟ್ಟು ಭ್ರಷ್ಟಾಚಾರವನ್ನು ಮೂಲತಹಃ ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಲೋಕಾಯುಕ್ತಕ್ಕೆ ಪವರ್ಸ್ ಕೊಟ್ಟು ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ, ಅದೇ ರೀತಿ ಎಲ್ಲಾ ಇಲಾಖೆಗಳಲ್ಲಿ ಕೂಡ ಇರತಕ್ಕಂಥ ಮಂತ್ರಿಗಳಿಗೆ ಹಾಗೂ ಅಧಿಕಾರಿಗಳಿಗೆ ಅಧಿಕಾರವನ್ನು ಉಪಯೋಗಿಸಿಕೊಂಡು ಕೆಲಸ ಮಾಡಿದರೆ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಗಿರಿಜನರ ಸಮಸ್ಯೆ ಬಗ್ಗೆ ಹೆಗ್ಗಡ ದೇವನಕೋಟೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಮಿನಿ ಕ್ಯಾಬಿನೆಟ್ ಮಾಡಿ ಗಿರಿಜನರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದರು. ಪೆರಿಯಾ ಪಟ್ಟಣದಲ್ಲಿ ಸುಮಾರು

600 ಮನೆಗಳನ್ನು ಕಟ್ಟಲು ಅವಕಾಶವನ್ನು ಕೊಟ್ಟಿದ್ದರೂ ಕೂಡ ಅಲ್ಲಿ 300 ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ ಕಾರಣ ಇಷ್ಟೇ ಕಾಡಿನ ಅಂಚಿನಲ್ಲಿರುವ ಗಿರಿಜನರಿಗೆ, ಹುಲ್ಲು ಗುಡಿಸಲು ಇದ್ದು, ಆ ಹುಲ್ಲು ತೆಗೆದು ಹೆಂಚು ಹಾಕಿ ಕೊಡುತ್ತೇವೆ ಎಂದರೂ ಕೂಡ ಅರಣ್ಯ ಇಲಾಖೆಯವರು ಅದಕ್ಕೆ ಅಡಚಣೆಯನ್ನು ಮಾಡುತ್ತಿದ್ದಾರೆ. ದಯಮಾಡಿ ಅರಣ್ಯ ಇಲಾಖೆಯವರನ್ನು ಸಂಪರ್ಕಿಸಿ ಅವರು ಈಗಾಗಲೇ ಕಾಡಿನಲ್ಲಿದ್ದಾರೆ. ಕೇವಲ 25 ಸಾವಿರ ರೂಪಾಯಿಗಳಲ್ಲಿ ಹುಲ್ಲು ತೆಗೆದು ಹೆಂಚು ಹಾಕಿ ಮನೆಕಟ್ಟಿ ಕೊಡಬೇಕೆಂದರೆ ಈ ಇಲಾಖೆಯವರು ಅಡ್ಡ ಬರುತ್ತಿದ್ದಾರೆ. ಈ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಕರಡಿಲಕ್ಕನಕೆರೆ ಏತನೀರಾವರಿ ಯೋಜನೆ, ಸುಮಾರು 90 ಕೋಟಿ ರೂಪಾಯಿಗಳ ಯೋಜನೆಯಾಗಿದ್ದು, ಇದು 1985 ರಿಂದ ನಡೆಯುತ್ತಿದೆ, ಕಳೆದ ಎರಡು ವರ್ಷಗಳಿಂದ ಈ ಸರ್ಕಾರ ಬಂದ ಮೇಲೆ ಸುಮಾರು 20ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇನ್ನು ಎರಡು ತಿಂಗಳಲ್ಲಿ ಆ ಯೋಜನೆ ಮುಗಿಯಬೇಕು. ಕೆಪಿಟಿಸಿಎಲ್ ನವರಿಗೆ ಅರಣ್ಯ ಇಲಾಖೆಯವರು ಐದು ಎಕರೆ ಜಮೀನಿನಲ್ಲಿ 4 ಕಂಬಗಳನ್ನು ಹಾಕಲು ಅಡಚಣೆ ಮಾಡುತ್ತಿದ್ದು, ಇದರ ಬಗ್ಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಮಧ್ಯೆ ಪತ್ರವ್ಯವಹಾರ ನಡೆಯುತ್ತಿದೆ. ಇದನ್ನು ಕೂಡಲೇ ಬಗೆಹರಿಸಿ ಕೊಟ್ಟರೆ ಇನ್ನು ಎರಡು ತಿಂಗಳಲ್ಲಿ ಸುಮಾರು 20 ಸಾವಿರ ಎಕರೆ ಜಮೀನುಗಳಿಗೆ ನೀರಾವರಿಯಾಗುತ್ತದೆ. ಅದರ ಬಗ್ಗೆ ಕಾಳಜಿ ವಹಿಸಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಜೇಂದ್ರ ವರ್ಮ (ಹೂಲಸೂರು) : ಮಾನ್ಯ ಅಧ್ಯಕ್ಷರೆ, ಅನೇಕ ಜನ ಶಾಸಕರು ಹಾಗೂ ಧುರೀಣರು ಈ ಬರಗಾಲದ ಬಗ್ಗೆ, ರೈತರ ಬಗ್ಗೆ ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಈಗಾಗಲೇ ಮಾತನಾಡಿದ್ದಾರೆ. ನಾನು ಜಾಸ್ತಿ ಸಮಯವನ್ನು ಹಾಳು ಮಾಡದೆ, ಕೆಲವೊಂದು ವಿಷಯಗಳನ್ನು ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲು ನಾನು ಇಷ್ಟಪಡುತ್ತೇನೆ. ರಾಜ್ಯದಲ್ಲಿ ಕಳೆದ ವರ್ಷ ಮಳೆ ಬಂದು ಬೆಳೆ ನಾಶವಾಯಿತು. ಈ ವರ್ಷ ಮಳೆ ಬಾರದೆ ಬೆಳೆ ನಾಶವಾಗುವಂಥ ಸಂದರ್ಭ ಈ ರಾಜ್ಯದಲ್ಲಿ ಇವತ್ತು ಬಂದೊದಗಿದೆ. ರಾಜ್ಯದ ರೈತ ಮನೆಯಿಂದ ಹೊರಗೆ ಬಂದ ಕೂಡಲೇ ಆಕಾಶದ ಕಡೆಗೆ ನೋಡುತ್ತಿದ್ದಾನೆ. ತಮ್ಮ ಮಗುವನ್ನು ಯಾವ ರೀತಿಯಾಗಿ ರೈತ ಸಾಕುತ್ತಾನೆ ಅದೇ ರೀತಿ ಅವನು ಬೆಳೆಗಳನ್ನು ಸಾಕುವುದಕ್ಕೆ ಹೊಲಗದ್ದೆಗಳಿಗೆ ಹೋಗಿ ಬಿತ್ತಿ ಗೊಬ್ಬರ ಹಾಕಿ, ಅದಕ್ಕೆ ಪೋಷಣೆ ಪಾಲನೆಯನ್ನು ಅನೇಕ ರೂಪದಲ್ಲಿ ಮಾಡಿ ರೈತ ನೋಡುತ್ತಿದ್ದಾನೆ. ಆದರೆ ಮಳೆಬಾರದೆ ಇವತ್ತು ರೈತ ಬಹಳ ಸಂಕಷ್ಟಕ್ಕೆ ಈಡಾಗಿದ್ದಾನೆ. ಸದನದಲ್ಲಿ ಅನೇಕ ರೂಪದಲ್ಲಿ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ. ಅನುಭವವುಳ್ಳ ರಾಜಕೀಯ ಧುರೀಣರಿದ್ದಾರೆ. ಚರ್ಚೆ ಮಾಡಿದ ನಂತರ ಅದನ್ನು ಯಾವ ರೀತಿಯ ಗಣನೆಗೆ ತೆಗೆದುಕೊಳ್ಳಬೇಕು ಎನ್ನುವುದು ಸರ್ಕಾರಕ್ಕೆ ಬಿಟ್ಟ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ರೈತರ ಸಂಕಷ್ಟಕ್ಕೆ ಒಂದು ಆತಂಕವನ್ನು ವ್ಯಕ್ತಪಡಿಸುತ್ತಾರೆ, ನಿನ್ನೆ ಸದನ ಬಿಟ್ಟು ಹೋಗುವ ಸಮಯದಲ್ಲಿ ಕೂಡ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ನೋಡಿದೆ, ಅವರ ಗಮನ ಆಕಾಶದ ಕಡೆಗೆ ಇತ್ತು. ಅದರ ಅರ್ಥವೇನೆಂದರೆ, ದೇವರೇ ಈ ರಾಜ್ಯದೊಳಗೆ ಯಾವಾಗ ಮಳೆಯನ್ನು ಕೊಡುತ್ತೀಯಾ? ರೈತರಿಗೆ ಸಾಕಷ್ಟು ಬಿತ್ತಿದ ಬೆಳೆಗೆ ಮಳೆ ಬೇಕು, ಕುಡಿಯುವುದಕ್ಕೆ ನೀರು ಬೇಕು. ರಾಜ್ಯದ ಜನರಿಗೆ

ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ಅವರ ದೃಷ್ಟಿ ಆಕಾಶದ ಕಡೆ ನಿನ್ನೆ ಹೋಗಿತ್ತು. ಆ ದೇವರು ನಮ್ಮ ರಾಜ್ಯದ ಮೇಲೆ ಇನ್ನೂ ಒಲಿಯುತ್ತಿಲ್ಲ. ನಾನು ಅನೇಕ ಸಂದರ್ಭದಲ್ಲಿ ಅನೇಕ ಮಾತುಗಳನ್ನು ಆಡುತ್ತೇವೆ. ಚುನಾವಣೆಗಳ ಸಂದರ್ಭದಲ್ಲಿ ಈ ನಾಡಿನ ರೈತ, ನಮಗೆ ಅನ್ನುವನ್ನು ಕೊಡುವ ರೈತ ನಾವು ಅವನಿಗೆ ಸಹಾಯ ಮಾಡಬೇಕು. ಅವನಿಗೆ ಸಹಾಯ ಮಾಡಬೇಕೆಂದು ಮಾತುಗಳನ್ನು ಚುನಾವಣೆಯ ಸಂದರ್ಭದಲ್ಲಿ ಹೇಳುತ್ತೇವೆ. ನಿಜವಾಗಲೂ ರೈತ ಸಂಕಷ್ಟಕ್ಕೆ ಒಳಗಾದಾಗ ನಾವು ಯಾರೂ ಕೂಡ ರೈತನಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ರೈತನಿಗೆ ನಾವು ವರ್ಣನೆ ಮಾಡುತ್ತೇವೆಯೇ ಹೊರತಾಗಿ, ರೈತ ಇವತ್ತು ಎಷ್ಟು ಕಂಗಾಲಾಗಿದ್ದಾನೆಂದು ನೋಡಬೇಕಾದರೆ ಹಳ್ಳಿಗಳಿಗೆ ಹೋಗಬೇಕು. ಬೆಂಗಳೂರಿನಲ್ಲಿ ಏಸಿ ರೂಮಗಳಲ್ಲಿ ಕುಳಿತುಕೊಂಡು ಟಿಎ. ಡಿಎ ತೆಗೆದುಕೊಂಡು ಹೋಗುವುದರಿಂದ ನಮಗೆ ರೈತನ ನಿಜವಾದ ಸಂಕಷ್ಟ ನಮ್ಮ ಕಣ್ಣಿಗೆ ಬೀಳಲಾರದೆ ಹೋಗುತ್ತದೆ. ಇವತ್ತು ರೈತ ಕಂಗಾಲಾಗಿದ್ದಾನೆ. ರೈತ ಇವತ್ತು ನಮಗೆ ಅನ್ನ ಹಾಕುತ್ತಾನೆ. ರೈತ ರಾಷ್ಟ್ರಕ್ಕೆ ಬೆನ್ನೆಲುಬು. ರೈತ ದುಡಿಯಲಿಕ್ಕೆ ತನ್ನ ಬೆವರನ್ನು ಸುರಿಸುತ್ತಾನೆ. ಆ ರೈತನ ಪರಿಸ್ಥಿತಿ ಬಹಳ ನಾಚಿಕೆಯ ಪರಿಸ್ಥಿತಿಗೆ ಬಂದಿದೆ. ಅದಕ್ಕಾಗಿ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಯಾವ ರೈತ ಸಂಕಷ್ಟದಲ್ಲಿದ್ದಾನೆ ಆತನ ಸಂಕಷ್ಟವನ್ನು ದೂರ ಮಾಡುವ ದೃಷ್ಟಿಯಿಂದ ನಾವು ಆತನಿಗೆ ಆಶ್ರಯವನ್ನು ಕೊಟ್ಟಾಗ ಮಾತ್ರ ನಾವು ಚುನಾವಣೆಯ ಸಂದರ್ಭದಲ್ಲಿ ಮತ್ತೆ ಯಾವುದೋ ಸಂದರ್ಭದಲ್ಲಿ ಮಾತನಾಡಿದ್ದು ಸಾರ್ಥಕವಾಗುತ್ತದೆ. ನಿಜವಾಗಿಯೂ ಇವತ್ತು ಹೇಳಬೇಕಾದರೆ ಜಾನುವಾರುಗಳಿಗೆ ಮೇವು ಇಲ್ಲ. ಮನುಷ್ಯರಿಗೆ ಕುಡಿಯಲಿಕ್ಕೆ ನೀರಿಲ್ಲ. ಇವತ್ತು ರೈತ ಹೊರರಾಜ್ಯಗಳಿಗೆ ಹೋಗಿ ಭಿಕ್ಷೆ ಬೇಡುವ ಸಂದರ್ಭ ಬರುತ್ತಿದೆ. ಇವತ್ತಿನಿಂದ ನಾಲ್ಕು ದಿವಸದೊಳಗೆ ಮಳೆ ಬಾರದೆ ಇದ್ದರೆ ನಾವು ಪಾಲಾಗುತ್ತೇವೆ. ಮುಂದಿನ ದಿವಸಗಳಲ್ಲಿ ಬಹಳಷ್ಟು ಗಂಡಾಂತರವನ್ನು ಎದುರಿಸಬೇಕಾಗುತ್ತದೆ. ನಾನು ಸದನದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಮ್ಮ ಹೈದರಾಬಾದ್ ಕರ್ನಾಟಕ ಅತಿ ಹಿಂದುಳಿದ ಪ್ರದೇಶ. ಬೀದರ್ ಜಿಲ್ಲೆಯೊಳಗೆ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಆ ಭಾಗದ ರೈತರ ಕಣ್ಮಣಿಯಾಗಿರುವಂತಹದ್ದು. ಈವೊಂದು ಸಹಕಾರ ಸಕ್ಕರೆ 2001ರಿಂದ ರೈತರು ಕಬ್ಬು ಹಾಕುತ್ತಾ ಬಂದು, ರೈತರು ಕೊಡುವಂತಹ ಸಾಲವನ್ನು ಕೊಡಬೇಕೆಂದು ಫ್ಯಾಕ್ಟರಿಯವರು ಕಳುಹಿಸಿದ್ದಾರೆ. ಇವತ್ತು ಆಡಳಿತ ಮಂಡಳಿಯಲ್ಲಿ ಕಾಂಗ್ರೆಸ್‌ನವರು ಇದ್ದಾರೆ. ಸರ್ಕಾರ ಕೂಡ ಕಾಂಗ್ರೆಸ್ ಪಕ್ಷದ್ದು ಇದೆ. ಅಲ್ಲಿನ ಡೈರೆಕ್ಟರ್ ಮತ್ತು ಛೇರ್ಮನ್‌ರೂ ಕೂಡ ಜಿಲ್ಲಾ ಉಸ್ತುವಾರಿ ಸಚಿವರು ನಮ್ಮ ಜಿಲ್ಲೆಯವರೇ ಆಗಿದ್ದಾರೆ. ಅವರು ಬಹಳ ಕಾಳಜಿ ಪೂರಕವಾಗಿ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ನಮ್ಮ ರೈತರಿಗೆ ಬರಬೇಕಾದ ಬಾಕಿ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಸುಭಾಷ್ ಕಲ್ಲೂರ್‌ರವರು ಬಹಳಷ್ಟು ಸಂಕ್ಷಿಪ್ತವಾಗಿ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ಆ ಪ್ರಕಾರ ನಾವು ನೋಡುವುದಾದರೆ ಸುಮಾರು 9 ಕೋಟಿ ರೂಪಾಯಿ ಘುಗರ್ ಫ್ಯಾಕ್ಟರಿ ವತಿಯಿಂದ ರೈತರಿಗೆ ಕೊಡುವಂತಹದ್ದು ಬಾಕಿಯಿದೆ. ಕೊನೆಯ ಪಕ್ಷ ರೈತರು ಸಂಕಷ್ಟದಲ್ಲಿದ್ದಾರೆ ಇಂತಹ ಒಂದು ಸಂದರ್ಭದಲ್ಲಿ ಸಹಕಾರ ಸಕ್ಕರೆ ಕಾರ್ಖಾನೆಯ ಮಂಡಳಿಯವರು ಆ ಕೊಡುವಂತಹ ಬಾಕಿ ಹಣವನ್ನು ಕೊಟ್ಟಿದ್ದರೆ ಬಹಳ ಒಳ್ಳೆಯದಾಗುತ್ತದೆಂದು ನಾನು ಈ ಸದನ ಮೂಲಕ ಅವರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಆ ಘುಗರ್ ಫ್ಯಾಕ್ಟರಿಯಲ್ಲಿ ಬಹಳಷ್ಟು ಖರ್ಚು ಮಾಡುತ್ತಿದ್ದರು.

ಆ ಖರ್ಚನ್ನು ಏಕೆ ಮಾಡುತ್ತೀರಿ ಎಂದು ನಾನು ಕೇಳುವುದಕ್ಕೆ ಹೋಗುವುದಿಲ್ಲ. ಒಂದು ಜೆರಾಕ್ಸ್ ಕಾಪಿ ಮಾಡಿಸಲಿಕ್ಕೆ ಎಂಟಾಣೆ ರೊಕ್ಕ ಖರ್ಚು ಆಗುತ್ತಿತ್ತು. ಆ ಜೆರಾಕ್ಸ್ ಕಾಪಿ ಮಾಡಿಸ ಲೆಕ್ಕ ಬೀದರ್‌ಗೆ ಕಳುಹಿಸುತ್ತಿದ್ದರು ಹಿಂದೆ ಮುರ್ನಾಲ್ಕು ವರ್ಷಗಳ ಕೆಳಗೆ ಅದನ್ನು ನಾವು ಆಡಳಿತ ಮಂಡಳಿಯವರಿಗೆ ಹೇಳಿ ಇವತ್ತು ಅಲ್ಲಿ ಜೆರಾಕ್ಸ್ ಮೆಷಿನ್ ಇಟ್ಟುಕೊಂಡಿದ್ದಾರೆ. ಇಂತಹದ್ದು ಅನೇಕ ರೂಪದಲ್ಲಿ ಖರ್ಚಾಗುವಂತಹದ್ದನ್ನು ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ತಡೆದು ಅನುಕೂಲ ಮಾಡಲಾಗಿದೆ. ಅಲ್ಲಿನ ಜನರಿಗೆ ಆಸೆರೆಯಾಗಬೇಕೆನ್ನುವ ದೃಷ್ಟಿಯಿಂದ ಸದನದ ಮೂಲಕ ಅವರ ಗಮನಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈಗಾಗಲೇ ಸಾಕಷ್ಟು ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಮಯ 6.35 ಗಂಟೆಯಾಗಿದೆ. ಈಗ ಉತ್ತರ ಕೊಡಬೇಕೆಂದರೆ ಒಂದೆರಡು ಗಂಟೆಯಾಗುತ್ತದೆ. ತಮ್ಮೆಲ್ಲರ ಒಪ್ಪಿಗೆ ಇದ್ದರೆ, ಉತ್ತರ ಕೊಡುವುದನ್ನು ನಾಳೆಗೆ ಇಟ್ಟುಕೊಳ್ಳಬಹುದು. ಅಂದಾಜು ಇದೆ. ಇದು ಆಗಬಹುದು ತಾನೆ? ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡುತ್ತಿದ್ದೇನೆ.

6. ಅನುಬಂಧ 1

ಮುಲ್ಕಿ ಹೋಬಳಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು

42 (80) - ಶ್ರೀ ಅಭಯಚಂದ್ರ (ಮೂಡಬಿದ್ರೆ) : ಮಾನ್ಯ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಹೋಬಳಿಯ 20 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸಂಕಲಕರಿಯದಿಂದ ನೀರು ಸರಬರಾಜು ಯೋಜನೆ ಯಾವ ಹಂತದಲ್ಲಿದೆ?

ಆ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ಸಚಿವರು) :

ಅ) ಈ ಯೋಜನೆಗೆ ರೂ. 8.10 ಕೋಟಿ ಮೊತ್ತದ ರೇಖಾ ಅಂದಾಜನ್ನು ತಯಾರಿಸಲಾಗಿದೆ.

ಆ) ಈ ಯೋಜನೆಯ ತಾಂತ್ರಿಕ : ಆರ್ಥಿಕ ಕಾರ್ಯ ಸಾಧ್ಯತ್ವವನ್ನು ಪರಿಶೀಲಿಸಲಾಗುತ್ತಿದೆ.

ಮಡಿಕೇರಿಯಲ್ಲಿರುವ ಪ್ರಸಿದ್ಧ ಐತಿಹಾಸಿಕ ಗದ್ದುಗೆಯ ಜಾಗವನ್ನು ಪಾರ್ಕ ನಿರ್ಮಾಣ ಮಾಡುವ ಬಗ್ಗೆ

44 (94) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಿಕೇರಿಯಲ್ಲಿರುವ ಪ್ರಸಿದ್ದ ಐತಿಹಾಸಿಕ ಗದ್ದಿಗೆಯ ಜಾಗವನ್ನು ಪಾರ್ಕ್ ನಿರ್ಮಿಸಿ ಅಭಿವೃದ್ಧಿಪಡಿಸಲು ಸರ್ಕಾರ ನಿರ್ಧರಿಸಿದೆಯೇ?